ಸಂಪುಟ: 06 ಸಂಚಿಕೆ: 39 ಪುಟಗಳು: 08 ಗುರುವಾರ 23 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು

ಸಿಟ್ಟು ಅಹಿಂಸೆಯ ವೈರಿ ಮತ್ತು ಹೆಮ್ಮೆ ಅದನ್ನು ನುಂಗಿ ಹಾಕುವ ದೈತ್ಯ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ವಿದೇಶಿ ಮಹಿಳೆ ಮೇಲೆ ಅತ್ಯಾಚಾರ: ಜಾರ್ಖಂಡ್ ಮೂಲದ ಆರೋಪಿಗಳು ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ಕೊಡಗಿನ ಹೋಮ್‌ಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ಅತ್ಯಾಚಾರ ನಡೆದಿರುವ ಬಗ್ಗೆ ಪೊಲೀಸರಿಗೆ ಗೊತ್ತಾದ ತಕ್ಷಣ ಕ್ರಮ ತೆಗೆದುಕೊಂಡಿದ್ದಾರೆ ಎಂದು ಗೃಹ ಸಚಿವ ಪರಮೇಶ್ವರ ಅವರು ಹೇಳಿದರು. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಈಗಾಗಲೇ ಹೋಮ್‌ಸ್ಟೇಮ್‌ಗಳಿಗೆ ಸುತ್ತೋಲೆ ಹೊರಡಿಸಲಾಗಿದೆ. ಅದರ ಪ್ರಕಾರ ಹೋಮ್‌ಸ್ಟೇ ಮಾಲೀಕರು ನಡೆದುಕೊಳ್ಳಬೇಕು. ಯಾರು ಹೋಮ್ ಸ್ಟೇ ನಡೆಸುತ್ತಾರೆ, ಲೈಸೆನ್ಸ್ ಇದಿಯೇ ಹೋಮ್‌ಸ್ಟೇ ಮಾಡಲು ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಎಸ್‌ಒಪಿ ಕೊಟ್ಟಿರುತ್ತೇವೆ ಎಂದರು. ಅದನ್ನು ಮೀರಿ ಘಟನೆಗಳಾದಾಗ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೊಡಗಿನಲ್ಲಿ ನಡೆದ ಘಟನೆಯ ಬಗ್ಗೆ ಗೊತ್ತಾದ ತಕ್ಷಣ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ತಿಳಿಸಿದರು. ಇಂತಹ ಘಟನೆಗಳಿಂದ ರಾಜ್ಯಕ್ಕಾಗಲಿ ಅಥವಾ ಸಮಾಜಕ್ಕಾಗಲಿ ಒಳ್ಳೆಯ ಸಂದೇಶ ಕೊಡುವುದಿಲ್ಲ. ಹೊರಗಿನಿಂದ ಬಂದವರ ಮೇಲೆ ಇತರ ಆದಾಗ ಏನು ಸಂದೇಶ ಹೋಗುತ್ತೆ. ನಮ್ಮ ಸಮಾಜ, ದೇಶದ ಬಗ್ಗೆ ಹೊರಗಡೆ ಯಾವ ರೀತಿಯ ಸಂದೇಶ ಹೋಗುತ್ತದೆ. ಈ ವಿಚಾರದಲ್ಲಿ ಕಠಿಣವಾದ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಘಟನೆ ಆದ ಬಳಿಕ ಮುಚ್ಚಿಹಾಕಲು ಪ್ರಯತ್ನಿಸಿದ್ದಾರೆ ಅನ್ನಿಸುತ್ತದೆ. ಪೊಲೀಸರಿಗೆ ಗೊತ್ತಾದ ತಕ್ಷಣ ವಶಕ್ಕೆ ಪಡೆದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಆರೋಪಿ ಜಾರ್ಖಂಡ್ ಮೂಲದವನು ಎಂದು ಹೇಳಲಾಗುತ್ತಿದೆ. ಪರಿಶೀಲನೆ ಮಾಡುತ್ತಾರೆ ಎಂದು ಹೇಳಿದರು.

**ಏನಿದು ಘಟನೆ:** ಕೊಡಗು ಜಿಲ್ಲೆಯ ಕೇರಳದ ಗಡಿಭಾಗದಲ್ಲಿ ಅಮೆರಿಕಾ ಮೂಲದ ಮಹಿಳೆಯ ಮೇಲೆ ಅತ್ಯಾಚಾರ





ಎಸಗಲಾಗಿದೆ. ಮಹಿಳೆಗೆ ಜ್ಯೂಸ್‌ನಲ್ಲಿ ಮತ್ತು ಬರುವ ಔಷಧಿ ನೀಡಿ ಅತ್ಯಾಚಾರ ಎಸಗಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರ್ಖಂಡ್ ಮೂಲದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ. ಅಲ್ಲದೆ. ಹೋಂಸ್ಟೇ ಮಾಲೀಕ ವಿಶಾಲ್ ಬಂಧನವೂ ಆಗಿದೆ.

ಕೋರ್ಟ್‌ನಿಂದ ನೋಟಿಸ್ ಕೊಟ್ಟಿರಲಿಲ್ಲ. ನೋಟಿಸ್ ಬಂದಿದ್ದರೆ ಅರ್ಥೈಸಲಾಗುತ್ತಿತ್ತು. ಗಂಭಿರವಾಗಿ ಪರಿಗಣಿಸಬೇಡಿ ಎಂದು ಮನವರಿಕೆ ಮಾಡಲಾಗುತ್ತಿತ್ತು. ನೋಟಿಸ್ ಬಂದಿಲ್ಲ. ಏಕಾಏಕಿಯಾಗಿ ಆದೇಶ ಮಾಡಿದ್ದಾರೆ. ಕಾನೂನಿಗೆ ಗೌರವ ಕೊಡಬೇಕು, ಗೌರವಿಸುತ್ತೇನೆ ಎಂದು ಹೇಳಿದರು. ಸಚಿವ ಸಂಪುಟ ಪುನರ್ ರಚನೆ ವಿಚಾರ ಮುಖ್ಯಮಂತ್ರಿಗಳಿಗೆ ಮತ್ತು ಹೈಕಮಾಂಡ್‌ಗೆ ಬಿಟ್ಟಿರುವುದು. ನಾವು ಹೇಳಿದರೆ ಅಪ್ರಸ್ತುತವಾಗುತ್ತದೆ ಎಂದರು.

### ಬೆಟ್ಟಿಂಗ್ ಪ್ರಮೋಟ್ ಮಾಡಿಲ್ಲ

ಬೆಟ್ಟಿಂಗ್ ಕುರಿತಂತೆ ಕೋರ್ಟ್ ಆದೇಶದ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ. ಕಬ್ಬಡಿ ಆಟ ನಡೆಯುವಾಗ ಹಳ್ಳಿಯಲ್ಲಿ ಎಲ್ಲರು ಮಾತಾಡುವ ಹಾಗೆ ನಾನು ಹೇಳಿದ್ದೇನೆ. ಕಾನೂನು ದೃಷ್ಟಿಯಿಂದ ಅದು ತಪ್ಪು. ಆದರೆ ನಾನು ಯಾವ ರೀತಿ ಹೇಳಿದ್ದೇನೆ ಎನ್ನುವುದು ಮುಖ್ಯವಾಗುತ್ತದೆ. ನಾನೇನಾದರೂ ಬೆಟ್ಟಿಂಗ್ ಪ್ರಮೋಟ್ ಮಾಡಿ ಎಂದು ಹೇಳಿದ್ದರೆ ಸರಿಯಲ್ಲ. ನಾನು ಒಬ್ಬ ಜವಾಬ್ದಾರಿ ಸ್ಥಾನದವನಾಗಿ, ಪ್ರಮೋಟ್ ಮಾಡ್ತೇನೆ ಎಂದರೆ ಶುದ್ಧ ಸುಳ್ಳು. ಅರ್ಥೈಸಿಕೊಳ್ಳುವುದರ ಮೇಲೆ ಹೋಗುತ್ತದೆ. ತಮಾಷೆನೂ ಮಾಡುವಂತಿಲ್ಲ ಎಂಬಂತಾಗಿದೆ. ನಾನು ಕಾನೂನನ್ನು ಗೌರವಿಸುವವನು. ಕಾನೂನು ರಕ್ಷಣೆ ಮಾಡುವ ಖಾತೆ ನಿಭಾಯಿಸುತ್ತಿದ್ದೇನೆ. ನಾನು ಕಾನೂನಿಗೆ ಗೌರವ ಕೊಡಬೇಕಲ್ಲವೇ ಕಾನೂನು ಏನು ಕ್ರಮ ತೆಗೆದುಕೊಳ್ಳುತ್ತದೆ, ಅದಕ್ಕೆ ಬಿಟ್ಟಿದ್ದೇನೆ ಎಂದರು.

## 140 ಕೋಟಿ ರೂ. ಜಿಎಸ್‌ಟಿ ವಂಚನೆ ಬಯಲಿಗೆ: ಸೂತ್ರಧಾರಿಯ ಸೆರೆ

• ಉದಯವಾಹಿನಿ, ಬೆಂಗಳೂರು

ಭಾರಿ ಅಂತಾರಾಜ್ಯ ನಕಲಿ ಇನ್ವಾಯ್ಸ್ ಹಗರಣವನ್ನು ಭೇದಿಸಿರುವ ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯ ದಕ್ಷಿಣ ವಲಯದ ಜಾರಿ ದಳ, ಈ ಹಗರಣದ ಸೂತ್ರಧಾರಿಯನ್ನು ಬಂಧಿಸಿದೆ. ಆದರೆ, ಆತನ ಪಾಲುದಾರ ವಿದೇಶದಲ್ಲಿ ತಲೆಮರೆಸಿಕೊಂಡಿದ್ದಾನೆ. ಈ ದಾಳಿಯ ಮೂಲಕ ಬಹುಕೋಟಿ ಆರ್ಥಿಕ ಅಪರಾಧವನ್ನು ಬಯಲಿಗೆಳೆದಿರುವ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು, ವಂಚಕ ಜಾಲವು 140 ಕೋಟಿ ರೂ. ಮೌಲ್ಯದ ನಕಲಿ ವಹಿವಾಟುಗಳನ್ನು ನಡೆಸಿತ್ತು. ಆ ಮೂಲಕ 102.5 ಕೋಟಿ ರೂ. ಮೊತ್ತದ ಇನ್ ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಂಡಿತ್ತು ಎಂದು ತಿಳಿಸಿದ್ದಾರೆ. ಈ ಜಾಲವು ವಿವಿಧ ಶೆಲ್ ಕಂಪನಿಗಳನ್ನು ಸ್ಥಾಪಿಸಿ, ಯಾವುದೇ ನೈಜ ಸರಕು ಪೂರೈಸದಿದ್ದರೂ ನಕಲಿ ಇನ್ವಾಯ್ಸ್‌ಗಳನ್ನು ವಿತರಿಸುತ್ತಿತ್ತು. ಬಳಿಕ, ಇದರ ಕ್ರೆಡಿಟ್ ಅನ್ನು ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತಮಿಳುನಾಡಿನಾದ್ಯಂತ ಇರುವ ವ್ಯಾಪಾರಿಗಳು ಹಾಗೂ ಗುತ್ತಿಗೆದಾರರು ದುರ್ಬಳಕೆ ಮಾಡಿಕೊಂಡು ಕಾನೂನುಬಾಹಿರವಾಗಿ ತೆರಿಗೆಯ ಹೊಣೆಗಾರಿಕೆಯನ್ನು ಕಡಿಮೆ ಮಾಡುತ್ತಿದ್ದರು ಎಂದು ಹೇಳಿದ್ದಾರೆ.

## ಚಿನ್ನ ಕಳ್ಳಸಾಗಣೆ ಪ್ರಕರಣ; ನಟಿ ರನ್ಯಾ ರಾವ್ ಜೈಲಿನಿಂದ ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಜೈಲಿನಲ್ಲಿದ್ದ ನಟಿ ರನ್ಯಾ ರಾವ್ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬುಧವಾರ ಬಿಡುಗಡೆಯಾಗಿದ್ದಾರೆ. ಏ.22ರ ಬುಧವಾರ ಸಂಜೆ ಪರಪ್ಪನ ಅಗ್ರಹಾರ ಜೈಲಿನಿಂದ ತಮ್ಮ ಪರ ವಕೀಲರ ಕಾರಿನಲ್ಲಿ ಜೈಲು ಆವರಣದಿಂದ ಮಾಧ್ಯಮ ಪ್ರತಿನಿಧಿಗಳ ಕಣ್ತಪ್ಪಿಸಿ ರನ್ಯಾ ರಾವ್ ಹೊರಬಂದಿದ್ದಾರೆ.ರನ್ಯಾ ರಾವ್ ವಿರುದ್ಧ ಹೇರಲಾಗಿದ್ದ ಕಠಿಣ ಕಾಫಿಪೋಸಾ ಕಾಯ್ದೆಯ ಒಂದು ವರ್ಷದ ಅವಧಿಯು ಏ.22ರಂದು ಪೂರ್ಣಗೊಂಡಿದೆ. ಈ ಹಿಂದೆಯೇ ನ್ಯಾಯಾಲಯವು ಅವರಿಗೆ ಜಾಮೀನು ನೀಡಿದ್ದರೂ, ಕಾಫಿಪೋಸಾ ಕಾಯ್ದೆಯಡಿ ಅವರು ಜೈಲಿನಲ್ಲೇ ಇರಬೇಕಾಗಿತ್ತು. 14.80 ಕೆ.ಜಿ. ಚಿನ್ನದ ಕಳ್ಳಸಾಗಣೆ ಮಾಡಿದ ಆರೋಪವನ್ನು ಎದುರಿಸುತ್ತಿರುವ ನಟಿ ರನ್ಯಾ ರಾವ್, 2025ರ ಮಾರ್ಚ್ ತಿಂಗಳಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಡಿಆರ್‌ಐ ಅಧಿಕಾರಿಗಳಿಂದ ಬಂಧನಕ್ಕೊಳಪಟ್ಟಿದ್ದರು. ಆರ್ಥಿಕ ಅಪರಾಧಗಳ ತಡೆ ನ್ಯಾಯಾಲಯವು ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

## ಬಸವಣ್ಣ ಸಮ ಸಮಾಜದ ನಿರ್ಮಾಣಕ್ಕಾಗಿ ದುಡಿದ ಮಹನೀಯ

• ಉದಯವಾಹಿನಿ, ಬೆಂಗಳೂರು

ಶರಣರು, ಸಂತರು ಹಾಗೂ ಬಸವೇಶ್ವರರು ಸಮಾನತೆಯ ಸಂದೇಶ ಸಾರಿದ ಪವಿತ್ರ ನಾಡು ಬೀದರ್ ಜಿಲ್ಲೆಯಾಗಿದೆ. ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು. ವಿಶ್ವಗುರು ಬಸವಣ್ಣ ಅವರ ನಾಡಿನಲ್ಲಿ ಬಸವಾದಿ ಶರಣರ ಆಶಯಗಳಂತೆ ಭಾಲ್ಕಿ ಹಿರೇಮಠ ಸೇವೆ ಸಲ್ಲಿಸುತ್ತಿದೆ ಎಂದರು. ಡಾ. ಬಸವಲಿಂಗ ಪಟ್ಟದೇವರು ಅನಾಥ ಮಕ್ಕಳಿಗೆ ಆಶ್ರಯ, ಗೌರವ ಮತ್ತು ಶಿಕ್ಷಣ ಒದಗಿಸುವ ಮೂಲಕ ಮಹತ್ತರ ಸೇವೆ ಸಲ್ಲಿಸಿದ್ದಾರೆ. 500ಕ್ಕೂ ಹೆಚ್ಚು ಮಕ್ಕಳಿಗೆ ಆಶ್ರಯ ನೀಡಿರುವುದರ ಜೊತೆಗೆ, 60ಕ್ಕೂ ಹೆಚ್ಚು ಸಂಸ್ಥೆಗಳು ಸ್ಥಾಪನೆಗೊಂಡು 20 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಮಲ್ಲಿಕಾರ್ಜುನ್ ಖರ್ಗೆಯವರು ಬಿಳಿ ಹಾಗೂ ಕಪ್ಪಾಗಿರುವವರ ಮಧ್ಯೆ ವ್ಯತ್ಯಾಸವಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಅವರು ಭಯೋತ್ಪಾದಕರು ಹಾಗೂ ಭಯೋತ್ಪಾದಕರಿಗೆ ಭಯ ಹುಟ್ಟಿಸುವವರ ಮಧ್ಯೆ ವ್ಯತ್ಯಾಸ ಮಾಡುವುದಿಲ್ಲ ಎಂದು ಖರ್ಗೆ ಅವರು ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಟೀಕಿಸಿರುವುದನ್ನು ಪರೋಕ್ಷವಾಗಿ ಪ್ರಸ್ತಾಪಿಸಿ ಅವರು ತಿರುಗೇಟು ನೀಡಿದರು.

# ಠುಸ್ ಪಟಾಕಿ ಟ್ರಂಪ್

## ಇರಾನ್-ಯುಎಸ್ ಸಂಘರ್ಷ ಕದನ ವಿರಾಮ ಅನಿರ್ಧಿಷ್ಟಾವಧಿಗೆ ವಿಸ್ತರಿಸಿದ ಟ್ರಂಪ್

• ಉದಯವಾಹಿನಿ, ಬೆಂಗಳೂರು

ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ಅಮೆರಿಕದ ವಿಶೇಷ ರಾಯಭಾರಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜೇರೆಡ್ ಕುಶ್ನರ್ ಇಸ್ಲಾಮಾಬಾದ್‌ಗೆ ಶಾಂತಿ ಒಪ್ಪಂದದ ಮಾತುಕತೆಗೆ ತೆರಳಬೇಕಿತ್ತು. ಆದರೆ, ಪಾಕಿಸ್ತಾನ ಪ್ರವಾಸ ಸಾಧ್ಯವಾಗುತ್ತಿಲ್ಲ ಎಂದು ಶ್ವೇತಭವನ ಪ್ರಕಟಣೆ ಹೊರಡಿಸಿತು.

ಇರಾನ್ ಸರ್ಕಾರದಲ್ಲಿ ಶಾಂತಿ ಒಪ್ಪಂದ ಕುರಿತು ಗಂಭೀರ ಬಿರುಕು ಏರ್ಪಟ್ಟಿದೆ ಎಂಬ ಅಂಶ ಆಧರಿಸಿ ಮತ್ತು ಪಾಕಿಸ್ತಾನದ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಮತ್ತು ಪ್ರಧಾನಿ ಶೆಹಬಾಜ್ ಷರೀಫ್ ಅವರ ಕೋರಿಕೆಯ ಮೇರೆಗೆ ಇರಾನ್ ಏಕೀಕೃತ ಪ್ರಸ್ತಾಪವನ್ನು ಮಂಡಿಸುವವರೆಗೆ ಅವರ ದಾಳಿಯನ್ನು ತಡೆಹಿಡಿಯಲು ನಮ್ಮನ್ನು ಕೇಳಲಾಗಿದೆ.

ಅಮೆರಿಕ ಇರಾನ್ ಮೇಲಿನ ದಾಳಿಯನ್ನು ತಡೆಯುತ್ತದೆ. ಆದರೆ, ಇರಾನ್‌ನ ಬಂದರುಗಳ ಮೇಲಿನ ಆರ್ಥಿಕ ದಿಗ್ಬಂಧನವು ಜಾರಿಯಲ್ಲಿರುತ್ತದೆ ಎಂದು ಟ್ರಂಪ್ ಸ್ಪಷ್ಟಪಡಿಸಿದ್ದಾರೆ. ಇರಾನ್ ಮೇಲೆ ದಿಗ್ಬಂಧನವನ್ನು ಮುಂದುವರಿಸಲು ಮಿಲಿಟರಿಗೆ ನಿರ್ದೇಶನ ನೀಡಿದ್ದೇವೆ ಎಂದು ಕೂಡ ಟ್ರಂಪ್ ತಿಳಿಸಿದ್ದಾರೆ.


ಅಮೆರಿಕದ ಈ ಕ್ರಮ ಟೀಕಿಸಿರುವ ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಘ್ಚಿ, ಇರಾನ್ ಬಂದರುಗಳ ಮೇಲೆ ದಿಗ್ಬಂಧನ ಮುಂದುವರೆಸಿದ್ದರಿಂದ ಕದನ ವಿರಾಮದ ಉಲ್ಲಂಘನೆಯಾಗಿದೆ. ವಾಣಿಜ್ಯ ಹಡಗುಗಳ ಮೇಲೆ ದಾಳಿ ನಡೆಸಿ, ಅದರ ಸಿಬ್ಬಂದಿಯನ್ನು ಒತ್ತೆಯಾಳಾಗಿಟ್ಟುಕೊಳ್ಳುವುದು ಇನ್ನೂ ದೊಡ್ಡ ಉಲ್ಲಂಘನೆಯಾಗಿದೆ. ಈ ನಿರ್ಬಂಧಗಳನ್ನು ಹೇಗೆ ತಟಸ್ಥಗೊಳಿಸುವುದು, ತನ್ನ ಹಿತಾಸಕ್ತಿಗಳನ್ನು ಹೇಗೆ ರಕ್ಷಿಸಿಕೊಳ್ಳುವುದು ಮತ್ತು ಬೆದರಿಸುವಿಕೆಯನ್ನು



ಹೇಗೆ ವಿರೋಧಿಸುವುದು ಎಂಬುದು ಇರಾನ್‌ಗೆ ತಿಳಿದಿದೆ ಎಂದು ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಇರಾನ್ ಜೊತೆಗಿನ ಕದನ ವಿರಾಮವನ್ನು ವಿಸ್ತರಿಸಿದ್ದಕ್ಕಾಗಿ ಟ್ರಂಪ್ ಅವರಿಗೆ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಧನ್ಯವಾದ ಅರ್ಪಿಸಿದ್ದು, ಸಂಘರ್ಷವನ್ನು ಕೊನೆಗೊಳಿಸಲು ಎರಡೂ ಕಡೆಯವರಿಗೂ ಸಮಗ್ರ ಶಾಂತಿ ಒಪ್ಪಂದವನ್ನು ತೀರ್ಮಾನಿಸಲು ಸಾಧ್ಯವಾಗುತ್ತದೆ ಎಂದು ಭರವಸೆ ವ್ಯಕ್ತಪಡಿಸಿದ್ದಾರೆ.

**ಇರಾನ್ ಹಡಗುಗಳ ಬಿಡುಗಡೆಗೆ ಒತ್ತಾಯ:** ವಿಶ್ವಸಂಸ್ಥೆಯ ಇರಾನ್ ನ ರಾಯಭಾರಿ ಆಗಿರುವ ಅಮೀರ್ ಸಯೀದ್ ಇರಾವನಿ, ಒಮಾನ್ ಸಮುದ್ರದಲ್ಲಿ ಸೆರೆಹಿಡಿದಿರುವ ಇರಾನ್ ವಾಣಿಜ್ಯ ಹಡಗು ಟೌಸ್ಕಾವನ್ನು ಅದರ ಸಿಬ್ಬಂದಿ ಜೊತೆ ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

**ಟ್ರಂಪ್ ಕದನ ವಿರಾಮಕ್ಕೆ ಅರ್ಥವಿಲ್ಲ:** ಇರಾನ್ ಸಂಸತ್ತಿನ ಸ್ಪೀಕರ್ ಅವರ ಸಲಹೆಗಾರರಾದ ಮಹ್ದಿ ಮೊಹಮ್ಮದಿ ಸಾಮಾಜಿಕ ಜಾಲತಾಣ X ನಲ್ಲಿ ಪೋಸ್ಟ್ ಹಾಕಿದ್ದು ಟ್ರಂಪ್ ಕದನ ವಿರಾಮ ಅರ್ಥಹೀನ. ಸೋತ ಕಡೆಯವರು ಷರತ್ತು ನಿರ್ದೇಶಿಸಲು ಸಾಧ್ಯವಿಲ್ಲ. ಹರ್ಮುಜ್ ದಿಗ್ಬಂಧನ ಹಾಕಿರುವುದಕ್ಕೂ, ಬಾಂಬ್ ದಾಳಿಗೂ ವ್ಯತ್ಯಾಸವಿಲ್ಲ ಎಂದ ಅವರು, ಮಿಲಿಟರಿ ಪ್ರತಿಕ್ರಿಯೆ ಎದುರಿಸಬೇಕಾದೀತು ಎಂದು ಎಚ್ಚರಿಕೆ ಕೊಟ್ಟಿದ್ದಾರೆ.



**ಸಂಧಾನ ಮಾತುಕತೆಗೆ ಒಲವು**

ಇರಾನ್ ಜೊತೆಗಿನ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಎರಡು ದೇಶಗಳ ಯುದ್ಧ ಒಪ್ಪಂದದಲ್ಲಿ ಮಧ್ಯವರ್ತಿಯಾಗಿದ್ದ ಪಾಕಿಸ್ತಾನದ ಕೋರಿಕೆ ಮೇಲೆ ಈ ನಿರ್ಧಾರ ಕೈಗೊಳ್ಳಲಾಗಿದ್ದು , ಇರಾನ್ ನಾಯಕರು ಏಕೀಕೃತ ಪ್ರಸ್ತಾವನೆಗೆ ಬರುವವರೆಗೆ ಈ ಕದನ ವಿರಾಮ ವಿಸ್ತರಣೆ ಆಗಲಿದೆ ಎಂದಿದ್ದಾರೆ. 8ರಿಂದ ಜಾರಿಗೆ ಬಂದಿದ್ದ ಇರಾನ್ ಮತ್ತು ಯುಎಸ್ ನಡುವಿನ ಎರಡು ವಾರದ ಕದನ ವಿರಾಮ ಅಂತ್ಯಗೊಳ್ಳುವ ಎರಡು ಗಂಟೆ ಮುನ್ನ ಈ ಘೋಷಣೆ ಹೊರಬಿದ್ದಿದೆ. ಇರಾನ್ ಜೊತೆ ಶಾಂತಿ ಮಾತುಕತೆಗಾಗಿ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ನೇತೃತ್ವದ ಅಮೆರಿಕದ ನಿಯೋಗದ ಇಸ್ಲಾಮಾಬಾದ್ ಭೇಟಿ ಸಾಧ್ಯವಾಗದ ಬೆನ್ನಲ್ಲೇ ಈ ಹೇಳಿಕೆ ಹೊರಬಿದ್ದಿದೆ.

### ಕದನ ವಿರಾಮ ಸ್ವಾಗತಿಸಿದ ಪಾಕ್

ಟ್ರಂಪ್ ವಿಸ್ತರಿಸಿದ ಕದನ ವಿರಾಮವನ್ನು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಸ್ವಾಗತಿಸಿದ್ದಾರೆ. ಅಲ್ಲದೆ ರಾಜತಾಂತ್ರಿಕತೆಗೆ ಹೆಚ್ಚಿನ ಸಮಯವನ್ನು ನೀಡುವ ಪಾಕ್ ವಿನಂತಿಯನ್ನು ಸ್ವೀಕರಿಸಿದ್ದಕ್ಕೆ ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ಧನ್ಯವಾದ ಹೇಳಿದ್ದಾರೆ. ಇನ್ನೊಂದೆಡೆ ಅಮೆರಿಕ-ಇರಾನ್ ಶಾಂತಿ ಮಾತುಕತೆಗಳು ಅನಿಶ್ಚಿತವಾಗಿರುವುದರಿಂದ ಅಮೆರಿಕದಲ್ಲಿ ತೈಲ ಬೆಲೆ ಏರಿಕೆ ಮುಂದುವರಿದಿದೆ.ಅಮೆರಿಕದೊಂದಿಗೆ ಮಾತುಕತೆ ವಿಫಲವಾದ ಬಳಿಕ ಇರಾನಿನ ತೀವ್ರಗಾಮಿಗಳು, ರ್‍ಯಾಲಿಗಳನ್ನು ನಡೆಸಿದರು. ಕಾರ್ಯಕ್ರಮಕ್ಕೆ ಬ್ಯಾಲಿಸ್ಟಿಕ್ ಕ್ಷಿಪಣಿ ಉಡಾವಣಾ ಸಾಧನಗಳನ್ನೂ ತರಲಾಯಿತು. ಇದರಲ್ಲಿ ರೈಫಲ್ ಗಳನ್ನು ಹೊತ್ತ ವ್ಯಕ್ತಿಗಳು ಸವಾರಿ ಮಾಡುತ್ತಿರುವುದನ್ನು ಮಾಧ್ಯಮಗಳು ಪ್ರಸಾರ ಮಾಡಿವೆ. ಅಮೆರಿಕದ ಏಕಪಕ್ಷೀಯವಾದ ಕದನ ವಿರಾಮ ಘೋಷಣೆಯನ್ನು ಇರಾನ್ ಹಾಗೂ ಇಸ್ರೇಲ್ ಬೆಂಬಲಿಸುತ್ತದೆಯೇ ಎಂದು ತಿಳಿದುಬಂದಿಲ್ಲ.

**ಇರಾನ್ ವಿರುದ್ಧ ದಿಗ್ಬಂಧನ ಮುಂದುವರಿಸಲು ಮಿಲಿಟರಿಗೆ ಟ್ರಂಪ್ ಆದೇಶ**

**ಪಾಕ್ ಮನವಿ ಮೇರೆಗೆ ಅಮೆರಿಕ - ಇರಾನ್ ಕದನ ವಿರಾಮ ವಿಸ್ತರಣೆ**

### ಅನಿರ್ಧಿಷ್ಟಾವಧಿಗೆ ಮುಂದುವರಿಕೆ

ಮಿಲಿಟರಿ ಕಾರ್ಯಾಚರಣೆಯನ್ನು ಸದ್ಯ ಸ್ಥಗಿತಗೊಳಿಸಲಾಗಿದೆ. ಟ್ರಂಪ್ ಈ ಬಗ್ಗೆ ಮಾತನಾಡಿ ಪಾಕಿಸ್ತಾನದ ಮನವಿಯನ್ನು ಸ್ವೀಕರಿಸಿ, ಅದರ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆಸಿ, ಇರಾನ್ ನಾಯಕರು ಒಪ್ಪಂದಕ್ಕೆ ಮುಂದೆ ಬರುವವರೆಗೂ ದಾಳಿಯನ್ನು ತಡೆಯಲಾಗುವುದು ಎಂದಿದ್ದಾರೆ. ಇದೇ ವೇಳೆ ಇರಾನ್ ಬಂದರುಗಳಿಗೆ ದಿಗ್ಬಂಧನ ಹಾಕಿರುವ ಅಮೆರಿಕದ ನೌಕಾ ಸೇನಾ ಕಾರ್ಯಾಚರಣೆ ಮುಂದುವರಿಯಲಿದೆ ಎಂದಿದ್ದಾರೆ. ಇದಕ್ಕೆ ಇರಾನ್ ಪ್ರಮುಖ ನಾಯಕರು ತಕ್ಷಣದ ಪ್ರತಿಕ್ರಿಯೆ ಏನೂ ನೀಡಿಲ್ಲ. ಆದರೆ ಮಾಧ್ಯಮಗಳ ಪ್ರಕಾರ ಟೆಹ್ರಾನ್ ಕಡೆಯಿಂದ ಕದನ ವಿರಾಮಕ್ಕೆ ಯಾವುದೇ ಮನವಿ ಮಾಡಿರಲಿಲ್ಲ. ಇರಾನ್ ಒಪ್ಪಂದಕ್ಕೆ ಮುಂದಾಗುವವರೆಗೆ ಅಥವಾ ಮಾತುಕತೆ ಮುಗಿಯುವವರೆಗೆ ಕದನ ವಿರಾಮ ಮುಂದುವರಿಯಲಿದೆ ಎಂದು ಟ್ರಂಪ್ ಹೇಳಿದ್ದಾರೆ.

1 ಇರಾನ್ ನಾಯಕರು ಒಪ್ಪಂದಕ್ಕೆ ಮುಂದೆ ಬರುವವರೆಗೂ ದಾಳಿ ತಡೆಯಲಾಗುವುದು ಎಂದಿದ್ದಾರೆ.

2 ಟ್ರಂಪ್ ಕದನ ವಿರಾಮ ಅರ್ಥಹೀನ. ಸೋತ ಕಡೆಯವರು ಷರತ್ತು ನಿರ್ದೇಶಿಸಲು ಸಾಧ್ಯವಿಲ್ಲ. ಹರ್ಮುಜ್ ದಿಗ್ಬಂಧನ ಹಾಕಿರುವುದಕ್ಕೂ , ಬಾಂಬ್ ದಾಳಿಗೂ ವ್ಯತ್ಯಾಸವಿಲ್ಲ

3 ಇರಾನ್ ಪ್ರಮುಖ ನಾಯಕರು ತಕ್ಷಣದ ಪ್ರತಿಕ್ರಿಯೆ ಏನೂ ನೀಡಿಲ್ಲ.

### ಸಂಧಾನ ಮುರಿದುಬಿದ್ದರೆ ರಕ್ಷಣಾ ಪಡೆ ಕಾರ್ಯಾಚರಣೆ

ಒಂದು ವೇಳೆ ಸಂಧಾನ ಮಾತುಕತೆ ಮುರಿದು ಬಿದ್ದರೆ ಮರುಕ್ಷಣವೇ ಅಮೆರಿಕ ರಕ್ಷಣಾ ಪಡೆಗಳು ದೊಡ್ಡ ಮಟ್ಟದ ಕಾರ್ಯಾಚರಣೆ ಆರಂಭಿಸಲಿವೆ. ಇರಾನ್ ಮೇಲೆ ಬಾಂಬ್‌ಗಳ ಸುರಿಮಳೆಯಾಗಲಿದೆ ಎಂದು ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. 'ಇರಾನ್ ಜತೆಗಿನ ಸಂಘರ್ಷ ಉತ್ತಮ ಒಪ್ಪಂದದ ಜತೆ ಕೊನೆಯಾಗುವ ಭರವಸೆ ಇದೆ. ರಾಜತಾಂತ್ರಿಕ ಮಾತುಕತೆಗೆ ಮೂಲಕ ಪರಿಹಾರ ಕಂಡುಕೊಳ್ಳ ಬಯಕೆಯಿದೆ. ಇರಾನ್ ಮೊಂಡುತನದಿಂದ ಮಾತುಕತೆ ಮುರಿದು ಬಿದ್ದರೆ ಸಮರ ಮುಂದುವರಿಸಲು ನಮ್ಮ ರಕ್ಷಣಾ ಪಡೆಗಳು ಸನ್ನದ್ಧವಾಗಿವೆ,' ಎಂದು ಟ್ರಂಪ್ ಹೇಳುವ ಮೂಲಕ ಸಂಧಾನದ ಜತೆಗೆ 'ದಡಂ ದಶಗುಣಂ' ಅಸ್ತ್ರ ಪ್ರಯೋಗಿಸಿದ್ದಾರೆ. ಖಾಸಗಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಇರಾನ್ ಜತೆಗಿನ ಕದನ ವಿರಾಮ ಮಾತುಕತೆ, ಭವಿಷ್ಯದ ಯೋಜನೆಗಳು ಕುರಿತು ಮಾತನಾಡಿದ ಟ್ರಂಪ್, ''ಸಂಘರ್ಷ ಅಂತ್ಯಗೊಳಿಸುವ ನಿಟ್ಟಿನಲ್ಲಿ ಸಂಧಾನ ಮಾತುಕತೆಯ ಮೂಲಕ ಒಪ್ಪಂದಕ್ಕೆ ಬರುವುದನ್ನು ಬಿಟ್ಟು ಇರಾನ್‌ಗೆ ಬೇರೆ ಆಯ್ಕೆಯಿಲ್ಲ. ನಿಗದಿಯಂತೆ ಪಾಕಿಸ್ತಾನದಲ್ಲಿ ಮಾತುಕತೆ ನಡೆಯಲಿದೆ. ಉತ್ತಮ ಒಪ್ಪಂದ ಮೂಡುವ ವಿಶ್ವಾಸವಿದೆ ಎಂದು ಹೇಳಿದರು.

## ಅನ್ಯಾಯ ಮಾಡಿದ್ರೆ ಮುಂದೆ ಪರಿಣಾಮ ಎದುರಿಸಬೇಕಾಗುತ್ತೆ

### ರಾಜ್ಯದಲ್ಲಿ 14% ಇರುವ ಮುಸ್ಲಿಂ ಸಮುದಾಯಕ್ಕೆ ಕೇವಲ ಎರಡು ಸಚಿವ ಸ್ಥಾನ ನೀಡಲಾಗಿದೆ

• ಉದಯವಾಹಿನಿ, ಬೆಂಗಳೂರು

''ಕಾಂಗ್ರೆಸ್ ಪಕ್ಷಕ್ಕೆ ಮುಸ್ಲಿಮರ ಅವಶ್ಯಕತೆ ಇದೆ. ಆದರೆ, ಮುಸ್ಲಿಮರಿಗೆ ಕಾಂಗ್ರೆಸ್ ಅಗತ್ಯತೆ ಇಲ್ಲ. ಮುಸ್ಲಿಮರಿಗೆ ಅನ್ಯಾಯ ಮಾಡಿದ್ರೆ, ಮುಂದೆ ಪರಿಣಾಮ ಎದುರಿಸಬೇಕಾಗುತ್ತೆ'' ಹೀಗೆ ಎಚ್ಚರಿಕೆ ನೀಡಿದ್ದು ಮುಸ್ಲಿಂ ಸಮುದಾಯದ ಮೌಲಾನಗಳು. ಬೆಂಗಳೂರಿನಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಮೌಲಾನಗಳು ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು.


ಮೌಲಾನಾ ಮುಫ್ತಿ ಸೈಯದ್ ಇಬ್ರಾಹಿಂ ಮಾತನಾಡಿ, ''ಮುಸ್ಲಿಂ ಸಮುದಾಯದ ಗೌರವ ಮತ್ತು ಹೊಣೆಗಾರಿಕೆ ವಿಷಯ ಇದಾಗಿದೆ. ನಮ್ಮ ದೇಶ ಹಾಗೂ ರಾಜ್ಯದಲ್ಲಿ ಹಲವಾರು ಪಕ್ಷಗಳಿವೆ. ಆದರೆ ನಮಗೆಲ್ಲ ತಿಳಿದಂತೆ ಸುಮಾರು 70 ವರ್ಷದಿಂದ ಮುಸ್ಲಿಂ ಸಮುದಾಯದಿಂದ ಕಾಂಗ್ರೆಸ್ ಪಕ್ಷಕ್ಕೆ ಅಮೂಲ್ಯ ಮತ ನೀಡಿದ್ದೇವೆ. ಕಾಂಗ್ರೆಸ್‌ಗೆ ಮತ ಚಲಾಯಿಸಿ ಉಳಿಸಿ ಬೆಳೆಸಿಕೊಂಡು ಬಂದಿದ್ದೇವೆ. ನಮ್ಮ ಮುಸ್ಲಿಮ್ ನಾಯಕರಿಗೆ ದಾವಣೆಗೆರೆ ಉಪ ಚುನಾವಣೆಯಲ್ಲಿ ಹಿರಿಯ ನಾಯಕರಿಗೆ ಗುರಿ ಮಾಡಿ ಅವರನ್ನು ಮೂಲೆ ಸೇರಿಸುವ ಕೆಲಸ ಮಾಡಿದ್ದಾರೆ. ಪಕ್ಷದ ನಾಯಕರು, ಅಧ್ಯಕ್ಷರಿಗೆ ಹಾಗೂ ಕಾಂಗ್ರೆಸ್ ಸರ್ಕಾರಕ್ಕೆ ಹೈಕಮಾಂಡ್ ಗೆ ಎಚ್ಚರಿಕೆ ಕೊಡುತ್ತೇವೆ'' ಎಂದರು.

**ಮುಸ್ಲಿಮರಿಗೆ ಕಾಂಗ್ರೆಸ್ ಅಗತ್ಯತೆ ಇಲ್ಲ**









''ನಮ್ಮ ಹಿರಿಯ ನಾಯಕರು, ಅಬ್ದುಲ್ ಜಬ್ಬರ್ ನಸೀರ್ ಅಹಮದ್ ದೇವರಾಜ ಅರಸು ಕಾಲದಿಂದ ಕಾಂಗ್ರೆಸ್ ಗೆ ಕೆಲಸ ಮಾಡಿದ್ದಾರೆ. ಇವರನ್ನು ಗುರಿ ಮಾಡಿ ಮೂಲೆಗೆ ಸೇರಿಸಿದ್ದು ನಮ್ಮ ಸಮುದಾಯಕ್ಕೆ ಬೇಸರ ಆಗಿದೆ. ಮುಂದೆ ನಮ್ಮ ಜನನಾಯಕ ಜಮೀರ್ ಅಹಮದ್ ಖಾನ್. ಅವರನ್ನು ಗುರಿ ಮಾಡಿರುವುದು ಸರಿಯಿಲ್ಲ. ಕಾಂಗ್ರೆಸ್ ಪಕ್ಷ ಬಂದು ಮೂರು ವರ್ಷ ಆಯ್ತು. ಆದರೆ ಹಿಜಾಬ್ ಸಮಸ್ಯೆ ಬಗೆಹರಿಸಿಲ್ಲ. ಮೀಸಲಾತಿ 4% ವಾಪಸ್ ನೀಡಿಲ್ಲ. ಮಕ್ಕಳಿಗೆ ಚಾಕ್ಲೆಟ್ ಕೊಟ್ಟಂತೆ ಕಾಂಗ್ರೆಸ್ ಪಕ್ಷ ನಮ್ಮ ಸಮುದಾಯಕ್ಕೆ ಚಾಕ್ಲೆಟ್ ಕೊಡ್ತಿದ್ದಾರೆ. ಪಕ್ಷದಿಂದ ಗೌರವ ನಮ್ಮ ಸಮುದಾಯದ ನಾಯಕರಿಗೆ ನೀಡಬೇಕು'' ಎಂದು ಒತ್ತಾಯಿಸಿದರು.

ಝೂಕಿರ್ ಉಲ್ಲಾ ಸಾಹೇಬ್ ಮಾತನಾಡಿ, '' ಕಾಂಗ್ರೆಸ್‌ನಲ್ಲಿ ಮುಸ್ಲಿಂ ನಾಯಕರನ್ನು ಟಾರ್ಗೆಟ್ ಮಾಡಲಾಗಿದೆ. ಕಾಂಗ್ರೆಸ್ ಅಧಿಕಾರ ನಡೆಸುತ್ತಿರುವುದು ಮುಸ್ಲಿಮರ ಕೊಡುಗೆಯಿಂದ ಎಂಬುದನ್ನು ಮರೆಯಬಾರದು. ಕಾಂಗ್ರೆಸ್ ನಮ್ಮ ಹಕ್ಕು ನೀಡುತ್ತದೆ ವಿಶ್ವಾಸ ಉಳಿಸಿಕೊಳ್ಳುತ್ತದೆ ಎಂದು ನಾವು ಓಟು ನೀಡಿದ್ದೇವೆ. ನಾಲ್ಕೇ ದಿನಗಳಲ್ಲಿ 4% ಮೀಸಲಾತಿ ವಾಪಸ್ ನೀಡುತ್ತೇವೆ ಎಂದು ಕಾಂಗ್ರೆಸ್ ಹೇಳಿತ್ತು.

ಆದರೆ ಒಂದೇ ಒಂದು ಭರವಸೆ ಈಡೇರಿಲ್ಲ'' ಎಂದು ಅಸಮಾಧಾನ ವ್ಯಕ್ತಪಡಿಸಿದರು. ದಾವಣೆಗೆರೆಯಲ್ಲಿ ಟಿಕೆಟ್ ಕೇಳಿದ್ದು ನಮ್ಮ ಹಕ್ಕಾಗಿತ್ತು. 85 ಸಾವಿರ ಮುಸ್ಲಿಂ ಮತದಾರರು ಅಲ್ಲಿದ್ದಾರೆ. ದಾವಣೆಗೆರೆ ಫಲಿತಾಂಶ ಬರುವ ಮೊದಲೇ ಕ್ರಮ ಆಗಿದೆ. ಜೀವನದ 40 – 50 ವರ್ಷಗಳ ಕಾಲ ಕಾಂಗ್ರೆಸ್ ಗೆ ಕಳೆದಿರುವ ನಾಯಕರ ವಿರುದ್ಧ ಕಠಿಣ ಕ್ರಮ ಆಗಿದೆ. ನಸೀರ್ ಅಹಮದ್ ಗೆ ಯಾವುದೇ ನೋಟಿಸ್ ನೀಡದೆ ಕಾರಣವನ್ನು ಹೇಳದೆ ಹುದ್ದೆಯಿಂದ ತೆಗೆದುಹಾಕಲಾಗಿದೆ. ಇದರಿಂದ ಮುಸ್ಲಿಂ ನಾಯಕರು ಹಾಗೂ ಸಮುದಾಯ ಬಹಳ ಬೇಸರಗೊಂಡಿದೆ ಎಂದರು.

> 'ಮುಸ್ಲಿಂ ಸಮುದಾಯಕ್ಕೆ ಕಾಂಗ್ರೆಸ್ ನಿಂದ ಅನ್ಯಾಯ ಆಗಿದೆ. ಪ್ರಜಾಪ್ರಭುತ್ವದ ಬಗ್ಗೆ ಕಾಂಗ್ರೆಸ್ ಗೆ ಹೆಚ್ಚು ಅರಿವಿದೆ ಅಂತ ಭಾವಿಸಿದ್ದೇವೆ. ಕಾಂಗ್ರೆಸ್ ಪಕ್ಷವನ್ನು ವಿಧಾನಸೌಧದ ಮೂರನೇ ಮಹಡಿಯಲ್ಲಿ ಕೂರಿಸಿರುವುದು ಮುಸ್ಲಿಂ ಸಮುದಾಯ. ಅದು ಸಿದ್ದರಾಮಯ್ಯ ಇರಬಹುದು, ಮುಂದೆ ಯಾರೇ ಬರಬಹುದು. ಅದು ಮುಸ್ಲಿಮರಿಂದಲೇ ಆಗಿದೆ. ಕಾಂಗ್ರೆಸ್‌ಗೆ ಮುಸ್ಲಿಮರ ಅವಶ್ಯಕತೆ ಇದೆ, ಕಾಂಗ್ರೆಸ್ ಅವಶ್ಯಕತೆ ಮುಸ್ಲಿಮರಿಗೆ ಇಲ್ಲ. ಕಾಂಗ್ರೆಸ್ ನಿಂದ ನಮ್ಮ ಊಟ ರೊಟ್ಟಿ ನಡೆಯುತ್ತದೆ ಎಂದು ಭಾವಿಸಬೇಡಿ''
>
> -ಮೌಲಾನಾ ಹಜರತ್ ಸಲಾಲುದ್ದೀನ್, ಮುಸ್ಲಿಂ ಮುಖಂಡ



# ಬೆಟ್ಟಿಂಗ್ ಸಂಬಂಧ ಕೋರ್ಟ್ ಏಕಾಏಕಿ ಆದೇಶ ನೀಡಿದ್ದು, ಕಾನೂನು ಗೌರವಿಸುತ್ತೇನೆ: ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ಬೆಟ್ಟಿಂಗ್‌ನಲ್ಲಿ ಪಾಲ್ಗೊಂಡ ಆರೋಪದ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಿಸುವಂತೆ ಕೋರ್ಟ್ ಏಕಾಏಕಿ ಆದೇಶ ನೀಡಿದೆ. ಕಾನೂನನ್ನು ಗೌರವಿಸುತ್ತೇನೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದ್ದಾರೆ. ಸದಾಶಿವನಗರದಲ್ಲಿಂದು ಮಾತನಾಡಿದ ಅವರು, ಕಬಡ್ಡಿ ಆಟ ನಡೆಯುವಾಗ ಮಾತನಾಡ್ತಾರೆ. ಹಳ್ಳಿಯಲ್ಲಿ ಎಲ್ಲರೂ ಮಾತನಾಡ್ತಾರೆ. ಅವರು ಮಾತನಾಡುವಂತೆ ನಾನೂ ಮಾತನಾಡಿದ್ದೆ. ಕಾನೂನಿನ ದೃಷ್ಟಿಯಿಂದ ಅದು ತಪ್ಪು. ಆದರೆ ನಾನು ಯಾವ ರೀತಿ ಹೇಳಿದ್ದೇನೆ ಎಂಬುದು ಮುಖ್ಯ ಎಂದರು.

ಬೆಟ್ಟಿಂಗ್ ಪ್ರಮೋಟ್ ಮಾಡಿ ಅಂದಿದ್ರೆ ತಪ್ಪು. ನಾನು ಜವಾಬ್ದಾರಿ ಸ್ಥಾನದಲ್ಲಿರುವವನು. ನಾನು ಪ್ರಮೋಟ್ ಮಾಡ್ತೇನೆ ಅಂದ್ರೆ ಸುಳ್ಳು. ಇದನ್ನು ಅರ್ಥೈಸಿಕೊಳ್ಳುವುದರಲ್ಲಿ ಬರುತ್ತದೆ. ಕಾನೂನು ರಕ್ಷಣೆ ಇಲಾಖೆಯ ಮುಖ್ಯಸ್ಥನಾಗಿ ನಾನು ಕಾನೂನಿಗೆ ಗೌರವ ಕೊಡಬೇಕಲ್ವಾ?. ಕಾನೂನು ಯಾವ ಕ್ರಮ ಕೈಗೊಳ್ಳುತ್ತೋ ಕೈಗೊಳ್ಳಲಿ. ಅದನ್ನು ನಾನು ಕಾನೂನಿಗೆ ಬಿಟ್ಟಿದ್ದೇನೆ. ನಮಗೆ ನೋಟಿಸ್ ಕೊಟ್ಟಿರಲಿಲ್ಲ. ನೋಟಿಸ್ ಕೊಟ್ಟಿದ್ದರೆ ಅರ್ಥೈಸುತ್ತಿದ್ದೆ. ನನ್ನನ್ನು ಯಾರಾದರೂ ಟಾರ್ಗೆಟ್ ಮಾಡಿದ್ರಾ ಗೊತ್ತಿಲ್ಲ. ಅದನ್ನು ಇನ್ನು ಮೇಲೆ ನೋಡ್ತೇನೆ ಎಂದು ಹೇಳಿದರು.

**ಕೊಡಗಿನಲ್ಲಿ ವಿದೇಶಿ ಮಹಿಳೆಯ ಅತ್ಯಾಚಾರ ಪ್ರಕರಣ:** ಕೊಡಗಿನಲ್ಲಿ ವಿದೇಶಿ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣ ಸಂಬಂಧ ಪ್ರತಿಕ್ರಿಯಿಸಿ, ಎಸ್‌ಒಪಿಯನ್ನು ಸರ್ಕ್ಯುಲೇಟ್ ಮಾಡಿದ್ದೇವೆ. ಹೋಂ ಸ್ಟೇಯವರು ಅದರ ಪ್ರಕಾರ ನಡೆಯಬೇಕು. ಹೋಂ ಸ್ಟೇ ನಡೆಸುವವರು ಲೈಸೆನ್ಸ್ ಪಡೆದಿದ್ದಾರಾ ಅವರು ಏನೆಲ್ಲಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಬಗ್ಗೆ ಎಸ್‌ಒಪಿಯಲ್ಲಿ ಕೊಟ್ಟಿರುತ್ತೇವೆ. ಅದನ್ನೂ ಮೀರಿ ಘಟನೆ ಆದಾಗ ಕ್ರಮ ಅನಿವಾರ್ಯ. ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಫಾರಿನರ್ ಮೇಲೆ ಹೀಗಾದ್ರೆ ಹೇಗೆ?. ಜನರಿಗೆ ಯಾವ ಸಂದೇಶ ಹೋಗುತ್ತದೆ. ನಮ್ಮ ದೇಶದ ಬಗ್ಗೆ ಯಾವ ಸಂದೇಶ ಹೋಗಲಿದೆ. ಹೀಗಾಗಿ ನಾವು ಕಠಿಣ ಕ್ರಮ ತೆಗೆದುಕೊಳ್ತೇವೆ. ಘಟನೆ ನಂತರ ಮುಚ್ಚಿಹಾಕುವ ಪ್ರಯತ್ನ ಆಗಿರಬಹುದು. ಅವೆಲ್ಲವನ್ನೂ ಪೊಲೀಸರು ಗಮನಿಸಿದ್ದಾರೆ. ಪೊಲೀಸರು ಅವರನ್ನೆಲ್ಲಾ ಬಂಧಿಸಿದ್ದಾರೆ. ಜಾರ್ಖಂಡ್‌ನವರು ಎಂದು ಹೇಳ್ತಿದ್ದಾರೆ. ಅದೆಲ್ಲಾ ಡೀಟೇಲ್ಸ್ ಪಡೆದು ಮಾತನಾಡುತ್ತೇನೆ ಎಂದರು.


ಉದಯವಾಹಿನಿ ಚಿತ್ರ

### ಸಂಪುಟ: ಹೈಕಮಾಂಡ್‌ಗೆ ಬಿಟ್ಟಿದ್ದು



ಸಂಪುಟ ಪುನಾರಚನೆ ವಿಚಾರವಾಗಿ ಮಾತನಾಡಿ, ಅದು ಸಿಎಂ, ಹೈಕಮಾಂಡ್‌ಗೆ ಬಿಟ್ಟಿದ್ದು. ನಾವು ಮಾತಾಡೋದು ಅಪ್ರಸ್ತುತ. ಅವರು ಏನು ನಿರ್ಧಾರ ಮಾಡ್ತಾರೆ ಮಾಡಲಿ. ಅದರಂತೆ ನಾವು ನಡೆದುಕೊಳ್ತೇವೆ ಎಂದರು. ಸಿಎಂಗೆ ಮಾಟ ಮಂತ್ರದ ವಿಚಾರವಾಗಿ ಕೆ.ಎನ್.ರಾಜಣ್ಣ ಹೇಳಿಕೆಗೆ, ರಾಜಣ್ಣಗೆ ಮಾಹಿತಿ ಇರಬಹುದು. ಅವರಿಗೆ ಯಾರಾದರೂ ಹೇಳಿರಬಹುದು. ಅದಕ್ಕೆ ಹಾಗೆ ಹೇಳಿರಬೇಕು. ಸುಮ್ಮನೆ ಹೇಳಲ್ಲ ಎಂದರು.

## ದಾಸರ ಪದಗಳ ಗಾಯನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ ಅವರ ನೇತೃತ್ವದಲ್ಲಿ ಏಪ್ರಿಲ್ 23, ಗುರುವಾರ ಸಂಜೆ 7-00ಕ್ಕೆ ಕು|| ಸುರಭಿ ಮತ್ತು ಕು|| ಪ್ರೇಕ್ಷಾ ಇವರಿಂದ ದಾಸರ ಪದಗಳ ಗಾಯನ ಕಾರ್ಯಕ್ರಮ ಏರ್ಪಡಿಸಿದ್ದು, ಇವರ ಗಾಯನಕ್ಕೆ ಕೀಬೋರ್ಡ್ ವಾದನದಲ್ಲಿ ಶ್ರೀ ಅಮಿತ್ ಶರ್ಮಾ, ತಬಲಾ ವಾದನದಲ್ಲಿ ಶ್ರೀ ಶ್ರೀನಿವಾಸ ಕಾಖಂಡಕಿ ಸಹಕರಿಸಲಿದ್ದಾರೆ ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಬೆಂಗಳೂರು

## ಕುಡಿತದ ಚಟದಿಂದ ಬೇಸತ್ತು ಪತ್ನಿ ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ಪತಿಯ ಆನ್‌ಲೈನ್ ಬೆಟ್ಟಿಂಗ್ ಹಾಗೂ ಮದ್ಯಪಾನ ಚಟದಿಂದ ಬೇಸತ್ತು ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಹದೇವಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.ಕನಗಾ (28) ಆತ್ಮಹತ್ಯೆಗೆ ಶರಣಾದ ಗೃಹಿಣಿ. ಇವರ ಸಹೋದರಿ ಪೊಲೀಸರಿಗೆ ದೂರು ನೀಡಿದ್ದಾರೆ. ಈ ದೂರು ಆಧರಿಸಿ ಪತಿ ಶಂಕರ್ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ ದಾಖಲಿಸಿ, ಪೊಲೀಸರು ಬಂಧಿಸಿದ್ದಾರೆ. ಇದೀಗ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.ಎ.ನಾರಾಯಣಪುರದ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಕನಗಾ, ಪತಿ ಜೊತೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು. ಏ.19ರಂದು ದಂಪತಿ ನಡುವೆ ಜಗಳವಾಗಿತ್ತು. ಇದರಿಂದ ಬೇಸತ್ತ ಕನಗಾ, ನೇಣು ಬಿಗಿದುಕೊಂಡು ಆತ್ಮಹತ್ಯೆ ಶರಣಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ದಂಪತಿಗೆ ಎರಡು ವರ್ಷದ ಗಂಡು ಮಗ ಇದ್ದಾನೆ. ಮೊದಲ ಎರಡು ವರ್ಷ ತಮಿಳುನಾಡಿನ ಪತಿ ಮನೆಯಲ್ಲಿ ವಾಸವಾಗಿದ್ದರು. ಮಧ್ಯಪ್ರವೇಶಿಸಿ ದಂಪತಿಯನ್ನು ಬೆಂಗಳೂರಿಗೆ ಕನಗ ಮನೆಯವರು ಕರೆಸಿಕೊಂಡಿದ್ದರು. ಎ.ನಾರಾಯಣಪುರದಲ್ಲಿ ಬಾಡಿಗೆ ಮನೆ ಮಾಡಿಕೊಟ್ಟಿದ್ದರು.

ಬೆಟ್ಟಿಂಗ್ ಆಡುತ್ತಿರುವುದನ್ನು ಆಕ್ಷೇಪಿಸಿ ಗಲಾಟೆ ಮಾಡಿದ್ದರು.

## ಪ್ರಿಯಕರನೊಂದಿಗೆ ಎರಡು ಮಕ್ಕಳ ತಾಯಿ ಪರಾರಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕಸ ಎಸೆದು ಬರುವುದಾಗಿ ಹೇಳಿ ತಡರಾತ್ರಿ ಪ್ರಿಯಕರನೊಂದಿಗೆ ಎರಡು ಮಕ್ಕಳ ತಾಯಿ ಪರಾರಿಯಾಗಿರುವ ಆರೋಪ ಕೇಳಿಬಂದಿದೆ. ಈ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಮಹಿಳೆಯ ಪತಿ ನೀಡಿದ ದೂರು ಆಧರಿಸಿ ನಾಪತ್ತೆ ಪ್ರಕರಣ ದಾಖಲಾಗಿದೆ.

ಪತ್ನಿ ರೂಪಾ (ಹೆಸರು ಬದಲಿಸಲಾಗಿದೆ) ನಾಪತ್ತೆಯಾಗಿರುವುದಾಗಿ ಪತಿ ರಮೇಶ್ ಕುಮಾರ್ (ಹೆಸರು ಬದಲಿಸಲಾಗಿದೆ) ಎಂಬವರು ದೂರು ನೀಡಿದ್ದಾರೆ. ಚಿಕ್ಕಮಗಳೂರಿನವರಾದ ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಪತಿ ಖಾಸಗಿ ಕಂಪೆನಿಯೊಂದರಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರೆ, ಪತ್ನಿ ಗೃಹಿಣಿಯಾಗಿದ್ದರು.

ಏ.11ರಂದು ಎಂದಿನಂತೆ ಕೆಲಸ ಮುಗಿಸಿ ಮನೆಗೆ ಬಂದಿದ್ದ ಪತಿಗೆ ಪತ್ನಿ ಊಟ ಬಡಿಸಿದ್ದರು. ರಾತ್ರಿ 11.30ರ ಸುಮಾರಿಗೆ ಕಸ ಎಸೆದು ಬರುವುದಾಗಿ ಪತಿಗೆ ಹೇಳಿ ಪತ್ನಿ ಹೋಗಿದ್ದಾರೆ. ಸಾಕಷ್ಟು ಹೊತ್ತಾದರೂ ಬರದ ಕಾರಣ ಪತಿ ಎಲ್ಲೆಡೆ ಶೋಧ ನಡೆಸಿದ್ದಾರೆ. ಮೊಬೈಲ್‌ಗೆ ಕರೆ ಮಾಡಿದರೆ ಸ್ವಿಚ್ ಆಫ್ ಬಂದಿತ್ತು. ತಮಗೆ ಪ್ರಭು ಎಂಬಾತನ ಮೇಲೆ ಅನುಮಾನವಿದ್ದು, ಆತನೊಂದಿಗೆ ಹೋಗಿರುವ ಬಗ್ಗೆ ಪತಿ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.

ಬಾಗಲಗುಂಟೆಯಲ್ಲಿ ವಾಸವಾಗಿದ್ದ ಮಹಿಳೆಗೆ ಅದೇ ಏರಿಯಾದಲ್ಲಿ ಸಲೂನ್ ಶಾಪ್ ನಡೆಸುತ್ತಿದ್ದ ಪ್ರಭು ಎಂಬಾತನ ಪರಿಚಯವಾಗಿತ್ತು.

## ಬೆಂಗಳೂರಿನಲ್ಲಿ ಜನಗಣತಿಗೆ 6 ಸಾವಿರ ಸರ್ಕಾರಿ ನೌಕರರು ಗೈರು

• ಉದಯವಾಹಿನಿ,ಬೆಂಗಳೂರು

ರಾಷ್ಟ್ರೀಯ ಜನಗಣತಿ-2026 ಬೆಂಗಳೂರಿನಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯನ್ನ ಕಾಣದೇ ಕುಂಟುತ್ತಾ ಸಾಗಿದೆ. ಇನ್ನು ಗಣತಿ ಕಾರ್ಯಕ್ಕೆ 6 ಸಾವಿರ ಸರ್ಕಾರಿ ನೌಕರರು ಕೈಕೊಟ್ಟಿದ್ದಾರೆ. ಹೀಗಾಗಿ ಇಕ್ಕಟ್ಟಿಗೆ ಸಿಲುಕಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಖಾಸಗಿ ವ್ಯಕ್ತಿಗಳಿಂದ ಗಣತಿ ಮಾಡಿಸಲು ತಯಾರಿ ನಡೆಸಿದೆ. ರಾಷ್ಟ್ರೀಯ ಜನಗಣತಿ 2026 ಮನೆ ಮನೆ ಗಣತಿ ಕಾರ್ಯ ಶುರುವಾಗಿ ಒಂದು ವಾರವೇ ಆದರೂ ಬೆಂಗಳೂರಿನಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿ ಕಂಡುಬಂದಿಲ್ಲ. ಗಣತಿ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದ್ದ ಸರ್ಕಾರಿ ಸಿಬ್ಬಂದಿ ಪೈಕಿ 6 ಸಾವಿರ ಮಂದಿಗೆ ಗೈರು ಹಾಜರಾಗಿರುವುದು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ 5 ನಗರ ಪಾಲಿಕೆಗಳಿಗೆ ತಲೆನೋವಾಗಿದೆ.

# ಬೆಂಗಳೂರಿಗೆ ಬರಲಿದೆ ನಾಲ್ಕನೇ ರಿಂಗ್ ರಸ್ತೆ

**ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಈ ಯೋಜನೆಯನ್ನು ಜಾರಿಗೊಳಿಸಲಿದೆ. 210 ಕಿ.ಮೀ ಉದ್ದದ ಈ ಕಾರಿಡಾರ್ ಅನ್ನು 2007 ರಲ್ಲಿಯೇ ಪ್ರಸ್ತಾಪಿಸಲಾಗಿತ್ತು. ಆದರೆ, ಕಾನೂನು ತೊಡಕುಗಳು ಮತ್ತು ಭೂಸ್ವಾಧೀನದ ಸವಾಲುಗಳಿಂದಾಗಿ ನೆನೆಗುದಿಗೆ ಬಿದ್ದಿತ್ತು. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನಿರ್ದೇಶನದ ಮೇರೆಗೆ ಈ ಯೋಜನೆಗೆ ಈಗ ಮರುಜೀವ ನೀಡಲಾಗಿದೆ.**


ಉದಯವಾಹಿನಿ ಚಿತ್ರ

**ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ**

## ಉಪನಗರಗಳಿಗೆ ಸಂಪರ್ಕ ಕೊಂಡಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರವು ಸುಮಾರು ಎರಡು ದಶಕಗಳಷ್ಟು ಹಳೆಯದಾದ ಬೆಂಗಳೂರು ಇಂಟರ್‌ಮೀಡಿಯೇಟ್‌ರಿಂಗ್ ರೋಡ್ (ಐಆರ್‌ಆರ್) ಯೋಜನೆಗೆ ಮರುಚಾಲನೆ ನೀಡಿದೆ. ಈ ಮೂಲಕ ಬೆಂಗಳೂರಿಗೆ ಸಂಬಂಧಿಸಿದಂತೆ ನಾಲ್ಕನೇ ರಿಂಗ್ ರಸ್ತೆ ಬರಲಿದೆ. ಬೆಂಗಳೂರಿನ ಹೊರವಲಯದಲ್ಲಿರುವ 12 ಉಪನಗರಗಳನ್ನು ಸಂಪರ್ಕಿಸುವತ್ತ ಈ ಯೋಜನೆ ಗಮನಹರಿಸಲಿದೆ.

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಈ ಯೋಜನೆಯನ್ನು ಜಾರಿಗೊಳಿಸಲಿದೆ. 210 ಕಿ.ಮೀ ಉದ್ದದ ಈ ಕಾರಿಡಾರ್ ಅನ್ನು 2007 ರಲ್ಲಿಯೇ ಪ್ರಸ್ತಾಪಿಸಲಾಗಿತ್ತು. ಆದರೆ, ಕಾನೂನು ತೊಡಕುಗಳು ಮತ್ತು ಭೂಸ್ವಾಧೀನದ ಸವಾಲುಗಳಿಂದಾಗಿ ಇದು ನೆನೆಗುದಿಗೆ ಬಿದ್ದಿತ್ತು. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನಿರ್ದೇಶನದ ಮೇರ್ರೆಗೆ ಈ ಯೋಜನೆಗೆ ಈಗ ಮರುಜೀವ ನೀಡಲಾಗಿದೆ. ಬೆಂಗಳೂರಿನ ಹೊರವಲಯದಲ್ಲಿರುವ 12 ಉಪನಗರಗಳನ್ನು ಸಂಪರ್ಕಿಸುವತ್ತ ಈ ಯೋಜನೆ ಗಮನಹರಿಸಲಿದೆ. ಕನಕಪುರ ತಾಲ್ಲೂಕಿನ ತಟ್ಟೆಕೆರೆ, ಹಾರೋಹಳ್ಳಿ, ಬಿಡದಿ, ತಾವರೆಕೆರೆ, ನೆಲಮಂಗಲ, ದೇವನಹಳ್ಳಿ, ಹೊಸಕೋಟೆ, ದೊಮ್ಮಸಂದ್ರ ಮತ್ತು ಆನೇಕಲ್ ಸೇರಿದಂತೆ ಬೆಳೆಯುತ್ತಿರುವ ಪ್ರದೇಶಗಳ ನಡುವೆ ಇದು ನಿರ್ಣಾಯಕ ಸಂಚಾರ ಸಂಪರ್ಕವನ್ನು ಸೃಷ್ಟಿಸಲಿದೆ.


**ವಿನ್ಯಾಸ ಬದಲಾವಣೆ:** ನಗರಾಭಿವೃದ್ಧಿ ಇಲಾಖೆಯ ಟಿಪ್ಪಣಿಗಳ ಪ್ರಕಾರ, ಈ ಹಿಂದಿನ ರಸ್ತೆ ಮಾರ್ಗದ ವಿನ್ಯಾಸವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು. ಆಗಸ್ಟ್ 2022 ರಲ್ಲಿ, ರಸ್ತೆ ಮಾರ್ಗವನ್ನು ಬದಲಾಯಿಸುವಂತೆ ಕರ್ನಾಟಕ ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಅದರಂತೆ ಬಿಎಂಆರ್‌ಡಿಎ ಮಾರ್ಚ್ 2023ರಲ್ಲಿ ಯೋಜನೆಯನ್ನು ಪರಿಷ್ಕರಿಸಿತ್ತು. ಆದರೆ, ವಿವರವಾದ ಸಮೀಕ್ಷೆಗಳಿಲ್ಲದೆ ರೂಪಿಸಲಾದ ಆ ಪರಿಷ್ಕೃತ ವಿನ್ಯಾಸದಲ್ಲಿ, ರಸ್ತೆಯುದ್ದಕ್ಕೂ ಅಸ್ತಿತ್ವದಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ಬಳಸಿಕೊಳ್ಳಲು ಪ್ರಸ್ತಾಪಿಸಲಾಗಿತ್ತು.

ಇದರಿಂದಾಗಿ ಮೂಲತಃ ಯೋಜಿಸಲಾದ 90 ಮೀಟರ್ ಅಗಲದ ಬದಲು, ರಸ್ತೆಯ ಅಗಲವು 9 ಮೀಟರ್‌ನಿಂದ 30 ಮೀಟರ್‌ವರೆಗೆ ಅಸಮಾನವಾಗಿತ್ತು. ಇದು ಯೋಜನೆಯ ಬಗ್ಗೆ ಮರುಪರಿಶೀಲನೆಗೆ ಕಾರಣವಾಯಿತು.ಕಳೆದ ವರ್ಷ ಡಿಸೆಂಬರ್‌ನಲ್ಲಿ ಡಿಕೆ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ, ಬಿಎಂಆರ್‌ಡಿಎ ಸೀಮಿತ ಮಾರ್ಪಾಡುಗಳೊಂದಿಗೆ 2007 ರ ಮೂಲ ವಿನ್ಯಾಸಕ್ಕೇ ಮರಳಲು ನಿರ್ಧರಿಸಿದೆ. ಅಧಿಕಾರಿಗಳ ಪ್ರಕಾರ, ಮೂಲ ವಿನ್ಯಾಸವು ಈಗಾಗಲೇ ಬಹುತೇಕ ಯೋಜನಾ ಪ್ರಾಧಿಕಾರಗಳ ಮಾಸ್ಟರ್ ಪ್ಲಾನ್‌ಗಳಲ್ಲಿ ಸೇರ್ಪಡೆಗೊಂಡಿರುವುದರಿಂದ ಭವಿಷ್ಯದ ಸಂಘರ್ಷಗಳು ಕಡಿಮೆಯಾಗುತ್ತವೆ. ಈಗ 2023ರ ಪರಿಷ್ಕೃತ ವಿನ್ಯಾಸವನ್ನು ಕೈಬಿಡಲಾಗಿದೆ. ಅಸ್ತಿತ್ವದಲ್ಲಿರುವ ಬಡಾವಣೆಗಳಿಗೆ ತೊಂದರೆಯಾಗದಂತೆ ಮತ್ತು ಇತರ ಪ್ರಾದೇಶಿಕ ರಸ್ತೆ ಜಾಲಗಳೊಂದಿಗೆ ಹೊಂದುವಂತೆ ಹೊಸ ವಿನ್ಯಾಸವನ್ನು ರೂಪಿಸಲಾಗಿದೆ.

**ಪರಿಷ್ಕೃತ ನಕ್ಷೆ ಬಿಟ್ಟು ಅಸ್ತಿತ್ವದಲ್ಲಿರುವ ಪ್ರದೇಶಗಳಿಗೆ ಅಡ್ಡಿಯಾಗುವ ಹಾಗೂ ಪ್ರಾದೇಶಿಕ ರಸ್ತೆ ಜಾಲಗಳೊಂದಿಗೆ ಹೊಂದಿಕೊಳ್ಳುವ ಹೊಸ ಮಾರ್ಗದ ರೂಪರೇಷೆಗಳನ್ನು ತಯಾರಿಸಲಾಗಿದೆ. ನೆಲಮಂಗಲ ಟೌನ್ ರಿಂಗ್ ರೋಡ್ ಮತ್ತು ಆನೇಕಲ್-ಹೊಸಕೋಟೆ ಮಾರ್ಗದಲ್ಲಿನ ಸ್ಯಾಟ್‌ಲೈಟ್ ಟೌನ್ ರಿಂಗ್ ರೋಡ್‌ನೊಂದಿಗೆ ವಿಲೀನಗೊಳ್ಳುವಂತೆ ಮಾಡಲಾಗಿದೆ. ಇದರಿಂದ ಹೊರವಲಯದ ರಸ್ತೆ ಜಾಲಗಳು ಒಂದಕ್ಕೊಂದು ಸಂಪರ್ಕ ಸಾಧಿಸಲಿವೆ.**

### ಭೂಸ್ವಾಧೀನ ವೆಚ್ಚ ಉಳಿತಾಯ

ಅಧಿಕಾರಿಗಳು ಪ್ರಮುಖ ಆರ್ಥಿಕ ಪ್ರಯೋಜನವೊಂದನ್ನು ಬೊಟ್ಟು ಮಾಡಿದ್ದಾರೆ. ರಸ್ತೆ ಹಾದುಹೋಗುವ ಭೂಮಿಯ ಕೆಲ ಭಾಗಗಳು ಈಗಾಗಲೇ ಅನುಮೋದಿತ ಬಡಾವಣೆಗಳ ವ್ಯಾಪ್ತಿಯಲ್ಲಿ ಬರುತ್ತವೆ. ಡೆವಲಪರ್‌ಗಳು ತಮ್ಮ ಬಡಾವಣೆಗಳ ಅಭಿವೃದ್ಧಿಗೆ ಅನುಮೋದನೆ ಪಡೆಯುವ ಸಮಯದಲ್ಲಿ ನೋಂದಾಯಿತ ಬಿಟ್ಟುಕೊಡುವ ಪತ್ರದ ಮೂಲಕ ಉಚಿತವಾಗಿ ಭೂಮಿಯನ್ನು ಸರ್ಕಾರಕ್ಕೆ ಹಸ್ತಾಂತರಿಸುವ ನಿರೀಕ್ಷೆಯಿದೆ. ಇದರಿಂದ ಸರ್ಕಾರದ ಮೇಲಿನ ಭೂಸ್ವಾಧೀನದ ಹೊರೆ ಗಣನೀಯವಾಗಿ ಕಡಿಮೆಯಾಗಲಿದೆ. ಐಆರ್‌ಆರ್ ರಸ್ತೆಯು ಎಸ್‌ಟಿಆರ್‌ಆರ್ ಮತ್ತು ಪಿಆರ್‌ಆರ್ (ಪೆರಿಫೆರಲ್ ರಿಂಗ್ ರೋಡ್) ನಡುವಿನ ವಿಶಾಲ ಪ್ರದೇಶಗಳನ್ನು ಸಂಪರ್ಕಿಸಲು ಸಹಾಯ ಮಾಡುತ್ತದೆ ಮತ್ತು 12 ಉಪನಗರಗಳ ಅಭಿವೃದ್ಧಿಯನ್ನು ಉತ್ತೇಜಿಸುವ ನಿರೀಕ್ಷೆಯಿದೆ ಎಂದು ಬಿಎಂಆರ್‌ಡಿಎ ಆಯುಕ್ತ ರಾಜೇಂದ್ರ ಚೋಳನ್ ಹೇಳಿದ್ದಾರೆ. ಪ್ರಾಧಿಕಾರವು ಈಗಾಗಲೇ ಯೋಜನೆಗಾಗಿ 175 ಎಕರೆ ಭೂಮಿಯನ್ನು ಹೊಂದಿದ್ದು, ಹೆಚ್ಚುವರಿ ಭೂಸ್ವಾಧೀನವನ್ನು ಕೈಗೊಳ್ಳಲಿದೆ. ಯೋಜನೆ ಅನುಷ್ಠಾನಕ್ಕೆ ಹಣ ಹೊಂದಿಸುವ ಆಯ್ಕೆಗಳನ್ನು ಅನ್ವೇಷಿಸಲಾಗುವುದು ಎಂದು ಅವರು ತಿಳಿಸಿದರು. ಈಗಾಗಲೇ ಬೆಂಗಳೂರಿನಲ್ಲಿ ಹೊರ ವರ್ತುಲ ರಸ್ತೆ (ಔಟರ್ ರಿಂಗ್ ರಸ್ತೆ - ಒಆರ್‌ಆರ್) ಇದೆ, ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿರುವ 17,000 ಕೋಟಿ ರೂ. ವೆಚ್ಚದ 228 ಕಿ.ಮೀ ಉದ್ದದ ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ (ಎಸ್‌ಟಿಆರ್‌ಆರ್) ಹಾಗೂ 27,000 ಕೋಟಿ ರೂ. ಅಂದಾಜು ವೆಚ್ಚದ ಉದ್ದೇಶಿತ ಬೆಂಗಳೂರು ಬಿಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ) ಯೋಜನೆಗಳು ಇವೆ.



### ತಗ್ಗಲಿದೆ ಭೂಮಿ ಸ್ವಾಧೀನ ಹೊರೆ

ಈ ಯೋಜನೆಯಿಂದ ಒಂದಷ್ಟು ಆರ್ಥಿಕ ಲಾಭಗಳಿವೆ. ಸರ್ಕಾರ ಅನುಮೋದಿತ ಬಡಾವಣೆಗಳಲ್ಲಿ ಭೂಮಿಯನ್ನು ಡೆವಲಪರ್‌ಗಳು ಅಭಿವೃದ್ಧಿ ಅನುಮೋದನೆ ಪಡೆಯುವಾಗ ನೋಂದಾಯಿತ ಹಕ್ಕು ಬಿಟ್ಟುಕೊಡುವ ದಾಖಲೆಗಳ ಮೂಲಕ ಸರ್ಕಾರಕ್ಕೆ ಉಚಿತವಾಗಿ ಹಸ್ತಾಂತರಿಸಲಿದ್ದಾರೆ.

ಇದು ಸರ್ಕಾರದ ಮೇಲಿನ ಭೂಸ್ವಾಧೀನ ಹೊರೆ ತಗ್ಗಿಸುತ್ತದೆ. ಐಆರ್‌ಆರ್, ಎಸ್‌ಟಿಆರ್‌ಆರ್ ಮತ್ತು ಪಿಆರ್‌ಆರ್ ನಡುವಿನ ವಿಶಾಲ ಪ್ರದೇಶಗಳನ್ನು ಸಂಪರ್ಕಿಸುವಿದರಿಂದ ಸುಮಾರ 12 ಉಪನಗರಗಳ ಅಭಿವೃದ್ಧಿಗೆ ಉತ್ತೇಜನ ಸಿಕ್ಕಂತಾಗುತ್ತದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

## ಏ.23ರಂದು ಬೆಂಗಳೂರು ಜಲಮಂಡಳಿ ಅದಾಲತ್


ಉದಯವಾಹಿನಿ ಚಿತ್ರ

• ಉದಯವಾಹಿನಿ,ಬೆಂಗಳೂರು

ಬೆಂಗಳೂರು ಜಲಮಂಡಳಿಯು ಉಪವಿಭಾಗಗಳಲ್ಲಿ ನೀರಿನ ಅದಾಲತ್ ಅನ್ನು ಏ.23ರಂದು ಹಮ್ಮಿಕೊಂಡಿದೆ. ಆಗ್ನೇಯ 3 ಉಪ ವಿಭಾಗದ ಸಭೆ ಕೂಡ್ಲು ಜಿಎಲ್ ಆರ್ ಲೇಔಟ್, ಆಗ್ನೇಯ-6 ಬಿಟಿಎಂ 2ನೇ ಹಂತ, ಪಶ್ಚಿಮ 1-3 ರಾಜಾಜಿನಗರ, ವಾಯುವ್ಯ - 5 ಹೆಸರಘಟ್ಟ ಎಂಇಐ ಲೇಔಟ್, ಉತ್ತರ 2-3 ಯಲಹಂಕ, ದಕ್ಷಿಣ 1-3 ಅಂಜನಾಪುರ, ನೈರುತ್ಯ 3 ಬಸವನಗುಡಿ, ನೈರುತ್ಯ 6 ಲಿಂಗಧೀರನಹಳ್ಳಿ, ಪೂರ್ವ ಉಪವಿಭಾಗ 2-4ರ ಅದಾಲತ್ ಕಸ್ತೂರಿನಗರದಲ್ಲಿ ನಡೆಯಲಿದೆ.

## ಕಾಂಗ್ರೇಸ್‌ಗೆ ಮುಸ್ಲಿಂ ನಾಯಕರಿಂದ ವಾರ್ನಿಂಗ್
### ಚುನಾವಣೆಯಲ್ಲಿ ತಕ್ಕ ಉತ್ತರ

• ಉದಯವಾಹಿನಿ, ಬೆಂಗಳೂರು

ಸುಮಾರು 70 ವರ್ಷಗಳಿಂದ ಮುಸ್ಲಿಂ ಸಮುದಾಯದಿಂದ ಕಾಂಗ್ರೆಸ್‌ನವರು ಮತ ಪಡೆಯುತ್ತಿದ್ದಾರೆ. ಆದರೆ ನಮಗೆ ಅನ್ಯಾಯ ಮಾಡಲಾಗುತ್ತಿದೆ. ಇದರ ವಿರುದ್ಧ ಮುಂದಿನ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಮೌಲಾನ ಮುಫ್ತಿ ಸಯ್ಯದ್ ಇಬ್ರಾಹಿಂ ಎಚ್ಚರಿಕೆ ನೀಡಿದ್ದಾರೆ. ಪ್ರೆಸ್ ಕ್ಲಬ್‌ನಲ್ಲಿಂದು ಮುಸ್ಲಿಂ ಧರ್ಮಗುರುಗಳಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ಉಪ ಚುನಾವಣೆಯಲ್ಲಿ ಹಿರಿಯ ನಾಯಕರನ್ನು ಮೂಲೆಗುಂಪೆ ಮಾಡುವ ಕೆಲಸ ಕಾಂಗ್ರೆಸ್ ನಾಯಕರು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

## ಬಹುತೇಕ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರ ಸಂಬಳ ಕೊಟ್ಟಿಲ್ಲ: ವಿಜಯೇಂದ್ರ

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯನವರ ಆರ್ಥಿಕ ನೀತಿ ವೈಫಲ್ಯದ ಹಿನ್ನೆಲೆಯಲ್ಲಿ ಏಪ್ರಿಲ್ ತಿಂಗಳ 22ರವರೆಗೆ ಬಹುತೇಕ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರ ಸಂಬಳವನ್ನೇ ಕೊಟ್ಟಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆರ್ಥಿಕ ನೀತಿಗಳ ವೈಫಲ್ಯ ಹಾಗೂ ಆಡಳಿತದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದರ ಪರಿಣಾಮವಾಗಿ ರಾಜ್ಯದ ಸುಮಾರು 5 ಲಕ್ಷ ಸರ್ಕಾರಿ ನೌಕರರ ಪೈಕಿ ಬಹುತೇಕ ನೌಕರರಿಗೆ ಏಪ್ರಿಲ್ ತಿಂಗಳ 22ರವರೆಗೆ ಸರ್ಕಾರ ಸಂಬಳವನ್ನೇ ನೀಡಿಲ್ಲ ಎಂದು ದೂರಿದ್ದಾರೆ.

ಕಳೆದ ವರ್ಷ ಎರಡು ತಿಂಗಳ ಅವಧಿಗೆ ಗೃಹಲಕ್ಷ್ಮಿ ಹಣವನ್ನೇ ನುಂಗಿ ಹಾಕಿದ ಸರ್ಕಾರ, ಈ ವರ್ಷ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಚುನಾವಣೆಯ ಕಾರಣಕ್ಕಾಗಿ ಮಾರ್ಚ್ ಅಂತ್ಯಕ್ಕೆ ಖಜಾನೆಯಲ್ಲಿದ್ದ ಹಣವನ್ನು ಗೃಹಲಕ್ಷ್ಮಿ ಫಲಾನುಭವಿಗಳಿಗೆ ಹಂಚಿದೆ. ಪರಿಣಾಮ, ಸರ್ಕಾರದ 5 ಲಕ್ಷ ಸರ್ಕಾರಿ ನೌಕರರಿಗೆ ತಿಂಗಳು ಕಳೆಯುತ್ತಾ ಬಂದರೂ ಸಂಬಳ ಕೊಡಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂದು ಆರೋಪಿಸಿದ್ದಾರೆ.

ಮುಖ್ಯಮಂತ್ರಿಗಳ ಬದಲಾವಣೆ, ಸಂಪುಟ ಪುನರ್‌ರಚನೆ, ಮುಸ್ಲಿಮರ ತುಷ್ಟೀಕರಣ ಹೀಗೆ ಹಲವು ಆಂತರಿಕ ಬಿಕ್ಕಟ್ಟಿನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವೈಯಕ್ತಿಕ ಪ್ರತಿಷ್ಠೆಯಲ್ಲಿ ಮುಳುಗಿ ಹೋಗಿದ್ದಾರೆ. ಇದರ ನೇರ ಪರಿಣಾಮ ರಾಜ್ಯದ ಜನರ ಮೇಲಾಗುತ್ತಿದೆ ಎಂದು ಟೀಕಿಸಿದ್ದಾರೆ.


ಉದಯವಾಹಿನಿ ಚಿತ್ರ

ಸರ್ಕಾರಿ ನೌಕರರಿಗೆ ಸಂಬಳವನ್ನೇ ಕೊಡಲು ಸಾಧ್ಯವಾಗದ ಈ ಸರ್ಕಾರ, ಈ ವರ್ಷ ಬಿರು ಬೇಸಿಗೆ ಹಾಗೂ ಬರದ ಛಾಯೆಯಲ್ಲಿ ಈಗಾಗಲೇ ಬಸವಳಿದು ಹೋಗಿರುವ ರಾಜ್ಯದ ಜನರನ್ನು ದೇವರೇ ಕಾಪಾಡಬೇಕು. ಪ್ರತಿಪಕ್ಷವಾಗಿ ಬಿಜೆಪಿ ಸರ್ಕಾರವನ್ನು ಬಡಿದೆಬ್ಬಿಸಿ ಕುಡಿಯುವ ನೀರಿಗೂ ಪರಿತಪಿಸುತ್ತಿರುವ ಜನ, ಜಾನುವಾರು ನೆರವಿಗೆ ಮುಂದಾಗುವಂತೆ ಹೋರಾಟ ನಡೆಸಲು ಬದ್ಧವಾಗಿದೆ ಎಂದಿದ್ದಾರೆ.



> ಹಿರಿಯರಾಗಿ, ಹಲವು ದಶಕಗಳ ಕಾಲ ರಾಜಕಾರಣದಲ್ಲಿದ್ದರೂ, ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿದ್ದರೂ, ನಿಮ್ಮ ಪಕ್ಷದ ವರಿಷ್ಠರನ್ನು ತೃಪ್ತಿಪಡಿಸಲು ನೀವು ಇಷ್ಟು ಕೀಳುಮಟ್ಟಕ್ಕೆ ಇಳಿಯುತ್ತೀರಿ ಎಂದು ಜನ ನಿರೀಕ್ಷಿಸಿರಲಿಲ್ಲ. ನಿಮ್ಮ ಈ ಅವಹೇಳನಕಾರಿ ರಾಜಕೀಯಕ್ಕೆ ಮುಂಬರುವ ದಿನಗಳಲ್ಲಿ ನಾಡಿನ ಜನರೇ ತಕ್ಕ ಉತ್ತರ ನೀಡಲಿದ್ದಾರೆ.
>
> -ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

## ಕೇಂದ್ರ ಬಿಜೆಪಿ ಸರ್ಕಾರ ಅಮೇರಿಕಾ ಜೊತೆಯಲ್ಲಿ ರೈತ ವಿರೋಧಿ ಒಪ್ಪಂದ ರದ್ದುಗೊಳಿಸಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಫ್ರೀಡಂ ಪಾರ್ಕ್ ಆವರಣದಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಕೇಂದ್ರ ಬಿಜೆಪಿ ಸರ್ಕಾರದ ರೈತ ವಿರೋಧಿ ಯು.ಎಸ್. ವ್ಯಾಪಾರ ಒಪ್ಪಂದವನ್ನು ರದ್ದುಗೊಳಿಸಿ ಮತ್ತು ಎಂ.ಎಸ್.ಪಿ.ಗೆ ಕಾನೂನು ಬದ್ಧ ಖಾತರಿ ನೀಡಿ ದೇಶ ರೈತರು ಮತ್ತು ಕೃಷಿಯನ್ನು ಉಳಿಸಲು ಸತ್ಯಾಗ್ರಹ ಕಾರ್ಯಕ್ರಮ.

ವಿಧಾನಪರಿಷತ್ ಸದಸ್ಯರಾದ ಸಲೀಮ್ ಅಹಮದ್ ರವರು, ರಾಜ್ಯ ಯುವ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷರಾದ ಹೆಚ್.ಎಸ್.ಮಂಜುನಾಥ್ ಗೌಡರು, ಮಾಜಿ ಮಹಾಪೌರರಾದ ಜೆ.ಹುಚ್ಚಪ್ಪ, ಮಾಜಿ ಮಹಾನಗರ ಪಾಲಿಕೆ ಸದಸ್ಯರುಗಳಾದ ಎಸ್. ಕೇಶವಮೂರ್ತಿ, ಮೋಹನ್ ಕುಮಾರ್ ರವರು ಯುವ ಕಾಂಗ್ರೆಸ್ ಸಮಿತಿಯ ಮುಖಂಡರುಗಳು, ಕಾರ್ಯಕರ್ತರುಗಳು ಭಾಗವಹಿಸಿದ್ದರು.

ಸಲೀಮ್ ಅಹಮದ್ ರವರು ಮಾತನಾಡಿ ರೈತ ಪರ ಹೋರಾಟ ಹಿನ್ನಲೆಯಲ್ಲಿ ರಾಜ್ಯ ಯುವ ಕಾಂಗ್ರೆಸ್ ವತಿಯಿಂದ ಕಿಸಾನ್ ನ್ಯಾಯ ಸತ್ಯಾಗ್ರಹ ಮಾಡುತ್ತಿದ್ದಾರೆ. 11ವರ್ಷಗಳಿಂದ ಬಿಜೆಪಿ ಕೇಂದ್ರ ಸರ್ಕಾರ ರೈತರ ಹಿತ ಕಾಪಾಡಲ್ಲಿಲ. ಇಂಡೋ-ಅಮೇರಿಕಾ ಒಪ್ಪಂದದಿಂದ ದೇಶದ ರೈತರಿಗೆ ಮರಣ ಶಾಸನವಾಗಿದೆ.

24ಕೋಟಿ ಯುವಕ-ಯುವತಿಯರಿಗೆ ಉದ್ಯೋಗ ಕೊಡುತ್ತೇವೆ ಎಂದು ಹೇಳಿ ಎರಡು ಕೋಟಿ ಉದ್ಯೋಗ ಕೊಟ್ಟಿಲ್ಲ. ಕಪ್ಪು ಹಣ ತರುತ್ತೇವೆ ಎಂದು ಸುಳ್ಳು ಹೇಳಿ ದೇಶದ ಜನರಿಗೆ ಮೋಸ ಮಾಡಿದ್ದಾರೆ. ನಮಗೆ ಅಧಿಕಾರ ಕೊಡಿ ರಾಮರಾಜ್ಯ ಮಾಡುತ್ತೇವೆ ಎಂದು ಹೇಳಿದ್ದರು ಅದರೆ ಇಂದು ರಾವಣರಾಜ್ಯವಾಗಿದೆ. ಕೊರೋನ ಸಂದರ್ಭದಲ್ಲಿ ಲಕ್ಷಾಂತರ ಜನರ ಸಾವನ್ನಪ್ಪಿದ್ದರು, ದೇಶದ ಜನರ ರಕ್ಷಣೆಗೆ ಬರಲಿಲ್ಲ. ರೈತರು ದೇಶದ ಜೀವನಾಡಿ ಅವರ ರಕ್ಷಣೆಗೆ ಕಾಂಗ್ರೆಸ್ ಪಕ್ಷ ಕಟಿಬದ್ಧವಾಗಿ ಹೋರಾಟ ಮಾಡುತ್ತಿದೆ. ನುಡಿದಂತೆ ನಡೆ, ನಡೆದಂತೆ ನುಡಿದ ಕಾಂಗ್ರೆಸ್ ಪಕ್ಷಕ್ಕೆ ರೈತರ ಬೆಂಬಲವಿದೆ.

ಅಮೇರಿಕಾ ವಿರುದ್ಧ ದೇಶದ ಜನರು ಚರ್ಚೆ ಮಾಡುತ್ತಿದ್ದಾರೆ ಅದರೆ ಪ್ರಧಾನಿ ಮೋದಿರವರು ಅಮೇರಿಕಾ ಅಧ್ಯಕ್ಷರ ಬೆದರಿಕೆ ಹೆದರಿ ಆಡಳಿತ ನಡೆಸುತ್ತಿದ್ದಾರೆ. ರೈತ ವಿರೋಧಿ ಒಪ್ಪಂದ ರದ್ದು ಮಾಡಬೇಕು ಎಂದು ಹೇಳಿದರು. ಹೆಚ್.ಎಸ್. ಮಂಜುನಾಥ್ ಗೌಡರು ಮಾತನಾಡಿ ರೈತ ವಿರೋಧಿ ಒಪ್ಪಂದ ರಾಷ್ಟ್ರೀಯ ಮಟ್ಟದಲ್ಲಿ ಯುವ ಕಾಂಗ್ರೆಸ್ ಪ್ರತಿಭಟನೆ ನಡೆಸಲಾಗುತ್ತಿದೆ. ಉದ್ಯೋಗವಿಲ್ಲ, ಸಮಾನತೆ ಇಲ್ಲ ಉನ್ನಾವ್ ಹತ್ಯೆಖಂಡ ಮಣಿಪುರದಲ್ಲಿ ಸಾವು-ನೋವು ಸಂಭವಿಸಿದರು ಪ್ರಧಾನಿ ನರೇಂದ್ರಮೋದಿರವರು ಗಮನಹರಿಸಿಲ್ಲ.

ಒಲಂಪಿಕ್ ಪದಕ ವಿಜೇತರಿಗೆ ರಸ್ತೆಯಲ್ಲಿ ಹೊಡೆದು, ಜೈಲುಗಟ್ಟಿದರು. ಕೇಂದ್ರ ಸರ್ಕಾರ. ಪ್ರಧಾನಿ ನರೇಂದ್ರಮೋದಿ ರವರು ಮೇಕಪ್ ಮಾಡಿಕೊಂಡು ದೇಶದ ಜನರಿಗೆ ನಾಟಕ ಪ್ರದರ್ಶನ ಮಾಡುತಿದ್ದಾರೆ.

ಪ್ರಧಾನಿ ದೇಶದ ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಜಾತಿವಾದ, ಕೋಮುವಾದ ಬಿಜೆಪಿ ಪಕ್ಷವಾಗಿದೆ. ಕಾಂಗ್ರೆಸ್ ಪಕ್ಷ ಸಂವಿಧಾನ ಎತ್ತಿ ಹಿಡಿಯುವ ಮತ್ತು ಎಲ್ಲಾ ಜಾತಿ, ಧರ್ಮದವರು ಸಹೋದರರಂತೆ ಬಾಳುವ ಸಿದ್ಧಾಂತ ನಂಬಿಕೆವುಳ್ಳವುರು.

ರೈತ ವಿರೋದಿ ಒಪ್ಪಂದ ರದ್ದು ಮಾಡಬೇಕು ಎಂದು ರಾಜ್ಯ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಕೆಪಿಸಿಸಿ ಅಧ್ಯಕ್ಷರು, ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರ ನೇತೃತ್ವ ಮಾರ್ಗದರ್ಶನದಲ್ಲಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

## ವಿಳಂಬವಾಗಿ ಮೇಲ್ಮನವಿ ಸಲ್ಲಿಸಿದರೆ ಪರಿಗಣಿಸಲಾಗದು ಎಂದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಶಾಸನಬದ್ಧ ಪ್ರಾಧಿಕಾರವೊಂದು ಸಾಕಷ್ಟು ವಿಳಂಬವಾಗಿ ಮೇಲ್ಮನವಿ ಸಲ್ಲಿಸಿದೆ ಎಂಬ ಒಂದೇ ಕಾರಣಕ್ಕೆ ಕಾನೂನು ಮಿತಿಗಳನ್ನು ಮೀರಿ ಕಾರ್ಯನಿರ್ವಹಿಸಲಾಗದು ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಭೂಸ್ವಾಧೀನ ಪ್ರಕ್ರಿಯೆ ಅಧಿಸೂಚನೆ ರದ್ದುಪಡಿಸಿದ್ದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ.

ಧರ್ಮಸ್ಥಳ ಗ್ರಾಮದ ಡಾ.ಡಿ.ವೀರೇಂದ್ರ ಹೆಗ್ಗಡೆ ಸೇರಿ ಮತ್ತಿತರರಿಗೆ ಸೇರಿದ್ದ ಜಮೀನಿನ ಸ್ವಾಧೀನಕ್ಕಾಗಿ ಹೊರಡಿಸಿದ್ದ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ರದ್ದು ಪಡಿಸಿದ್ದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಮುಡಾ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾ.ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿತು.

ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಸುಮಾರು 460ಕ್ಕೂ ಹೆಚ್ಚು ದಿನಗಳ ವಿಳಂಬವಾಗಿ ಮುಡಾ ಮೇಲ್ಮನವಿ ಸಲ್ಲಿಸಿದೆ. ವಿಳಂಬಕ್ಕೆ ಮುಡಾ ನೀಡಿದ ಕಾರಣಗಳು ಅಸ್ಪಷ್ಟವಾಗಿದ್ದು, ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಕಾನೂನು ಮಿತಿಗಳ ಕಾಯಿದೆ (ಲಿಮಿಟೇಷನ್ ಆಕ್ಟ್)ನ ಉದ್ದೇಶವು ದಾವೆಗಳಿಗೆ ಒಂದು ಅಂತಿಮ ರೂಪ ನೀಡುವುದಾಗಿದೆ. ಅಧಿಕಾರಿಗಳ ವಿಳಂಬ ಮತ್ತು ನಿರ್ಲಕ್ಷ್ಯದ ಧೋರಣೆಯನ್ನು ನ್ಯಾಯಾಲಯವು ಒಪ್ಪಲು ಸಾಧ್ಯವಿಲ್ಲ. ಸೂಕ್ತ ಕಾರಣಗಳಿಲ್ಲದೆ ಇಂತಹ ವಿಳಂಬವನ್ನು ಪುರಸ್ಕರಿಸುವುದು ಸಾರ್ವಜನಿಕ ನೀತಿಗೆ ವಿರುದ್ಧ ಎಂದು ತಿಳಿಸಿ ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸಿದೆ.


ಉದಯವಾಹಿನಿ ಚಿತ್ರ



ಅಲ್ಲದೆ, ವಿಳಂಬಕ್ಕೆ ಸಂಬಂಧಿಸಿದಂತೆ ಮುಡಾ ಆಯುಕ್ತರು ಸಲ್ಲಿಸಿರುವ ಪ್ರಮಾಣಪತ್ರ ಅತ್ಯಂತ ಅಸ್ಪಷ್ಟವಾಗಿದೆ.

ಈ ವಿಳಂಬವನ್ನು ಪರಿಗಣಿಸುವುದಕ್ಕೆ ಸೂಕ್ತ ವಿವರಣೆ ನೀಡಿಲ್ಲ. ಇಂತಹ ವಿಳಂಬವನ್ನು ಪರಿಗಣಿಸಿದಲ್ಲಿ ಸತ್ತಂತಿರುವ ಮುಡಾದ ಹಕ್ಕನ್ನು ಮತ್ತೆ ಉಳಿಸಿದಂತಾಗುತ್ತದೆ. ತಮ್ಮ ಹಕ್ಕಿನ ಬಗ್ಗೆ ಶ್ರದ್ದೆ ಇಲ್ಲದವರ ಪರ ಆದೇಶ ನೀಡಿದಂತಾಗುತ್ತದೆ. ಜೊತೆಗೆ, ಲಿಮಿಟೇಷನ್ ಕಾಯಿದೆಯ ಉದ್ದೇಶ ಮತ್ತು ಸಾರ್ವಜನಿಕ ನೀತಿಗೆ ವಿರುದ್ಧವಾಗಿ ನಡೆದಂತಾಗಲಿದ್ದು, ಪ್ರತಿವಾದಿಗಳಿಗೆ ದೊಡ್ಡ ಅನ್ಯಾಯವನ್ನುಂಟು ಮಾಡಿದಂತಾಗಲಿದೆ ಎಂದು ಪೀಠ ಹೇಳಿದೆ.

ಮುಡಾ ಆಯುಕ್ತರು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಸಮಂಜಸವಾದ ವಿವರಣೆ ಇಲ್ಲವಾಗಿದ್ದು, ಅಲ್ಲಿನ ಅಧಿಕಾರಿಗಳ ನಿರ್ಲಕ್ಷ್ಯ ಮನೋಭಾವದಿಂದ ವಿಳಂಬಕ್ಕೆ ಕಾರಣವಾಗಿದೆ ಎಂಬ ಅಂಶ ಗೊತ್ತಾಗುತ್ತದೆ. ಇಂತಹ ವಿಳಂಬವನ್ನು ಪರಿಗಣಿಸಿದಲ್ಲಿ ಆದ್ದರಿಂದ ಮೇಲ್ಮನವಿ ಅರ್ಜಿ ವಜಾಗೊಳಿಸುತ್ತಿರುವುದಾಗಿ ಪೀಠ ತಿಳಿಸಿತು.



**ಅಧಿಕಾರಿಗಳ ನಿರ್ಲಕ್ಷ್ಯ ಮನೋಭಾವದಿಂದ ವಿಳಂಬ**

**ಮೇಲ್ಮನವಿ ಅರ್ಜಿ ವಜಾ**

### ಪ್ರಕರಣದ ಹಿನ್ನೆಲೆ

ಮೈಸೂರಿನ ಆಲನಹಳ್ಳಿ ಗ್ರಾಮದಲ್ಲಿ ಧರ್ಮಸ್ಥಳದ ಡಾ.ಡಿ.ವೀರೇಂದ್ರ ಹೆಗ್ಗಡೆ ಸೇರಿದಂತೆ ಮತ್ತಿತರರಿಗೆ ಸೇರಿದ್ದ ವಿವಿಧ ಸರ್ವೇ ನಂಬರ್‌ಗಳ ಜಮೀನುಗಳನ್ನು ಆಲನಹಳ್ಳಿ 2ನೇ ಹಂತದ ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು 1992ರ ಜೂನ್ 25ರಂದು ಪ್ರಾಥಮಿಕ ಮತ್ತು 1996ರ ಮಾರ್ಚ್ 18ರಂದು ಮುಡಾ ಅಂತಿಮ ಅಧಿಸೂಚನೆ ಹೊರಡಿಸಿತ್ತು.

ಇದನ್ನು ಪ್ರಶ್ನಿಸಿ ಭೂಮಾಲೀಕರಾದ ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಸಿ.ನಾಗರಾಜು ಎಂಬವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಏಕಸದಸ್ಯ ಪೀಠ, ಭೂ ಸ್ವಾಧೀನಕ್ಕೆ ಹೊರಡಿಸಿದ್ದ ಅಧಿಸೂಚನೆಗಳನ್ನು 2022ರ ಆಗಸ್ಟ್ 1ರಂದು ರದ್ದುಪಡಿಸಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮುಡಾ, ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು.

# ನಿಮ್ಮ ಗೆಲುವಿನಲ್ಲಿ ಸಚಿವರ ಪಾತ್ರ ಎಷ್ಟಿದೆ ಎಂಬುದು ಆತ್ಮವಿಮರ್ಶೆ ಮಾಡಿಕೊಳ್ಳಿ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಎಸ್ಸಿ ಎಸ್ಟಿಗೆ ಬಂದ 3 ಕೋಟಿ ಅನುದಾನವನ್ನು ಚಿಕ್ಕಬಳ್ಳಾಪುರ ದಿಂದ ಚಿಂತಾ ಮಣಿಗೆ ತೆಗೆದು ಕೊಂಡು ಹೋಗಿದ್ದಾರೆ ಎಂದು ಸಚಿವರ ವಿರುದ್ಧ ದೂರಲಾಗಿದೆ. ಇದು ಅಪ್ಪಟ ಸುಳ್ಳು ಎಂದು ಭರಣಿ ವೆಂಕಟೇಶ್ ದೂರಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಚಿವರ ಬಗ್ಗೆ ಮಾಡಿರುವ ಸುಳ್ಳು ಆರೋಪದ ಬಗ್ಗೆ ಸ್ಪಷ್ಟನೆ ನೀಡಲು ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಬುಧವಾರ ನಾವು ಸುದ್ದಿಗೋಷ್ಠಿ ನಡೆಸುವ ವಿಚಾರ ತಿಳಿಯುತ್ತಿದ್ದಂತೆ ಯಾರೋ ಒಬ್ಬರು ಫೋನ್ ಸರ್ ಮಾಡಿ ತಪ್ಪಾಗಿದೆ. ಬೈ ಮಿಸ್ಟೇಕ್ ಅದನ್ನು ಮಾಧ್ಯಮಕ್ಕೆ ಕೊಟ್ಟು ಬಿಟ್ಟಿದ್ದಾರೆ. ಅದೆಲ್ಲಾ ಸುಳ್ಳು, 3 ಕೋಟಿ ಅನುದಾನದ ಪೈಕಿ 99 ಲಕ್ಷ ಮೊದಲು ಕಂತಾಗಿ ಬಿಡುಗಡೆ ಮಾಡಿದ್ದು ಆಕ್ಷನ್ ಪ್ಲಾನ್ ಆಗಿದೆ. ಕಾಮಗಾರಿ ನಡೆಯುತ್ತಿದೆ. ಸುದ್ದಿಗೋಷ್ಠಿಯಲ್ಲಿ ಇದನ್ನು ಪ್ರಸ್ತಾಪ ಮಾಡಬೇಡಿ ಎಂದು ತಿಳಿಸಿದ್ದಾರೆ. ಇದಕ್ಕೆ ಅರ್ಥ ಏನು? ಮೀಡಿಯಾಗೆ ಕೊಟ್ಟು



ಪ್ರಸಾರ ಆದ ಮೇಲೆ ನಿಲ್ಲಿಸಿ ಎಂದರೆ ಹೇಗೆ ಎಂದ ಅವರು ಈ ಸುದ್ದಿ ನೋಡಿರುವ ಜನತೆ ಹೌದು ಇದು ನಿಜವೇನೋ ಎಂದು ಅರಿಯುವುದಿಲ್ಲವೆ ಎಂದು ಬೇಸರಿಸಿದರು.

2025-26ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ ಎನ್ನುವ ಬದಲಿಗೆ ಚಿಂತಾಮಣಿ ವಿಧಾನ ಸಭಾ ಕ್ಷೇತ್ರ ಎಂದು ತಪ್ಪಾಗಿ ನಮೂದಾಗಿದೆ ಅಷ್ಟೇ.ಇದನ್ನು ಅರಿಯದ ಸ್ಥಳಿಯ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ದೀನ ದಲಿತ ವಿರೋಧಿ, ನನ್ನ ಕ್ಷೇತ್ರದ ಪಜಾತಿ, ವರ್ಗದ ಅಭಿವೃದ್ದಿಗೆ ಬಂದಿದ್ದ 3 ಕೋಟಿಯನ್ನು ಚಿಂತಾಮಣಿಗೆ ಸಾಗಿಸಿ ನಮ್ಮ ದಲಿತರಿಗೆ ದ್ರೋಹ ಬಗೆದಿದ್ದಾರೆ.ಶಾಸಕ ಪ್ರದೀಪ್ ಈಶ್ವರ್ ಅವರು ಅಂಬೇಡ್ಕರ್ ಜಯಂತಿಗೆ ಬರದಿರಲು ಇದೂ ಒಂದು ಮುಖ್ಯ ಕಾರಣ. ದಲಿತರ ಅಭಿವೃದ್ದಿಯ ತಂಟೆಗೆ ಬಂದರೆ ನಾನು ಸುಮ್ಮನಿರುವುದಿಲ್ಲ ಎಂಬ ಸಂದೇಶವನ್ನು ಯೂಟ್ಯೂಬ್ ಮತ್ತು ಸೋಷಿಯಲ್ ಮೀಡಿಯಾದಲ್ಲಿ ಹಾಕಿದ್ದಾರೆ. ಸ್ವಾಮಿ ನಮ್ಮ ಸಚಿವರು ನೀವು ಹೇಳಿದಂತೆ ಅಲ್ಲ. ನಿಮ್ಮನ್ನು ಈ ಸ್ಥಿತಿಯಲ್ಲಿ ನೋಡಲು ಅವರು ಸಾಕಷ್ಟು ಕಷ್ಟಪಟ್ಟಿದ್ದಾರೆ ಎಂದರು. ಉಸ್ತುವಾರಿ ಸಚಿವವರಿಗೆ ಚಿಕ್ಕಬಳ್ಳಾಪುರ ಕ್ಷೇತ್ರದ 3ಕೋಟಿ ಹಣ ಬಳಸಿಕೊಂಡೇ ಅಭಿವೃದ್ದಿ ಮಾಡಬೇಕಿಲ್ಲ.ಅದಿರಲಿ ಅವರು ಸಚಿವರಾದ ಮೇಲೆ ಇಲ್ಲಿಗೆ ಎಷ್ಟುಕೋಟಿ ಅನುದಾನ ತಂದಿದ್ದಾರೆ ಎಂಬ ಲೆಕ್ಕ ಹೇಳುತ್ತೇನೆ ಎಂದರು.ಮೆಡಿಕಲ್ ಸಂಶೋಧನಾ ಕೇಂದ್ರಕ್ಕೆ ಬಾಕಿಯಿದ್ದ 340 ಕೋಟಿ ಬಿಡುಗಡೆ, ಹೊಸ ಕಟ್ಟಡದಲ್ಲಿ ವೈದ್ಯಕೀಯ ಉಪಕರಣ ಖರೀದಿ ಮಾಡಲು 40 ಕೋಟಿ.ರಸ್ತೆ ಅಪಘಾತ ತಪ್ಪಿಸಲು ವೈದ್ಯಕೀಯ ಕಾಲೇಜು ಬಳಿ ಕಿರಿದಾದ ರಸ್ತೆ ಅಗಲೀಕರಣ ಮಾಡಲು ಲೋಕೋಪಯೋಗಿ ಇಲಾಖೆಯಿಂದ 2.40 ಕೋಟಿ, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಬರುವ ಕೆಇಎ ಡಯಾಗ್ನಸ್ಟಿಕ್ ಸೆಂಟರ್ ಮಾಡಲು 8.20 ಕೋಟಿ ಇಪ್ಪತ್ತು ಲಕ್ಷ ಎಂ.ಆರ್.ಐ ಯಂತ್ರ ಅಳವಡಿಸಲು 11 ಕೋಟಿ, ಸಿಟಿ ಸ್ಕ್ಯಾನ್ ಉನ್ನತೀ ಕರಿಸಲು 7 ಕೋಟಿ ಕೊಟ್ಟಿದ್ದಾರೆ.ಯುಜಿಡಿ ನೀರು ಗೋಪಾಲಕೃಷ್ಣ ಕರೆಗೆ ಹರಿಯುವುದನ್ನು ತಡೆಯಲು 30 ಕೋಟಿ ಕೊಡಿಸಿದ್ದಾರೆ.

### 6 ಕೋಟಿ ಅನುದಾನ

**ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣ ಅಭಿವೃದ್ದಿಗೆ 10 ಕೋಟಿ ಅನುದಾನ ಮಂಜೂರು ಮಾಡಿದ್ದಾರೆ. ಸರಕಾರಿ ಪದವಿ ಮಹಿಳಾ ಕಾಲೇಜಿಗೆ 6 ಕೋಟಿ ಅನುದಾನ,ಸರಕಾರಿ ಪ್ರಥಮದರ್ಜೆ ಕಾಲೇಜು (ಮುನ್ಸಿಪಲ್) ಅಭಿವೃದ್ದಿಗೆ 6 ಕೋಟಿ, ನಂದಿಬೆಟ್ಟ ದೀಪಾಲಂಕಾರಕ್ಕೆ 9 ಕೋಟಿ. ಅಂತರಾಷ್ಟ್ರೀಯ ಹೂವಿನ ಮಾರುಕಟ್ಟೆಗೆ 140 ಕೋಟಿ ರೂಪಾಯಿ ಕ್ಯಾಬಿನೆಟ್‌ನಲ್ಲಿ ಇಟ್ಟು 20 ಎಕರೆ ಭೂ ಮಂಜೂರಿ ಮಾಡಿಸಿದ್ದಾರೆ.**

## ಕಾಂಪೌಂಡ್ ತೆರವಿಗೆ ಅಧಿಕಾರಿಗಳ ಸೂಚನೆ

• **ಉದಯವಾಹಿನಿ, ಗುಡಿಬಂಡೆ**

ತಾಲ್ಲೂಕಿನ ವರ್ಲಕೊಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾರ್ವಜನಿಕ ಕುಡಿ ಯುವ ನೀರಿನ ಕೊಳವೆಬಾವಿಯನ್ನು ಖಾಸಗಿ ವ್ಯಕ್ತಿಯೊಬ್ಬರು ಅತಿಕ್ರಮಿಸಿ ಕಾಂಪೌಂಡ್ ನಿರ್ಮಿಸಿ ರುವ ಘಟನೆ ಬೆಳಕಿಗೆ ಬಂದಿದ್ದು, ಗ್ರಾಮಸ್ಥರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಪೋಲಂಪಲ್ಲಿ ಮತ್ತು ಜಂಗಾಲಹಳ್ಳಿ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಹಲವು ವರ್ಷಗಳ ಹಿಂದೆ ಈ ಕೊಳವೆ ಬಾವಿ ಕೊರೆಸಲಾಗಿತ್ತು. ಇದಕ್ಕೆ ಪ್ರತ್ಯೇಕ ವಿದ್ಯುತ್ ಟ್ರಾನ್ಸ್ಫಾರ್ಮರ್ ಕೂಡ ಅಳವಡಿಸಲಾಗಿತ್ತು. ಆದರೆ, ಇತ್ತೀಚೆಗೆ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವವರು ಈ ಜಾಗ ತಮ್ಮದೆಂದು ಹಕ್ಕು ಸಾಧಿಸಿದ್ದು, ಕೊಳವೆಬಾವಿ ಹಾಗೂ ಟ್ರಾನ್ಸ್ಫಾರ್ಮರ್ ಸೇರಿಸಿಕೊಂಡು ಕಾಂಪೌಂಡ್ ನಿರ್ಮಿಸಿಕೊಂಡಿದ್ದಾರೆ ಎಂದು ಗ್ರಾಮಸ್ಥರು ಗಂಭೀರ ಆರೋಪ ಮಾಡಿದ್ದಾರೆ.

ವಿಷಯ ತಿಳಿದ ತಕ್ಷಣ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಪೂಜಪ್ಪ ಹಾಗೂ ಕುಡಿಯುವ ನೀರು ಸರಬರಾಜು ಇಲಾಖೆ ಅಧಿಕಾರಿ ನವೀನ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಗ್ರಾಮಸ್ಥರು ಹಾಗೂ ಖಾಸಗಿ ವ್ಯಕ್ತಿ ಯ ನಡುವೆ ತೀವ್ರ ವಾಕ್ಸಮರ ಏರ್ಪಟ್ಟಿತು. ಜಮೀನು ಮಾಲೀಕರು ತಮ್ಮ ಸರ್ವೆ ವರದಿಯ ಪ್ರಕಾರ ಇದು ತಮ್ಮ ಜಾಗವೆಂದು ವಾದಿಸಿದರು.ಅಧಿಕಾರಿಗಳು ರಸ್ತೆಯ ಮಧ್ಯಭಾಗದಿಂದ ಅಳತೆ ಮಾಡಿದಾಗ, ಕೊಳವೆಬಾವಿ ಇರುವ ಜಾಗವು ರಸ್ತೆಗೆ ಸೇರಿದ್ದು ಎಂಬುದು ಪ್ರಾಥಮಿಕವಾಗಿ ದೃಢಪಟ್ಟಿದೆ. ನಿಯಮಗಳ ಪ್ರಕಾರ ರಸ್ತೆಯ ಮಧ್ಯಭಾಗ ದಿಂದ 40 ರಿಂದ 50 ಅಡಿ ವ್ಯಾಪ್ತಿಯ ಜಾಗವು ರಸ್ತೆಗೆ ಸೇರುತ್ತದೆ.

## ರಕ್ತದಾನ ಜೀವದಾನಕ್ಕೆ ಸಮಾನ

• **ಉದಯವಾಹಿನಿ, ಗೌರಿಬಿದನೂರ**

ರಕ್ತದಾನ ಜೀವದಾನಕ್ಕೆ ಸಮಾನ. ಆದ್ದರಿಂದ ಆರೋಗ್ಯವಂತ ವ್ಯಕ್ತಿಗಳು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಬೇಕು ಎಂದು ಹಿರಿಯ ವಾಣಿಜ್ಯೋದ್ಯಮಿ ಬಿ.ಆರ್. ಶ್ರೀನಿವಾಸ್ ಮೂರ್ತಿ ತಿಳಿಸಿದರು.

ಅವರು ನಗರದ ವಾಸವಿ ದೇವಸ್ಥಾನದಲ್ಲಿ ವಾಸವಿ ಯುವಜನ ಸಂಘ ,ವಾಸವಿ ಜಯಂತಿ ಪ್ರಯುಕ್ತ ರೆಡ್ ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಬೃಹತ್ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು. ತಜ್ಞ ವೈದ್ಯರ ಪ್ರಕಾರ ಒಂದು ಯೂನಿಟ್ ರಕ್ತ ಮೂರು ಜನರ ಜೀವವನ್ನು ಉಳಿಸಬಲ್ಲದು, ಅಲ್ಲದೆ ನಾವು ದಾನ ಮಾಡಿದ ರಕ್ತ ಮತ್ತೆ ನಮ್ಮ ದೇಹದಲ್ಲಿ ಕೇವಲ 48 ಗಂಟೆಗಳಲ್ಲಿ ಮರು ಉತ್ಪತ್ತಿ ಯಾಗುತ್ತದೆ. ಆದ್ದರಿಂದ ತಪ್ಪು ಕಲ್ಪನೆ ಹಾಗೂ ಮೂಢ ನಂಭಿಕೆಗಳನ್ನು ಬಿಟ್ಟು ರಕ್ತದಾನ ಮಾಡ ಬೇಕು ಎಂದ ಅವರು ರಕ್ತದಾನ ಶಿಬಿರವನ್ನು ಏರ್ಪಡಿಸುವ ಮೂಲಕ ವಾಸವಿ ಯುವಜನ ಸಂಘ ಉತ್ತಮ ಸಮಾಜಮುಖಿ ಕಾರ್ಯ ಮಾಡಿದೆ ಎಂದು ಶ್ಲಾಘಿಸಿದರು. ವಾಸವಿ ಯುವಜನ ಸಂಘದ ಅಧ್ಯಕ್ಷ ಸುಮನ್ ಮಾತನಾಡಿ, ರಕ್ತದಾನ ಮಾಡಲು ಸಾಕಷ್ಟು ಸಮಯ ತೆಗೆದುಕೊಳ್ಳುವುದಿಲ್ಲ. ಕೇವಲ ಹತ್ತು ನಿಮಿಷಗಳಲ್ಲಿ ರಕ್ತದಾನ ಮಾಡಬಹುದು ,ಇಪ್ಪತ್ತು ನಿಮಿಷಗಳಲ್ಲಿ ಚೇತರಿಸಿಕೊಳ್ಳಬಹುದು, ಆರೋಗ್ಯವಂತ ವ್ಯಕ್ತಿಗಳು ಕಾಲ ಕಾಲಕ್ಕೆ ರಕ್ತದಾನ ಮಾಡುವುದರಿಂದ ಹೃದಯ ರಕ್ತ ನಾಳಗಳು ಶುದ್ಧಗೊಳ್ಳುವುದು, ಮಧುಮೇಹ ಕಡಿವಾಣ ಸೇರಿ ದಂತೆ ಅನೇಕ ಆರೋಗ್ಯದ ಲಾಭಗಳಿವೆ ಎಂದರು.

# ಶೇ.50 ರಷ್ಟು ಮಾವು ಫಸಲು ಕುಂಠಿತ

**ಈ ವರ್ಷ ಹವಾಮಾನ ವೈಪರೀತ್ಯವು ಮಾವು ಬೆಳೆಗಾರರ ಮೇಲೆ ಗಂಭೀರ ಪರಿಣಾಮ ಬೀರಿದೆ. ಸಾಧಾರಣವಾಗಿ ಈ ವೇಳೆಗೆ ಮಾರುಕಟ್ಟೆಗೆ ಬರಬೇಕಿದ್ದ ಫಸಲು ಅರ್ಧದಷ್ಟು ಕಡಿಮೆಯಾಗಿದೆ. ಜಿಲ್ಲೆಯ ಒಟ್ಟಾರೆ ಇಳುವರಿಯಲ್ಲಿ ಸುಮಾರು ಶೇ. 50 ರಷ್ಟು ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.**

• **ಉದಯವಾಹಿನಿ, ರಾಮನಗರ**

ರಾಜ್ಯದ ಪ್ರಮುಖ ಮಾವು ಬೆಳೆಯುವ ಜಿಲ್ಲೆಗಳಲ್ಲಿ ಒಂದಾದ ರಾಮನಗರದಲ್ಲಿ ಈ ಬಾರಿ ಮಾವು ಬೆಳೆಗಾರರ ಸ್ಥಿತಿ ಶೋಚನೀಯವಾಗಿದೆ. ಹವಾಮಾನ ವೈಪರೀತ್ಯ, ಹಾಗೂ ಕೀಟ, ರೋಗಬಾಧೆಯಿಂದಾಗಿ ಜಿಲ್ಲೆಯಲ್ಲಿ ಸುಮಾರು ಶೇ.50 ರಷ್ಟು ಮಾವು ಫಸಲು ನಷ್ಟವಾಗಿದ್ದು, ಮಾವು ಬೆಳೆಗಾರರು ಕಂಗಾಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸೂಕ್ತ ಪರಿಹಾರಕ್ಕಾಗಿ ಒತ್ತಾಯಿಸಿ ಸರಕಾರದ ಮೊರೆ ಹೋಗಲು ಸಜ್ಜಾಗಿದ್ದಾರೆ. ರಾಜ್ಯದಲ್ಲಿಯೇ ಮಾವು ಬೆಳೆಯಲ್ಲಿ ಎರಡನೇ ಸ್ಥಾನ ಗಳಿಸಿರುವ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 27 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಈ ಬಾರಿ ಅವಧಿಗೂ ಮೊದಲೇ ಮಾವಿನ ಮರಗಳಲ್ಲಿ ಹೂಬಿಡಲು ಶುರುವಾಗಿತ್ತು. ಡಿಸೆಂಬರ್ ತಿಂಗಳ ಕೊನೆಯ ವಾರದವರೆಗೂ ಫ್ಲವರಿಂಗ್ ಚೆನ್ನಾಗಿಯೇ ಆಗಿತ್ತು. ಮರದ ತುಂಬೆಲ್ಲಾ ಅರಳಿ ನಿಂತಿದ್ದ ಹೂವಿನ ಗೊಂಚಲುಗಳನ್ನು ನೋಡಿ ಮಾವು ಬೆಳೆಗಾರರಿಗೂ ಸಂತಸವಾಗಿತ್ತು. ಆದರೆ ಜನವರಿ ಅಂತ್ಯದಲ್ಲಿ ಉಂಟಾದ ಹವಾಮಾನ ವೈಪರೀತ್ಯ, ಕೀಟ, ರೋಗಬಾಧೆ ಹಾಗೂ ತೇವಾಂಶದ ಕೊರತೆ ಎಲ್ಲರ ಲೆಕ್ಕಾಚಾರವನ್ನು ಬುಡಮೇಲಾಗಿಸಿತ್ತು.

**ಮಾವು ಬೆಳೆ ಹಾನಿಯ ಬಗ್ಗೆ ಸಮೀಕ್ಷೆ:** ಹೀಗಾಗಿ ಜಿಲ್ಲೆಯಲ್ಲಿ ಮಾವು ಬೆಳೆಗೆ ಉಂಟಾಗಿರುವ ಹಾನಿಯ ಬಗ್ಗೆ ಸಮೀಕ್ಷೆ ನಡೆಸಿ, ಸೂಕ್ತ ಪರಿಹಾರ ನೀಡುವಂತೆ ಜಿಲ್ಲಾ ಮಾವು ಮತ್ತು ತೆಂಗು ಬೆಳೆ ರೈತ ಉತ್ಪಾದಕರ ಕಂಪನಿ ಹಾಗೂ ಮಾವು ಬೆಳೆಗಾರರು ಆಗ್ರಹಿಸಿದ್ದರು. ಜಿಲ್ಲೆಯಲ್ಲಿ 30 ಸಾವಿರಕ್ಕೂ ಅಧಿಕ ಕುಟುಂಬಗಳು ಮಾವನ್ನು ನಂಬಿ ಜೀವನ ಸಾಗಿಸುತ್ತಿವೆ. ಆದರೆ ಕಳೆದ 3 ವರ್ಷಗಳಿಂದ ಸತತವಾಗಿ ಬೆಳೆಹಾನಿಯಾಗುತ್ತಿದ್ದು, ಬೆಳೆಗಾರರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಆದ್ದರಿಂದ ಜಂಟಿ ಸಮೀಕ್ಷೆ ನಡೆಸಿ ಮಾವು ಬೆಳೆಯ ನಷ್ಟವನ್ನು ಸಮರ್ಪಕವಾಗಿ ಲೆಕ್ಕ ಹಾಕಿ ಸೂಕ್ತ ಪರಿಹಾರ ನೀಡುವಂತೆ ತೋಟಗಾರಿಕೆ ಇಲಾಖೆ ಹಾಗೂ ಜಿಲ್ಲಾಧಿಕಾರಿಯವರಿಗೆ ಮನವಿ ಮಾಡಿದ್ದರು. ಈ ಮನವಿಗೆ ಸ್ಪಂದಿಸಿರುವ ಜಿಲ್ಲಾಡಳಿತ ಕಂದಾಯ ಇಲಾಖೆಯ (ವಿಪತ್ತು ನಿರ್ವಹಣೆ) ಸರಕಾರದ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದು ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ. ಇದರ ಬೆನ್ನಲ್ಲೇ ಜಿಲ್ಲೆಯ ಮಾವು ಬೆಳೆಗಾರರ ನಿಯೋಗವು ಉಪಮುಖ್ಯಮಂತ್ರಿ ಹಾಗೂ ಜಿಲ್ಲೆಯವರೇ ಆದ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಲು ತೀರ್ಮಾನಿಸಿದೆ. ಡಿಸಿಎಂ ಡಿಕೆಶಿ ಎದುರು ಮಾವು ಬೆಳೆಗಾರರ ಪರಿಸ್ಥಿತಿ ಮತ್ತು ಸಂಕಷ್ಟಗಳನ್ನು ಹೇಳಿಕೊಳ್ಳುವ ಮೂಲಕ ಸರಕಾರದ ಮಟ್ಟದಲ್ಲಿಗಮನ ಸೆಳೆಯಲು ಸಜ್ಜಾಗಿದ್ದಾರೆ.



ಉದಯವಾಹಿನಿ ಚಿತ್ರ

### ಮಾವು ಬೆಳೆಗಾರರು ಸಂಕಷ್ಟಕ್ಕೆ

**ಈ ಬಗ್ಗೆ ವಿಕ ಜತೆ ಮಾತನಾಡಿರುವ ಜಿಲ್ಲಾಮಾವು ಮತ್ತು ತೆಂಗು ಬೆಳೆ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ಧರಣೇಶ್ ಕುಮಾರ್, ಜಿಲ್ಲೆಯ ಮಾವು ಬೆಳೆಗಾರರಿಗೆ ಕಳೆದ 3 ವರ್ಷದಿಂದಲೂ ಭಾರಿ ನಷ್ಟವಾಗುತ್ತಿದೆ. ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಜಿಲ್ಲೆಯಲ್ಲಿ ಶೇ.50 ರಷ್ಟು ಇಳುವರಿ ಕುಂಠಿತವಾಗಿದ್ದು, ಮಾವು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.**

**ಹೀಗಾಗಿ ಮಾವು ಬೆಳೆಹಾನಿ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ, ಪ್ರತಿ ಹೆಕ್ಟೇರ್‌ಗೆ 60 ಸಾವಿರ ರೂಪಾಯಿ ಪರಿಹಾರ ನೀಡುವಂತೆ ಮನವಿ ಮಾಡುವಂತೆ ಮನವಿ ಮಾಡಿಕೊಂಡಿದ್ದೆವು. ಇದೀಗ ಜಿಲ್ಲಾಡಳಿತ ಈ ಬಗ್ಗೆ ನಿರ್ದೇಶನ ನೀಡುವಂತೆ ಸರಕಾರಕ್ಕೆ ಪತ್ರ ಬರೆದಿದೆ. ಹೀಗಾಗಿ ನಾವು ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ಅರ್ಥಮಾಡಿಸಲಿದ್ದೇವೆ ಎಂದು ತಿಳಿಸಿದ್ದಾರೆ.**



### ಬಾದಾಮಿ ಮಾವು

**ಮುಖ್ಯವಾಗಿ ಜಿಲ್ಲೆಯಲ್ಲಿ ಬಾದಾಮಿ ತಳಿಯ ಮಾವು ಈ ಬಾರಿ ಕೈಕೊಟ್ಟಿದೆ. ಜಿಲ್ಲೆಯಲ್ಲಿ ಅತೀ ಹೆಚ್ಚು ಬಾದಾಮಿ ತಳಿಯ ಮಾವನ್ನೇ ಬೆಳೆಯಲಾಗುತ್ತದೆ. ಬರೋಬ್ಬರಿ 22,830 ಹೆಕ್ಟೇರ್ ವಿಸ್ತೀರ್ಣದಲ್ಲಿ ಬಾದಾಮಿ ಮಾವನ್ನು ಬೆಳೆಯಲಾಗುತ್ತದೆ. ಕಳೆದ ಬಾರಿ 1,96,690 ಮೆಟ್ರಿಕ್ ಟನ್ ಬಾದಾಮಿ ಇಳುವರಿ ಬಂದಿತ್ತು. ಆದರೆ ಈ ವರ್ಷ ಕೇವಲ 82,667 ಮೆಟ್ರಿಕ್ ಟನ್ ಇಳುವರಿ ಬರುವ ನಿರೀಕ್ಷೆಯಿದೆ. ಈ ಮೂಲಕ ಶೇ.60ಕ್ಕಿಂತ ಅಧಿಕ ಬಾದಾಮಿ ಇಳುವರಿ ಕುಂಠಿತವಾಗಲಿದೆ ಎಂದು ಅಂದಾಜಿಸಲಾಗಿದೆ.**

# ಧರ್ಮ ರಕ್ಷಣೆಗೆ ಒತ್ತು ನೀಡಿದ್ದ ಶಂಕರಾಚಾರ್ಯ

• **ಉದಯವಾಹಿನಿ, ತುಮಕೂರು**

ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದ ಪೀಠಗಳು ಇಂದಿಗೂ ದೇಶವನ್ನು ಧಾರ್ಮಿಕವಾಗಿ ಮುನ್ನಡೆಸುತ್ತಿವೆ ಎಂದು ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ಪರಮಾನಂದಜೀ ಅಭಿಪ್ರಾಯಪಟ್ಟರು.

ನಗರದಲ್ಲಿ ಜಿಲ್ಲಾ ಆಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ ಬ್ರಾಹ್ಮಣ ಸಭಾ ಹಾಗೂ ಶ್ರೀಶಂಕರ ಸೇವಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ



ಶಂಕರಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಅನ್ಯ ಧರ್ಮಗಳ ದಾಳಿಯಿಂದ ಭಾರತದಲ್ಲಿ ಹಿಂದೂ ಧರ್ಮ ಶಿಥಿಲಾವಸ್ಥೆ ತಲುಪಿದ ಸಂದರ್ಭದಲ್ಲಿ ಹುಟ್ಟಿದ ಭಗವತ್ಪಾದರು, ಇಡೀ ದೇಶವನ್ನು ಬರಿಗಾಲಲ್ಲಿ ಸುತ್ತಿದರು. ತಾವು ನಂಬಿದ್ದ ಸಿದ್ಧಾಂತದ ಮೇಲೆ ಪೀಠಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಜನರನ್ನು ಜಾಗೃತಗೊಳಿಸಿದರು. ಅದರ ಫಲವೇ ಇಂದು ನಾವೆಲ್ಲರೂ ಶಾಂತಿ, ನೆಮ್ಮದಿಯಿಂದ ಬದುಕುವ ವಾತಾವರಣ ಸೃಷ್ಟಿಯಾಗಿದೆ ಎಂದು ಹೇಳಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್, ವೇದ, ಉಪನಿಷತ್ತುಗಳ ಮೇಲಿನ ನಂಬಿಕೆ ಕುಸಿದು, ನಮ್ಮ ಸಂಸ್ಕೃತಿ, ಪರಂಪರೆ ದಾರಿ ತಪ್ಪುವ ಸಮಯದಲ್ಲಿ ಶಂಕರಾಚಾರ್ಯರು ತಮ್ಮ ಅದ್ವೈತ ಸಿದ್ಧಾಂತದ ಮೂಲಕ ಸರಿದಾರಿಗೆ ತಂದರು ಎಂದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ, ಶಂಕರಾಚಾರ್ಯರು ಅತ್ಯಂತ ಕಡಿಮೆ ವಯಸ್ಸಿನಲ್ಲೇ ಅಪಾರವಾದ ಪಾಂಡಿತ್ಯದ ಮೂಲಕ ಜ್ಞಾನ ಸಾಧನೆ ಮಾಡಿದ್ದರು. ಅವರ ಚಿಂತನೆಗಳು ಇಂದಿಗೂ ಪ್ರಸ್ತುತ.

ಸಂಪಾದನೆಸರಿಯಾದ ಮಾರ್ಗದಲ್ಲಿ ಇರಬೇಕು ಎಂದು ಪ್ರತಿಪಾದಿಸಿದ್ದರು. ಜನ್ಮ ಭೂಮಿಗಿಂತ ಮಿಗಿಲಾದುದು ಮತ್ತೊಂದಿಲ್ಲ ಎಂದು ಹೇಳುವ ಮೂಲಕ ರಾಷ್ಟ್ರಪ್ರೇಮವನ್ನು ಜನರಲ್ಲಿ ಬಿತ್ತಿದರು ಎಂದು ತಿಳಿಸಿದರು.

# ಬಪಕ್ಷಿಗಳ ದಾಹ ನೀಗಿಸಲು ಮುಂದಾದ ಮುಖ್ಯ ಶಿಕ್ಷಕ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಕಾಡಂಚಿನ ಕುಂದಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಕ್ಷಿ ಸಂಕುಲದ ದಾಹ ನೀಗಿಸಲು ಶಾಲಾ ಆವರಣದಲ್ಲಿನ ಗಿಡಗಳಿಗೆ ಮಣ್ಣಿನ ಮಡಿಕೆಗಳನ್ನ ಕಟ್ಟಿ ಹಾಗೂ ಹೊರಾಂಡದಲ್ಲಿ ಮಣ್ಣಿನ ಹರವಿಗಳನ್ನಿರಿಸಿ ನೀರು, ಕಾಳು ಹಾಕುವ ಮೂಲಕ ವಿಶ್ವ ಭೂಮಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ಮಹದೇಶ್ವರಸ್ವಾಮಿ ಮಾತನಾಡಿ, ದಿನದಿಂದ ದಿನಕ್ಕೆ ಬೇಸಿಗೆ ಬಿರುಬಿಸಿಲು ಊಹೆಗೂ ನಿಲುಕದಷ್ಟು ಜಾಸ್ತಿಯಾಗುತ್ತಿದೆ. ಇದರಿಂದ ಜೀವಸಂಕುಲ ತತ್ತರಿಸಿ ಹೋಗುತ್ತಿವೆ. ಇದಕ್ಕೆಲ್ಲಾ ಕಾರಣ ಮನುಷ್ಯನ ಸ್ವಾರ್ಥ ಮತ್ತು ದುರಾಶೆಯಾಗಿದೆ, ಮರಗಿಡಗಳನ್ನು ಬೆಳೆಸದೆ ಇರುವುದು, ಬೆಳಸಿದ ಮರಗಿಡಗಳ ಹನನ ಮಾಡುತ್ತಿರುವುದು ಬಹುಮುಖ್ಯ ಕಾರಣವಾಗಿದೆ , ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಬಳಕೆ, ಅನವಶ್ಯಕವಾಗಿ ನೀರು ಪೋಲು ಮಾಡುವುದು. ಗಾಳಿಯನ್ನು ಅಶುದ್ಧ ಗೊಳಿಸುವುದು ಇಂತಹ ನೀಚ ಕೃತ್ಯಗಳಿಂದ ಸಕಲ ಜೀವರಾಶಿಗಳಿಗೂ ತಾಯಿಯಂತೆ ಆಶ್ರಯ



ಉದಯವಾಹಿನಿ ಚಿತ್ರ

ತಾಣವಾಗಿರುವ ಭೂಮಿ ಬರಡಾಗಿ ನಲುಗಿ ಹೋಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಸಿಲಿನ ದಗೆ ತಾಳಲಾಗದ ಮನುಷ್ಯರಾದ ನಾವು ಛತ್ರಿಗಳ ಆಸರೆ ಪಡೆಯುತ್ತೇವೆ, ಪ್ರತಿಯೊಬ್ಬರೂ ಹೆಚ್ಚು ಹೆಚ್ಚು ಮರಗಿಡಗಳನ್ನು ಹಾಕಿ ಬೆಳೆಸಿ ಉಳಿಸುವ ಮೂಲಕ ಭೂಮಿಗೆ ಛತ್ರಿ ಹಿಡಿದು ತಂಪು ಮಾಡಬೇಕು. ಇದು ನಮಗೋಸ್ಕರ, ನಾವು ಬದುಕುವುದಕೊಸ್ಕರ ಅತೀ ತುರ್ತಾಗಿ ಮಾಡಬೇಕಾದ ಗುರುತರ ಕರ್ತವ್ಯ. ಪರಿಸ್ಥಿತಿ ಈಗಲೇ ಕೈಮೀರಿ ಹೋಗಿದೆ. ಇದು ಹೀಗೆ ಮುಂದುವರೆದರೆ ಮುಂದಿನ ಪೀಳಿಗೆ ಇರಲಿ ಈಗಿನವರೆ ಬದುಕಲು ಕಷ್ಟವಾಗುತ್ತದೆ. ಹುಟ್ಟಿದ ಹಬ್ಬ, ಮದುವೆ ವಾರ್ಷಿಕೋತ್ಸವ, ಹೊಸ ವರ್ಷಾಚರಣೆ ಅಂತ ಹೇಳಿ ಲಕ್ಷಾಂತರ ರೂ. ದುಂದು ವೆಚ್ಚ ಮಾಡಿ ಹಲವು ಕಾರ್ಯಕ್ರಮಗಳನ್ನು ಮಾಡುತ್ತಾರೆ. ಇವು ಯಾವುದು ಸಕಲ ಜೀವರಾಶಿಗಳಿಗೆ ಬೇಕಾದ ಗಾಳಿ, ನೀರು, ಅಹಾರ ನೀಡುವುದಿಲ್ಲ ಎಂದು ತಿಳಿಸಿದರು. ಮರಗಿಡಗಳನ್ನು ಹಾಕಿ ಬೆಳೆಸಿ ಉಳಿಸುವ ಮೂಲಕ ಭೂಮಿ ತಾಯಿಯನ್ನು ಸಂರಕ್ಷಣೆ ಮಾಡೋಣ. ಜಗತ್ತಿನಲ್ಲಿ ಏನಿಲ್ಲದಿದ್ದರು ಬದುಕಬಹುದು. ಆದರೆ ಶುದ್ಧವಾದ ಗಾಳಿ, ನೀರು, ಆಹಾರ ಮಾತ್ರ ಇಲ್ಲದೇ ಬದುಕಲು ಸಾಧ್ಯವಿಲ್ಲ. ಇವು ಭೂಮಿತಾಯಿನೆ ಕೊಡಬೇಕು.

ಈ ಕಟು ಸತ್ಯ, ವಾಸ್ತವವನ್ನು ಈಗಲಾದರೂ ಅರ್ಥ ಮಾಡಿಕೊಂಡು ಯುದ್ದೋ ಪಾದಿಯಲ್ಲಿ ಕಾರ್ಯ ಪ್ರವೃತ್ತರಾಗೋಣ.

ನಮ್ಮ ಮನೆ, ಶಾಲೆ, ಕಾಲೇಜು, ಸರ್ಕಾರಿ ಕಚೇರಿ, ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿ ಪಕ್ಷಿ ಸಂಕುಲಕ್ಕೆ ನೀರು ಆಹಾರ ಒದಗಿಸುವ ಮೂಲಕ ದಯೆ ಮತ್ತು ಮಾನವೀಯತೆ ಮೆರೆದು ಮದುವೆ ವಾರ್ಷಿಕೋತ್ಸವ, ಹೊಸ ವರ್ಷಾಚರಣೆ ಅಂತ ಸರಳವಾಗಿ ಸಂತೋಷವಾಗಿ ಬದುಕೋಣ ಎಂದರು. ವಿಶೇಷವೆಂದರೆ ಈ ವರ್ಷ ಒಂದನೇ ತರಗತಿಗೆ ದಾಖಲಾಗಿರುವ ಭವ್ಯಶ್ರೀ ಎಂಬ ಮಗು ಈ ಶ್ರೇಷ್ಠ ಸತ್ಕಾರ್ಯದಲ್ಲಿ ಭಾಗವಹಿಸಿತ್ತು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು ಮತ್ತು ಮಕ್ಕಳು ಹಾಜರಿದ್ದರು.

## ಜಡೇಸ್ವಾಮಿ ಕೊಂಡೋತ್ಸವ

• **ಉದಯವಾಹಿನಿ, ಹನೂರು**

ತಾಲ್ಲೂಕಿನ ಅಜ್ಜಿಪುರ ದೊಮ್ಮನಗದ್ದೆ ಮಾರ್ಗ ಮಧ್ಯೆ ಇರುವ ಜಡೇಸ್ವಾಮಿ ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು. ಕೊಂಡೋತ್ಸವವನ್ನು 2014ರಲ್ಲಿ ನಡೆಸಲಾಗಿತ್ತು. 12 ವರ್ಷಗಳ ನಂತರ ಅಜ್ಜಿಪುರ, ಸುತ್ತಲಿನ ಗ್ರಾಮಸ್ಥರು ಕೊಂಡೋತ್ಸವವನ್ನು ಸಾಂಪ್ರದಾಯಿಕವಾಗಿ ನೇರವೇರಿಸಿದರು.

ಸೋಮವಾರ ಜಡೇಸ್ವಾಮಿ ಸ್ವಾಮಿಗೆ ವಿಶೇಷ ಪುಷ್ಪ ಅಲಂಕಾರ ಮಾಡಲಾಗಿತ್ತು. ಸಂಜೆ 5 ಗಂಟೆಗೆ ಮಹದೇಶ್ವರ ದೇವಾಲಯದ ಬಳಿ ಸ್ವಾಮಿಯ ಗಂಡುಗೋರಲಿ, ಸತ್ತಿಗೆ, ಸೂರಪಾನಿ ಅಲಂಕರಿಸಿ ಪೂಜೆ ಸಲ್ಲಿಸಿದರು.

ಮೆರವಣಿಗೆಯಲ್ಲಿ ವಾದ್ಯ ಮೇಳಗಳೊಂದಿಗೆ ದೇವರು, ಸತ್ತಿಗೆ, ಸುರಾಪನಿ, ಹಾಲಾರವಿ ನೇರವೇರಿಸಲಾಯಿತು. 6 ಗಂಟೆಗೆ ಅರ್ಚಕರು, ಹರಕೆ ಹೊತ್ತ ಭಕ್ತರು ಕೊಂಡ ಹಾಯ್ದರು.

**ಅನ್ನ ಸಂತರ್ಪಣೆ:** ಕೊಂಡೋತ್ಸವದಲ್ಲಿ ಪಾಲ್ಗೊಂಡ ಭಕ್ತರಿಗೆ ಮುದ್ದೆ, ಅನ್ನ, ದ್ವಿದಳ ಧಾನ್ಯದ ಸಾಂಬಾರು, ಪಾಯಸ, ಪಲ್ಯಗಳ ಅನ್ನ ಸಂತರ್ಪಣೆ ಮಾಡಲಾಯಿತು.

ಅರ್ಚಕರಾದ ಚಿನ್ನು, ನಾಗರಾಜ್, ಮುನಿರಾಜು, ರಾಜೇಂದ್ರ, ಚಂದು, ಗಾವಳಿ ಪಚ್ಚಮ್ಮಲ್ಲೇಗೌಡ, ಶಂಕರ್, ರಾಜೇಶ್, ಯಜಮಾನರಾದ ರಾಮೇಗೌಡ, ಮುತ್ತೇಗೌಡ, ಕುಪ್ಪೆಗೌಡ, ಭಕ್ತರು ಭಾಗವಹಿಸಿದ್ದರು.

# ಮಹಿಳಾ ಮೀಸಲಾತಿ ನಾರಿ ಶಕ್ತಿಗೆ ಸಲ್ಲುವ ಸಂವಿಧಾನಾತ್ಮಕ ಹಕ್ಕು

• **ಉದಯವಾಹಿನಿ, ರಾಮನಗರ**

ಮಹಿಳಾ ಮೀಸಲಾತಿ ಎಂಬ ಮಹತ್ವದ ವಿಷಯದಲ್ಲಿ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು, ವಿಶೇಷವಾಗಿ ಇಂಡಿ ಒಕ್ಕೂಟ, ತೋರಿಸಿರುವ ನಿರ್ಲಕ್ಷ್ಯ ಮತ್ತು ದ್ವಂದ್ವ ನಿಲುವು ದೇಶದ ಮಹಿಳೆಯರಿಗೆ ಮಾಡಿದ ಅವಮಾನ ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ಧಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರ ಸಬಲೀಕರಣದ ಹೆಸರಿನಲ್ಲಿ ಮಾತಿನ ಮಟ್ಟಕ್ಕೆ ಸೀಮಿತಗೊಂಡಿರುವ ಕಾಂಗ್ರೆಸ್ ಪಕ್ಷದ ರಾಜಕೀಯ ನಡೆ, ನಿಜವಾದ ಅರ್ಥದಲ್ಲಿ ನಾರಿ ಶಕ್ತಿಗೆ ಮಾಡಿದ ಮಹಾ ಅನ್ಯಾಯ ಮತ್ತು ಅವಮಾನವೆಂದು ಅವರು ಹೇಳಿದರು.

ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಒದಗಿಸುವುದು ಕೇವಲ ಚುನಾವಣಾ ಘೋಷಣೆಗಳಲ್ಲದೇ, ಅದು ಸಾಮಾಜಿಕ ನ್ಯಾಯದ ಮೂಲಭೂತ ಅಂಶವಾಗಿರಬೇಕು. ಆದರೆ, ಕಾಂಗ್ರೆಸ್ ಪಕ್ಷವು ವರ್ಷಗಳ ಕಾಲ ಅಧಿಕಾರದಲ್ಲಿದ್ದರೂ ಮಹಿಳಾ ಮೀಸಲಾತಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಫಲವಾಗಿದೆ ಎಂಬುದನ್ನು ಅವರು ಉಲ್ಲೇಖಿಸಿದರು. ಇಂತಹ ದ್ವಂದ್ವ ನೀತಿಗಳು ಮಹಿಳೆಯರ ವಿಶ್ವಾಸಕ್ಕೆ ಧಕ್ಕೆ ತರುವುದಲ್ಲದೆ, ದೇಶದ ಪ್ರಗತಿಗೆ ಅಡ್ಡಿಯಾಗುತ್ತವೆ



ಉದಯವಾಹಿನಿ ಚಿತ್ರ

ಎಂದು ಹೇಳಿದರು. ಮಹಿಳಾ ಸಬಲೀಕರಣದ ವಿಚಾರದಲ್ಲಿ ಪ್ರಧಾನಿ ನೇತೃತ್ವದ ಸರ್ಕಾರ ಕೈಗೊಂಡಿರುವ ದಿಟ್ಟ ನಿರ್ಧಾರಗಳು ಹಾಗೂ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಬದ್ಧತೆ ದೇಶದ ಮಹಿಳೆಯರಿಗೆ ಹೊಸ ಆಶಾಭಾವನೆ ಮೂಡಿಸಿದೆ ಎಂದು ಅವರು ಶ್ಲಾಘಿಸಿದರು. ನಿಜವಾದ ಅರ್ಥದಲ್ಲಿ ಮಹಿಳೆಯರಿಗೆ ಗೌರವ, ಹಕ್ಕು ಮತ್ತು ಅವಕಾಶಗಳನ್ನು ಒದಗಿಸುವುದು ಬಿಜೆಪಿ ಸರ್ಕಾರದ ಆದ್ಯತೆಯಾಗಿದೆ ಎಂದು ಸ್ಪಷ್ಟಪಡಿಸಿದರು. ಮಹಿಳೆಯರ ಗೌರವ ಮತ್ತು ಹಕ್ಕುಗಳ ರಕ್ಷಣೆಯಲ್ಲಿ ಯಾವುದೇ ರಾಜಕೀಯ ಲಾಭ-ನಷ್ಟಗಳನ್ನೂ ಪರಿಗಣಿಸದೇ, ನಾರಿ ಶಕ್ತಿಯ ಸಬಲೀಕರಣವೇ ದೇಶದ ಸಮಗ್ರ ಅಭಿವೃದ್ಧಿಗೆ ಪೂರಕವೆಂದು ಸಂಸದರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಒಬಿಸಿ ಮೋರ್ಚಾದ ಉಪಾಧ್ಯಕ್ಷರು ಹಾಗೂ ರಾಜ್ಯ ಬಿಜೆಪಿ ವಕ್ತಾರರಾದ ಅಶ್ವಿನಿ ಶಂಕರ್, ಜಿಲ್ಲೆ ಬಿಜೆಪಿ ಅಧ್ಯಕ್ಷ ಆನಂದ್ ಸ್ವಾಮಿ, ರಾಮನಗರ ಜೆಡಿಎಸ್ ಅಧ್ಯಕ್ಷ ಸಬಕೆರೆ ಶಿವಲಿಂಗಯ್ಯ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

### ಹೊಸ ಆಶಾಭಾವನೆ

**ಮಹಿಳಾ ಸಬಲೀಕರಣದ ವಿಚಾರದಲ್ಲಿ ಪ್ರಧಾನಿ ನೇತೃತ್ವದ ಸರ್ಕಾರ ಕೈಗೊಂಡಿರುವ ದಿಟ್ಟ ನಿರ್ಧಾರಗಳು ಹಾಗೂ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರುವ ಬದ್ಧತೆ ದೇಶದ ಮಹಿಳೆಯರಿಗೆ ಹೊಸ ಆಶಾಭಾವನೆ ಮೂಡಿಸಿದೆ ಎಂದು ಅವರು ಶ್ಲಾಘಿಸಿದರು. ನಿಜವಾದ ಅರ್ಥದಲ್ಲಿ ಮಹಿಳೆಯರಿಗೆ ಗೌರವ, ಹಕ್ಕು ಮತ್ತು ಅವಕಾಶಗಳನ್ನು ಒದಗಿಸುವುದು ಬಿಜೆಪಿ ಸರ್ಕಾರದ ಆದ್ಯತೆಯಾಗಿದೆ ಎಂದು ಸ್ಪಷ್ಟಪಡಿಸಿದರು.**

## ಮಿನಿ ನ್ಯೂಸ್

### ಪೆಹಲ್ಗಮ್ ದುರಂತ ಭಾರತ ಎಂದಿಗೂ ಮರೆಯದ ದಿನ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ರಾಮನಗರ**

ಪೆಹಲ್ಗಮ್ ದಾಳಿಯಲ್ಲಿ ಅಮಾನವೀಯವಾಗಿ ಹುತಾತ್ಮರಾದ ನಮ್ಮಸಹೋದರರು-ಸಹೋದರಿಯರ ಸ್ಮರಣೆ ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ಅಚ್ಚಳಿಯದೇ ಉಳಿದಿದೆ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪೆಹಲ್ಗಾಮ್ ದಾಳಿಯಲ್ಲಿ ಹುತಾತ್ಮರಾದವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದ ಅವರು, ಈ ದುರ್ಘಟನೆ ಕೇವಲ ಒಂದು ದಾಳಿ ಅಲ್ಲ, ಅದು ಮಾನವೀಯತೆಯ ಮೇಲೆ ನಡೆದ ಕ್ರೂರ ಪ್ರಹಾರ. ನಿರಪರಾಧಿಗಳ ಜೀವಗಳನ್ನು ಕಸಿದುಕೊಂಡ ಈ ಹೀನ ಕೃತ್ಯವನ್ನು ದೇಶವೇ ಖಂಡಿಸುತ್ತಿದ್ದು, ಇಂತಹ ಭಯೋತ್ಪಾದಕ ಕೃತ್ಯಗಳಿಗೆ ತಕ್ಕ ಪ್ರತಿಕ್ರಿಯೆ ನೀಡುವಲ್ಲಿ ಭಾರತ ಸದಾ ದೃಢವಾಗಿದ ಎಂದರು.

ಹುತಾತ್ಮರಾದವರ ತ್ಯಾಗ ವ್ಯರ್ಥವಾಗುವುದಿಲ್ಲ. ಅವರ ಧೈರ್ಯ, ದೇಶಭಕ್ತಿ ಮತ್ತು ಆತ್ಮಸಮರ್ಪಣೆಯ ಸ್ಫೂರ್ತಿ ನಮ್ಮೆಲ್ಲರಿಗೂ ದಾರಿದೀಪವಾಗಿರಲಿದೆ. ದೇಶದ ಏಕತೆ, ಅಖಂಡತೆ ಮತ್ತು ಶಾಂತಿಗಾಗಿ ನಾವು ಇನ್ನಷ್ಟು ಬಲವಾಗಿ ಒಂದಾಗಬೇಕಾದ ಅವಶ್ಯಕತೆಯನ್ನು ಈ ಘಟನೆ ನಮ್ಮೆಲ್ಲರಿಗೂ ಮನಗಾಣಿಸಿದೆ ಎಂದು ಅವರು ಹೇಳಿದರು. ರಾಜ್ಯ ಬಿಜೆಪಿ ಒಬಿಸಿ ಮೋರ್ಚಾದ ಉಪಾಧ್ಯಕ್ಷ ಹಾಗೂ ರಾಜ್ಯ ಬಿಜೆಪಿ ವಕ್ತಾರರಾದ ಅಶ್ವಿನಿ ಶಂಕರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಆನಂದ್ ಸ್ವಾಮಿ, ರಾಮನಗರ ಜೆಡಿಎಸ್ ಅಧ್ಯಕ್ಷ ಸಬಕೆರೆ ಶಿವಲಿಂಗಯ್ಯ ಉಪಸ್ಥಿತರಿದ್ದರು.

### ಭ್ರೂಣ ಲಿಂಗ ಪತ್ತೆ: ಸಮಗ್ರ ತನಿಖೆಗೆ ಕರುನಾಡ ಸೇವಕರು ಸಂಘಟನೆ ಆಗ್ರಹ

• **ಉದಯವಾಹಿನಿ, ಮಂಡ್ಯ**

ನಿಯಮಬಾಹಿರವಾಗಿ ಭ್ರೂಣಲಿಂಗ ಪತ್ತೆ ಪರೀಕ್ಷೆ ಮಾಡುತ್ತಿದ್ದ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಅಕ್ರಮಗಳನ್ನು ಬಯಲಿಗೆಳೆದಿದ್ದಾರೆ. ಈ ಕುರಿತು ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಕರುನಾಡ ಸೇವಕರು ಸಂಘಟನೆಯ ರಾಜ್ಯ ವಕ್ತಾರ ಎಂ.ಬಿ.ನಾಗಣ್ಣಗೌಡ ಒತ್ತಾಯಿಸಿದರು.

ಜಿಲ್ಲಾಧಿಕಾರಿ ಕುಮಾರ ಅವರಿಗೆ ಬುಧವಾರ ಮನವಿ ಪತ್ರ ಸಲ್ಲಿಸಿದರು. ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಉಸ್ತುವಾರಿ ನಿಗಾ ಸಮಿತಿ ರಚಿಸಬೇಕು ಎಂದು ರಾಜ್ಯ ಆರೋಗ್ಯ ಸಚಿವರನ್ನು ಒತ್ತಾಯಿಸಿದರು. ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ನಡೆಯುವ ಪರೀಕ್ಷೆಗಳನ್ನು ಬಾಲಿಕಾ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುತ್ತಿಲ್ಲ. ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಮಿತಿ ಇದ್ದರೂ ಕೆಲಸ ಮಾಡುತ್ತಿಲ್ಲ. ಅಕ್ರಮ ಭ್ರೂಣಲಿಂಗ ಪತ್ತೆ ಬಗ್ಗೆ ಲೋಕಾಯುಕ್ತರಿಗೆ ಮಾಹಿತಿ ಸಿಗುತ್ತಿದೆ. ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಏಕೆ ಸಿಗುತ್ತಿಲ್ಲ ಎಂದು ಪ್ರಶ್ನಿಸಿದರು. ಸರ್ಕಾರಿ ಆಸ್ಪತ್ರೆಗಳ ವೈದ್ಯರ ಹಾಗೂ ಖಾಸಗಿ ಪ್ರಯೋಗಾಲಯಗಳ ನಡುವಿನ ಅಪವಿತ್ರ ಮೈತ್ರಿಯು ಇಷ್ಟೆಲ್ಲಾ ಅವಾಂತರಕ್ಕೆ ಕಾರಣವಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ನಿಯಮಾನುಸಾರ ಕಾಲ ಕಾಲಕ್ಕೆ ತಪಾಸಣೆ ನಡೆಸದೆ ನಿರ್ಲಕ್ಷ್ಯ ಹಾಗೂ ಕರ್ತವ್ಯ ಲೋಪ ಎಸಗಿದ್ದಾರೆ ಎಂದು ಆರೋಪಿಸಿದರು. ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್ ವ್ಯವಸ್ಥೆ ಇದ್ದರೂ ಅದಕ್ಕೆ ಬೇಕಾದ ರೆಡಿಯಾಲಿಜಿಸ್ಟ್ ನೇಮಕಗೊಳಿಸಿಲ್ಲ.

### ಮೈಸೂರಿನಲ್ಲಿ ಪ್ರಾದೇಶಿಕ ಉಚಿತ ಉದ್ಯೋಗ ಮೇಳ

• **ಉದಯವಾಹಿನಿ, ಮೈಸೂರು**

ಮೈಸೂರಿನ ಯಂಗ್ ಇಂಡಿಯಾ ಸಂಸ್ಥೆ ವತಿಯಿಂದ ನಗರದ ಎಸ್ ಜೆಸಿಇ ಯಲ್ಲಿ ಎಪ್ರಿಲ್ 25 ರಂದು ಉಚಿತ ಯುವ ಜಾಬ್ ಫೇರ್‌ಆಯೋಜನೆ ಮಾಡಲಾಗಿದೆ. ಈ ಭಾಗದ ಪ್ರಾದೇಶಿಕ ಪ್ರತಿಭೆಗಳು ಹೆಸರನ್ನು ನೋಂದಾಯಿಸಿಕೊಳ್ಳಬೇಕೆಂದು ಮಾಹಿತಿ ನೀಡಿರುವ ಆಯೋಜಕರು ಈ ಮೇಳದಲ್ಲಿ 35 ಕಂಪನಿಗಳು ಭಾಗವಹಿಸಲಿವೆ ಎಂದು ತಿಳಿಸಿದ್ದಾರೆ.

ಎ.25 ರಂದು ಒಂದು ದಿನ ಮೈಸೂರಿನ ಎಸ್ ಜೆಸಿಇ ಇಂಜಿನಿಯರಿಂಗ್ ಕಾಲೇಜು ಸಹೋಗದೊಂದಿಗೆ ನಗರದ ಯಂಗ್ ಇಂಡಿಯಾ ಸಂಸ್ಥೆಯ ಯುವಕರು ಮೈಸೂರು ಜಿಲ್ಲೆಯ ಪ್ರಾದೇಶಿಕ ಜಿಲ್ಲೆಗಳಾದ ಮಂಡ್ಯ, ಹಾಸನ, ಮಡಿಕೇರಿ, ಹಾಗೂ ಚಾಮರಾಜನಗರ ಜಿಲ್ಲೆಯ ಯುವಕರಿಗಾಗಿ ಯುವ ಜಾಬ್ ಫೇರ್/2026 ನ್ನು ಆಯೋಜನೆ ಮಾಡಿದೆ.

ಈ ಉದ್ಯೋಗ ಮೇಳದಲ್ಲಿ ಕೈಗಾರಿಕೆ ಮತ್ತು ಉದ್ಯೋಗ ಆಕಾಂಕ್ಷಿಗಳ ನಡುವಿನ ವೇದಿಕೆಯನ್ನು ಯಂಗ್ ಇಂಡಿಯಾ ಸಂಸ್ಥೆ ನಿರ್ಮಿಸುತ್ತಿದ್ದಾರೆ.

ಈ ಮೇಳದಲ್ಲಿ 35ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿವೆ. 2000ಕ್ಕೂ ಹೆಚ್ಚು ಉದ್ಯೋಗ ಅವಕಾಶಗಳು ಇವೆ.

ಆಯ್ಕೆ ಪ್ರಕ್ರಿಯೆ ಹಾಗೂ ನೋಂದಣಿ ಉಚಿತವಾಗಲಿದ್ದು, ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಇ-ಮೇಲ್ ಅಥವಾ ಫೋನ್ ನಂಬರ್ ಮೂಲಕ ನೋಂದಾಯಿಸಿಕೊಳ್ಳಬಹುದು ಎಂದು ಆಯೋಜಕರು ತಿಳಿಸಿದ್ದಾರೆ.

### ಸಮುದಾಯ ಭವನದಿಂದ ಜನರಿಗೆ ಅನುಕೂಲ: ಯತೀಂದ್ರ ಸಿದ್ದರಾಮಯ್ಯ

• **ಉದಯವಾಹಿನಿ, ಮೈಸೂರು**

ಸಮುದಾಯ ಭವನಗಳು ಗ್ರಾಮೀಣ ಜನರ ಸಾಂಸ್ಕೃತಿಕ ಕೇಂದ್ರಗಳಾಗುವ ಜೊತೆಗೆ ಎಲ್ಲಾ ತಳ ಸಮುದಾಯದ ಜನರು ಸಭೆ, ಸಮಾರಂಭ, ನಿಶ್ಚಿತಾರ್ಥ, ಮದುವೆ ಮೊದಲಾದ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲ ಕಲ್ಪಿಸಿವೆ' ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ವರುಣ ಕ್ಷೇತ್ರದ ನಗರ್ಲೆ ಗ್ರಾಮದಲ್ಲಿ 80 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ವಾಲ್ಮೀಕಿ ಸಮುದಾಯ ಭವನದ ಉದ್ಘಾಟನೆ, 40 ಲಕ್ಷ ವೆಚ್ಚದಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿ, ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರುಣ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲೂ ಸಮುದಾಯ ಭವನಗಳನ್ನು ನಿರ್ಮಿಸಿ ಬಡಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇದರಿಂದ ಜನರು ಹಣ ಉಳಿತಾಯ ಮಾಡಿಕೊಳ್ಳಲು ಅನುಕೂಲ ಕಲ್ಪಿಸಿದ್ದಾರೆ. ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದರು. ಪ್ರತಿ ಗ್ರಾಮದಲ್ಲೂ ಶ್ರೀರಾಮಮಂದಿರ, ದೇವಸ್ಥಾನಗಳನ್ನು ನಿರ್ಮಿಸಿ ಜನರು ನೆಮ್ಮದಿಯಿಂದ ಪೂಜೆ, ಧ್ಯಾನ ಮಾಡಲು ಅನುಕೂಲವಾಗಿದೆ. ವರುಣ ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲೂ ಶಾಲೆಗಳಲ್ಲೂ ಅಗತ್ಯವಾದಷ್ಟು ಕೊಠಡಿಗಳನ್ನು ನಿರ್ಮಿಸಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ ಎಂದು ತಿಳಿಸಿದರು. ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿರುವುದರಿಂದ ಗ್ರಾಮೀಣ ಬಡ ಜನರು, ಮಹಿಳೆಯರು ನೆಮ್ಮದಿಯಾಗಿ ಜೀವನ ನಡೆಸುತ್ತಿದ್ದಾರೆ.

ಅಂತರಾಳದಿಂದ... EDITORIAL

# ದಕ್ಷಿಣ ಭಾರತದಲ್ಲಿ 'ಸುಪ್ರೀಂ' ಪೀಠ: ನ್ಯಾಯಕ್ಕೆ ಸಮಾನ ಅವಕಾಶದ ತತ್ತ್ವ

ಸುಪ್ರೀಂ ಕೋರ್ಟ್ ಪೀಠವೊಂದು ದಕ್ಷಿಣ ಭಾರತದಲ್ಲಿ ಆರಂಭ ಆಗಬೇಕು ಎಂಬ ದೀರ್ಘಕಾಲದ ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುನರುಚ್ಚರಿಸಿದ್ದಾರೆ. ಈ ಮೂಲಕ, ನ್ಯಾಯ ಕೋರುವ ಅವಕಾಶವು ಎಲ್ಲರಿಗೂ ಸಮಾನವಾಗಿ ಸಿಗಬೇಕು ಎಂಬ ಚರ್ಚೆಯತ್ತ ಮತ್ತೆ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಅವರ ಸಮ್ಮುಖದಲ್ಲಿ ಮಾಡಿದ ಭಾಷಣದಲ್ಲಿ, ಪೀಠವನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸಿದರೆ ನ್ಯಾಯ ಕೋರುವ ಅವಕಾಶ ಲಕ್ಷಾಂತರ ಮಂದಿಗೆ ಸಿಗಲಿದೆ ಎಂದು ಮುಖ್ಯಮಂತ್ರಿ ವಾದಿಸಿದ್ದಾರೆ. ಪ್ರಸ್ತುತ ದಕ್ಷಿಣ ಭಾರತದ ಜನರಿಗೆ ದೂರ ಮತ್ತು ವೆಚ್ಚದ ಕಾರಣದಿಂದಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದು ಕಷ್ಟದ ಕೆಲಸವಾಗಿದೆ. ಸಿದ್ದರಾಮಯ್ಯ ಅವರು ಮಂಡಿಸಿರುವ ಬೇಡಿಕೆ ಸಂವಿಧಾನಬದ್ಧವಾಗಿದೆ. ಸುಪ್ರೀಂ ಕೋರ್ಟ್‌ನ ಶಾಶ್ವತ ಪೀಠವು ದೆಹಲಿಯಲ್ಲಿರಬೇಕು ಎಂದು ಸಂವಿಧಾನದ 130ನೆಯ ವಿಧಿ ಹೇಳುತ್ತದೆ. ಸಿಜೆಐ ಅವರು ರಾಷ್ಟ್ರಪತಿಯವರ ಒಪ್ಪಿಗೆಯೊಂದಿಗೆ ಇತರ ಸ್ಥಳಗಳಲ್ಲಿಯೂ ಪೀಠ ಆರಂಭಿಸಬಹುದು ಎಂದೂ ಆ ವಿಧಿ ಹೇಳುತ್ತದೆ.

ಸುಪ್ರೀಂ ಕೋರ್ಟ್‌ನ ಮೇಲೆ ಹೆಚ್ಚುತ್ತಿರುವ ಹೊರೆಯು ಈ ಸುಧಾರಣೆಯ ಅಗತ್ಯವನ್ನು ಒತ್ತಿಹೇಳುತ್ತಿದೆ. ಈ ವರ್ಷದ ಮಾರ್ಚ್ ವೇಳೆಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿಯಿದ್ದ ಪ್ರಕರಣಗಳ ಸಂಖ್ಯೆ 92 ಸಾವಿರಕ್ಕೂ ಹೆಚ್ಚಾಗಿದೆ ಎಂಬ ಮಾಹಿತಿ ಇದೆ. ಇದು ಕೋರ್ಟ್‌ನ ಮೇಲಿರುವ ಹೊರೆಯನ್ನು ಸೂಚಿಸುತ್ತಿದೆ. 18ನೆಯ ಕಾನೂನು ಆಯೋಗವು ಒಂದು ವ್ಯಾವಹಾರಿಕ ಪರಿಹಾರವನ್ನು ಈ ಸಮಸ್ಯೆಗೆ ನೀಡಿತ್ತು. ದೆಹಲಿ, ಚೆನ್ನೈ ಅಥವಾ ಹೈದರಾಬಾದ್, ಕೋಲ್ಕತ್ತ ಮತ್ತು ಮುಂಬೈನಲ್ಲಿ ಒಟ್ಟು ನಾಲ್ಕು ಪೀಠಗಳನ್ನು ಆರಂಭಿಸಬೇಕು. ಇವು ಮೇಲ್ಮನವಿ ಅರ್ಜಿಗಳ ವಿಚಾರಣೆ ನಡೆಸಬೇಕು, ದೆಹಲಿಯಲ್ಲಿನ ಕೋರ್ಟ್‌ನ ಪ್ರಧಾನ ಪೀಠವು ಸಂವಿಧಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಮಾತ್ರ ಆಲಿಸಬೇಕು ಎಂಬ ಸಲಹೆಯನ್ನು ಆಯೋಗ ನೀಡಿತ್ತು. ಹೀಗೆ ಮಾಡಿದಾಗ ಕೋರ್ಟ್‌ನ ಕೆಲಸಗಳ ಹೊರೆ ಹಂಚಿಕೆ ಆಗುತ್ತದೆ.



ಕೋರ್ಟ್ ಅಧಿಕಾರದಲ್ಲೂ ಬದಲಾವಣೆ ಆಗುವುದಿಲ್ಲ. ಆದರೆ, ಈ ಸಲಹೆಗೆ ವಿರೋಧ ಇದೆ. ನ್ಯಾಯಾಂಗ ವ್ಯವಸ್ಥೆಯಲ್ಲಿನ ಆತಂಕವೂ ಇದಕ್ಕೆ ಒಂದು ಕಾರಣವಾಗಿರಬಹುದು. ಭಿನ್ನ ಪೀಠಗಳಿಂದ ಭಿನ್ನ ಬಗೆಯ ತೀರ್ಪುಗಳು ಬರಬಹುದು, ಸುಪ್ರೀಂ ಕೋರ್ಟ್ ಎಂಬುದು ರಾಷ್ಟ್ರಮಟ್ಟದಲ್ಲಿ ನ್ಯಾಯಾಂಗದ ಪಾಲಿನ ಪ್ರಧಾನ ಸ್ತಂಭ ಎಂಬ ಭಾವನೆಗೆ ಚ್ಯುತಿ ಬರಬಹುದು ಎಂಬ ಆತಂಕಗಳು ಆಯೋಗದ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಬಿಟ್ಟಿಲ್ಲ. ಈ ಆತಂಕಗಳಲ್ಲಿ ಹುರುಳಿಲ್ಲದೆ ಇಲ್ಲ. ಆದರೆ, ಅವು ಹಿಂಜರಿಕೆಗೆ ಕಾರಣವಾಗಬೇಕಾದ ಸಂಗತಿಗಳೇನೂ ಅಲ್ಲ. ತೀರ್ಪುಗಳು ಭಿನ್ನವಾಗಿ ಪ್ರಕಟವಾದರೆ, ವಿಸ್ತ್ರತ ಪೀಠವು ಅವುಗಳ ಬಗ್ಗೆ ಪರಿಶೀಲನೆ ನಡೆಸುವ ವ್ಯವಸ್ಥೆ ಹಾಗೂ ಪೂರ್ವನಿದರ್ಶನವನ್ನು ಪ್ರಮಾಣವಾಗಿ ಸ್ವೀಕರಿಸುವ ವ್ಯವಸ್ಥೆಯು ಈಗಾಗಲೇ ಇದೆ. ದೇಶದ ಬಹುದೊಡ್ಡ ಜನವರ್ಗವನ್ನು ನ್ಯಾಯಾಂಗ ವ್ಯವಸ್ಥೆಯ ಅಂಚಿನಲ್ಲಿಯೇ ಇರಿಸುವುದರಲ್ಲಿ ಹೆಚ್ಚಿನ ಸಮಸ್ಯೆ ಇದೆ. ದೇಶದ ಉತ್ತರ ಭಾಗದಲ್ಲಿನ ಹೈಕೋರ್ಟ್‌ಗಳು ನೀಡುವ ಆದೇಶವನ್ನು ಪ್ರಶ್ನಿಸಿ ಸಲ್ಲಿಕೆಯಾಗುವ ಮೇಲ್ಮನವಿಗಳು ಸುಪ್ರೀಂ ಕೋರ್ಟ್‌ನಲ್ಲಿ ಹೆಚ್ಚಿವೆ. ಇದೇ ವೇಳೆ ದಕ್ಷಿಣ ಭಾರತದ ರಾಜ್ಯಗಳಲ್ಲಿಯೂ ಅದೇ ಪ್ರಮಾಣದಲ್ಲಿ ವ್ಯಾಜ್ಯಗಳು ಇವೆಯಾದರೂ, ಅಲ್ಲಿಂದ ಸಲ್ಲಿಕೆಯಾಗುವ ಮೇಲ್ಮನವಿಗಳ ಪ್ರಮಾಣವು ಬಹಳ ಕಡಿಮೆ ಇದೆ. ದಕ್ಷಿಣ ಭಾರತದವರಿಗೆ ದೆಹಲಿಯು ದೂರವಾಗಿರುವುದು ಒಂದು ಅಡ್ಡಿಯಂತೆ ಆಗಿದೆ. ಪ್ರಯಾಣದ ವೆಚ್ಚ, ವಿಶೇಷ ಪರಿಣತಿ ಇರುವ ವಕೀಲರನ್ನು ದೆಹಲಿಯಲ್ಲಿ ನೇಮಕ ಮಾಡಿಕೊಳ್ಳುವುದು ಅರ್ಜಿದಾರರ ಪಾಲಿಗೆ ಸುಲಭವಲ್ಲ. ಕಾನೂನು ಆಯೋಗವು ಹೇಳಿರುವಂತೆ, ಹಲವರಿಗೆ ನ್ಯಾಯವು ಮರೀಚಿಕೆಯಂತೆ ಆಗುತ್ತದೆ.

**ಸುಪ್ರೀಂ ಕೋರ್ಟ್‌ನ ಕೆಲಸವನ್ನು ವಿಕೇಂದ್ರೀಕರಿಸುವುದರಿಂದ ಅದರ ಘನತೆ ತಗ್ಗಿಸಿದಂತೆ ಆಗುವುದಿಲ್ಲ. ಹಾಗೆ ಮಾಡುವುದರಿಂದ ಕೋರ್ಟ್ ಎಲ್ಲರಿಗೂ ಇನ್ನಷ್ಟು ಹತ್ತಿರವಾದಂತೆ ಆಗುತ್ತದೆ.**

ದಕ್ಷಿಣ ಭಾರತದ ರಾಜ್ಯಗಳಿಂದ ಮೇಲ್ಮನವಿಗಳು ಬರುವುದು ಕಡಿಮೆ ಎಂದಮಾತ್ರಕ್ಕೆ, ಅಲ್ಲಿನ ಹೈಕೋರ್ಟ್‌ಗಳ ಆದೇಶಗಳನ್ನೆಲ್ಲ ಅರ್ಜಿದಾರರು ಒಪ್ಪಿಕೊಳ್ಳುತ್ತಿದ್ದಾರೆ ಎಂದರ್ಥವಲ್ಲ. ಬದಲಿಗೆ, ಆ ಆದೇಶಗಳನ್ನು ಪ್ರಶ್ನಿಸುವುದು ಅವರಿಗೆ ಕಷ್ಟವಾಗುತ್ತಿದೆ ಎಂದು ಅಖಿಲ ಭಾರತ ವಕೀಲರ ಒಕ್ಕೂಟ ಹೇಳಿದೆ. ಉದಾಹರಣೆಗೆ ಹೇಳುವುದಾದರೆ, ಮದ್ರಾಸ್ ಹೈಕೋರ್ಟ್ ಇತ್ಯರ್ಥಪಡಿಸುವ ಒಂದು ಲಕ್ಷ ಪ್ರಕರಣಗಳ ಪೈಕಿ ಒಂಬತ್ತು ಸಾವಿರ ಪ್ರಕರಣಗಳಲ್ಲಿ ಮಾತ್ರ ಮೇಲ್ಮನವಿ ಸಲ್ಲಿಕೆಯಾಗುತ್ತಿದೆ. ಅರ್ಜಿದಾರನು ಭೌಗೋಳಿಕವಾಗಿ ಎಲ್ಲಿ ನೆಲಸಿದ್ದಾನೆ ಎಂಬುದು ಸುಪ್ರೀಂ ಕೋರ್ಟ್ ಮೆಟ್ಟಿಲೇರುವುದರ ಮೇಲೆ ಪರಿಣಾಮ ಬೀರುವಾಗ, ನ್ಯಾಯಕ್ಕೆ ಸಮಾನ ಅವಕಾಶ ಎಂಬ ತತ್ತ್ವಕ್ಕೆ ಭಂಗ ಉಂಟಾಗುತ್ತದೆ. ಹೀಗಾಗಿ ಸಿದ್ದರಾಮಯ್ಯ ಅವರ ಮನವಿಯು ಒಂದು ಪ್ರದೇಶದ ಜನರ ಮನವಿಯಷ್ಟೇ ಅಲ್ಲ, ಅದು ಸಾಂವಿಧಾನಿಕವಾದ ನೆನಪೋಲೆ. ಸುಪ್ರೀಂ ಕೋರ್ಟ್‌ನ ಕೆಲಸವನ್ನು ವಿಕೇಂದ್ರೀಕರಿಸುವುದರಿಂದ ಅದರ ಘನತೆ ತಗ್ಗಿಸಿದಂತೆ ಆಗುವುದಿಲ್ಲ, ಹಾಗೆ ಮಾಡುವುದರಿಂದ ಕೋರ್ಟ್ ಎಲ್ಲರಿಗೂ ಇನ್ನಷ್ಟು ಹತ್ತಿರವಾದಂತೆ ಆಗುತ್ತದೆ. ವಿಶಾಲವಾದ ಗಣರಾಜ್ಯದಲ್ಲಿ ವ್ಯಕ್ತಿಯೊಬ್ಬ ನ್ಯಾಯ ಪಡೆಯುವುದು ಆತ ದೆಹಲಿಯಿಂದ ಎಷ್ಟು ದೂರದಲ್ಲಿದ್ದಾನೆ ಎಂಬುದನ್ನು ಆಧರಿಸಿರಬಾರದು.

## ರಾಮಾಯಣ



**ಅಡ್ಡಿಗಳನ್ನು ಪರಿಹರಿಸಿಕೊಂಡು ಹನುಮಂತನು ಲಂಕೆಯನ್ನು ಪ್ರವೇಶಿಸಿದುದು**

• ಹಿಂದಿನ ಸಂಚಿಕೆಯಿಂದ

### ಸುಂದರಕಾಂಡ

ಸೂರ್ಯಚಂದ್ರರ ಮಾರ್ಗ ಹಿಡಿದು ಅಲ್ಲಲ್ಲಿ ಮೋಡಗಳನ್ನು ತೂರಿಕೊಂಡು ಯಪಷಿಸಿದ್ದರನ್ನು ಕಾಣುತ್ತ ಪವನಜನು ಮುಂದೆ ಸಾಗಿದ. ಮೋಡಗಳ ವೇಗವನ್ನೂ ಮೀರಿ, ನಕ್ಷತ್ರಗಳನ್ನು ಹಿಂದಿಕ್ಕಿ, ಗಾಂಧರ್ವ ಸುರ ಯಕ್ಷ ಸಪ್ತರ್ಷಿ ಮಾರ್ಗವನ್ನು ಹಿಡಿದು ಮಾರುತಿಯು ಹೋಗುತ್ತಿರಲು ಅವನ ನೆರಳು ಸಮುದ್ರದಲ್ಲಿ ಪ್ರತಿಫಲಿಸಿತು. ಸಮುದ್ರದಲ್ಲಿದ್ದ ಸಿಂಹಿಕೆಯು ಅದನ್ನು ಕಂಡು ಮನಸ್ಸಿನಲ್ಲಿಯೇ ಹಿರಿಹಿರಿ ಹಿಗ್ಗಿದಳು; ''ನಿಡುಗಾಲದಿಂದ ಹಸಿವಿನಿಂದ ಬಳಲಿ ಕಡಲಲ್ಲಿ ಬಿದ್ದಿದ್ದೆ; ನನ್ನ ಹಸಿವು ನೀರಡಿಕೆಗಳನ್ನು ಯಾರೂ ತೀರಿಸಲಿಲ್ಲ, ಆದರೀಗ ಅದನ್ನು ನೀಗಿಸಲು ಆಹಾರವು ತಾನೇ ಬಂದು ಮುಂದೆ ನಿಂತಿದೆ, ಬ್ರಹ್ಮನ ಇರಾದೆ ಎಂತಹುದೋ!' ಎಂದು ನೆರಳನ್ನು ಹಿಡಿದು ನುಂಗಲು ಸಿದ್ಧಳಾದಳು. ನೆರಳನ್ನು ನುಂಗಿದಷ್ಟರಿಂದಲೇ ಆಕಾಶದಲ್ಲಿ ಹಾರುತ್ತಿದ್ದ ಹನುಮನ ಕಾಲುಗಳನ್ನು, ಸೂತ್ರವು ತೊಡರಿದರೆ ಗಾಳಿಪಟಕ್ಕಾಗುವುದಿಲ್ಲವೇ ಹಾಗೆ, ಹಿಡಿದೆಳೆದ ಅನುಭವವಾಗಲು ಹನುಮನು ''ಇದೇನು!'' ಎಂದು ಎಡಬಲಗಳಲ್ಲಿ ನೋಡಿದ. ಆದರೆ ಯಾರೂ ಕಾಣಿಸಲಿಲ್ಲ; ಆಗ ಅವನು ಚಿಂತೆಗೀಡಾದ. ಹೆಜ್ಜೆಗಳೇ ಏಳುತ್ತಿಲ್ಲವಲ್ಲ ಎಂದು ಕೆಳಗಿನ ಸಮುದ್ರದತ್ತ ದೃಷ್ಟಿ ಹಾಯಿಸಿದ. ಒಳಗೆ ಘೋರಾಕೃತಿಯೊಂದು ಮೂಡಿದೆ! ಅವನು ಬೆರಗುಗೊಂಡ, ತಲೆಯನ್ನು ಕೊಡವಿ ಮತ್ತೆ ಸಮುದ್ರದತ್ತ ನೋಡಿದ. ಆಗ ಅವನಿಗೆ ಸುಗ್ರೀವನು ಹೇಳಿದ್ದ ಮಾತು ತಟಕ್ಕನೆ ನೆನಪಿಗೆ ಬಂತು, ಆಗ ಅವನಿಗೆ ಆ ಅದ್ಭುತಾಕಾರದ ರಹಸ್ಯವು ಸ್ಪಷ್ಟವಾಯಿತು. ''ಇದು ಛಾಯಾಗ್ರಾಹಿ, ನಾನು ಮುಂದೆ ಹೋಗಲು ಬಿಡುವುದಿಲ್ಲ ಎಂದು ಚಿಂತಿಸಿ, ಅತ್ಯಂತ ವೇಗದಿಂದ ಕೆಳಗಿಳಿದು ಬಂದು ಸಮುದ್ರವನ್ನು ಹೊಕ್ಕು ಅದರ ಬಸಿರನ್ನು ಸೀಳಿಕೊಂಡು ಹೊರಬಂದು ಅಂಬರವನ್ನಡರಿದ! ಇದನ್ನು ಕಂಡು ದೇವತೆಗಳೆಲ್ಲ ಬೆರಗುವಟ್ಟರು, ಋಷಿಗಂಧರ್ವರು ಚಕಿತರಾದರು;


ಶಿವಸ್ವರೂಪಿಯಲ್ಲದವನಿಗೆ ಈ ಘೋರರಕ್ಕಸಿಯನ್ನು ವಧೆಗೈಯುವುದು ಸಾಧ್ಯವೇ ಎಂದು ಬೆರಗಾದ ಸುರರೆಲ್ಲರೂ ತಮ್ಮ ಶಕ್ತ್ಯನುಸಾರ ಆಂಜನೇಯನಿಗೆ ವರಗಳನ್ನಿತ್ತರು.

ಈ ವರಗಳಿಂದ ಅವನ ಮತಿಧೃತಿ ಧೈರ್ಯಶೌರ್ಯಗಳೆಲ್ಲ ಹೆಚ್ಚಿದುವು; ಆಗ ಮಹಾಕಪಿಯು ನೂರು ಯೋಜನದಗಲದ ಸಾಗರವನ್ನು ದಾಟಿ ಆಚಿನ ದಡದಲ್ಲಿದ್ದ ವನರಾಜಿಯನ್ನು ಕಂಡ. ಅದೇನು ಮಲಯಗಿರಿಯೋ, ಇಂದನ ನಂದನವನವೋ, ಕುಬೇರನ ಚೈತ್ರರಥವೋ, ಗಂಧರ್ವರ ಆಡುಂಬೊಲವೋ ಎಂಬಂತೆ ಆ ವನವು ಶೋಭಿಸುತ್ತಿತ್ತು. ಬೇಗ ಹೋಗಿ ಏನು ಪ್ರಯೋಜನ, ನಿಧಾನವಾಗಿ ಹೋಗು' ಎಂದು ಮಗನಿಗೆ ಬುದ್ಧಿ ಹೇಳಲು ಬಂದ ತಂದೆಯಂತೆ ಮೆಲುಗಾಳಿಯು ಸುಳಿಯಲು ಮರುತ್ತುತನ ಮೈಯೆಲ್ಲ ಹಗುರೆನಿಸಿತು. ಕರಣಗಳೆಲ್ಲ ಸಂತೃಪ್ತವಾದುವು. ಆ ದಡದ ಮೇಲೆ ತನ್ನ ದೇಹವನ್ನು ಯಥಾಸ್ಥಿತಿಗೆ ಇಳಿಸಿಕೊಂಡ ಹನುಮನು ವನವನ್ನು ಸಂತಸದಿಂದ ಹೊಕ್ಕ. ''ಮಹಾಬಲನಾದ ದಶಶಿರನು ತನ್ನ ತಪೋಭರದಿಂದ ಗಳಿಸಿಕೊಂಡ ಈ ಉಪವನದ ಬಳಿ ಹರಿವಿರಿಂಚಾದಿಗಳಾದರೂ ಸುಳಿಯಬಲ್ಲರೇ ಎಂದ ಮೇಲೆ ಉಳಿದವರಿಗೆ ಇದರ ವೈಭವ ಎಲ್ಲಿ ಕೈಗೆಟುಕೀತು.

ಮುಂದುವರಿಯುವುದು...

# ಪೈಲ್ವಾನರ ಪವರ್ ಟಾನಿಕ್: ಹತ್ತಿ ಬೇರಿನ ಸಾರ

**ನಮ್ಮ ದೇಶೀ ಕ್ರೀಡಾ ಸಂಸ್ಕೃತಿಯಲ್ಲಿ ಗರಡಿ ಮನೆಗಳಿಗೂ ಮತ್ತು ಮಣ್ಣಿನ ಮಗನಾದ ಪೈಲ್ವಾನನಿಗೂ ಅವಿನಾಭಾವ ಸಂಬಂಧವಿದೆ. ಗರಡಿಯ ಕೆಮ್ಮಣ್ಣಿನಲ್ಲಿ ಮಿಂದೆದ್ದು, ದೇಹವನ್ನು ವಜ್ರದಂತೆ ಪುಟವಿಟ್ಟ ಕಲಿಗಳ ಅಪ್ರತಿಮ ದೈಹಿಕ ಸಾಮರ್ಥ್ಯದ ಹಿಂದೆ ಕೇವಲ ಕಸರತ್ತಷ್ಟೇ ಅಲ್ಲ, ನಿಸರ್ಗದ ಮಡಿಲಲ್ಲಿ ಅಡಗಿದ್ದ ಅಪರೂಪದ ಆಹಾರ ರಹಸ್ಯಗಳೂ ಇವೆ. ಅಂತಹ ಹತ್ತಾರು ಗುಟ್ಟುಗಳಲ್ಲಿ ಅತ್ಯಂತ ವಿಶಿಷ್ಟವಾದುದು ಹತ್ತಿ ಮರದ ಬೇರಿನ ಸಾರ. ಇದು ಇಂದಿನ ಆಧುನಿಕ ಜಗತ್ತಿನ ಕೃತಕ ಪ್ರೋಟೀನ್ ಪುಡಿಗಳಿಗಿಂತಲೂ ಹೆಚ್ಚಿನ ಶಕ್ತಿಯನ್ನು ನೀಡಬಲ್ಲ ನೈಸರ್ಗಿಕ ಅಮೃತವಾಗಿದೆ.**






ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಈ ಸಾರವನ್ನು ಪಡೆಯುವ ಪ್ರಕ್ರಿಯೆಯೇ ಅತ್ಯಂತ ರೋಚಕ ಮತ್ತು ಶಿಸ್ತುಬದ್ಧವಾದುದು. ನಮ್ಮ ಹಿರಿಯರು ಪ್ರಕೃತಿಯ ಜೀವಸತ್ವವನ್ನು ಅತ್ಯಂತ ಗೌರವದಿಂದ ಪಡೆಯುತ್ತಿದ್ದರು. ಇದಕ್ಕಾಗಿ ಜನವಸತಿಯಿಂದ ದೂರವಿರುವ, ಮಾಲಿನ್ಯ ರಹಿತ ಬೃಹತ್ ಬೂರುಗು ಮರ ಅಥವಾ ಕಾಡು ಹತ್ತಿ ಮರಗಳನ್ನು ಆರಿಸಿಕೊಳ್ಳಲಾಗುತ್ತಿತ್ತು. ಸೂರ್ಯಾಸ್ತದ ನಂತರ,ಮರದ ಪ್ರಧಾನ ಬೇರುಗಳಲ್ಲಿ ಒಂದರ ತುದಿಭಾಗವನ್ನು ಮೃದುವಾಗಿ ಕತ್ತರಿಸಿ ಅಲ್ಲಿ ಶುದ್ಧವಾದ ಮಣ್ಣಿನ ಮಡಕೆಯನ್ನು ಕಟ್ಟಲಾಗುತ್ತಿತ್ತು.

ರಾತ್ರಿಯಿಡೀ ಬೇರಿನ ಮೂಲಕ ಹನಿ ಹನಿಯಾಗಿ ಜಿನುಗಿ ಮಡಕೆಯಲ್ಲಿ ಶೇಖರವಾಗುವ ಈ ಭೂಮಿಯ ಸಾರವನ್ನು ಮರುದಿನ ಮುಂಜಾನೆ ಸೂರ್ಯೋದಯಕ್ಕೂ ಮುನ್ನ ಸೇವಿಸುವುದು ಗರಡಿಯ ವಾಡಿಕೆ.

ಸಸ್ಯಶಾಸ್ತ್ರದ ಪ್ರಕಾರ ಬೊಂಬ್ಯಾಕ್ಸ್ ಸೀಬಾ ಎಂದು ಕರೆಯಲ್ಪಡುವ ಈ ಮರವು ಔಷಧೀಯ ಗುಣಗಳ ಆಗರ. ಈ ಸಾರದಲ್ಲಿ ನೈಸರ್ಗಿಕ ಕ್ಷಾರಗಳು ಮತ್ತು ಜೀವಸತ್ವಗಳು ಸಮೃದ್ಧವಾಗಿದ್ದು, ಇವು ಸ್ನಾಯುಗಳ ತಂತುಗಳನ್ನು ಬಲಪಡಿಸುತ್ತವೆ. ಇದು ದೀರ್ಘಕಾಲದ ದೈಹಿಕ ಶ್ರಮಕ್ಕೆ ಬೇಕಾದ ಅಪಾರ ಸಹಿಷ್ಣುತೆಯನ್ನು ನೀಡುತ್ತದೆ.

ಕುಸ್ತಿಯಂತಹ ತೀವ್ರ ದಂಡನೆಯಿಂದ ದೇಹದ ಆಂತರಿಕ ಉಷ್ಣತೆ ಹೆಚ್ಚಾಗುತ್ತದೆ. ಹತ್ತಿ ಬೇರಿನ ಸಾರವು ಅತ್ಯುತ್ತಮ ಶೀತಲೀಕಾರಕವಾಗಿ ಕಾರ್ಯನಿರ್ವಹಿಸಿ, ಮಾಂಸಖಂಡಗಳ ಉರಿಯೂತವನ್ನು ಕಡಿಮೆ ಮಾಡುತ್ತದೆ. ಇದರಲ್ಲಿರುವ ಕ್ಯಾಲ್ಸಿಯಂ ಮತ್ತು ಮೆಗ್ನೀಸಿಯಮ್ ಸತ್ವಗಳು ಪೈಲ್ವಾನರ ಎಲುಬುಗಳನ್ನು ದೃಢಗೊಳಿಸುತ್ತವೆ. ಇದರಿಂದ ಅಖಾಡದ ಕಠಿಣ ಏಟುಗಳನ್ನೂ ಸಹಿಸುವ ಅದ್ಭುತ ಛಾತಿ ಮೂಡುತ್ತದೆ.

ಆಯುರ್ವೇದ ಶಾಸ್ತ್ರವು ಹತ್ತಿ ಮರದ ಬೇರನ್ನು ವಾಜೀಕರಣ ಸಸ್ಯವೆಂದು ಗುರುತಿಸಿದೆ. ಇದು ಪುರುಷರಲ್ಲಿನ ಪ್ರಧಾನ ಹಾರ್ಮೋನ್ ಆದ ಟೆಸ್ಟೋಸ್ಟೆರಾನ್ ಮಟ್ಟವನ್ನು ನೈಸರ್ಗಿಕವಾಗಿ ಸಮತೋಲನದಲ್ಲಿಡಲು ನೆರವಾಗುತ್ತದೆ. ಯಾವುದೇ ಕೃತಕ ರಾಸಾಯನಿಕಗಳ ಅಡ್ಡಪರಿಣಾಮವಿಲ್ಲದೆ ದೇಹಕ್ಕೆ ಆಕ್ರಮಣಕಾರಿ ವೇಗ ಮತ್ತು ಚೈತನ್ಯವನ್ನು ತುಂಬುವ ಶಕ್ತಿ ಇದಕ್ಕಿದೆ.

ಯಾವುದೇ ನೈಸರ್ಗಿಕ ಔಷಧಿಯನ್ನು ಸರಿಯಾದ ಜ್ಞಾನವಿಲ್ಲದೆ ಬಳಸುವುದು ಅಪಾಯಕಾರಿ. ಕೀಟನಾಶಕ ಬಳಸುವ ಕೃಷಿ ಭೂಮಿಯ ಮರಗಳಿಂದ ಸಾರ ಸಂಗ್ರಹಿಸಬಾರದು. ಇದು ಅತ್ಯಂತ ತಂಪು ಗುಣ ಹೊಂದಿರುವುದರಿಂದ, ಶೀತ ಪ್ರಕೃತಿಯವರು ಎಚ್ಚರಿಕೆಯಿಂದ ಇರಬೇಕು. ಅನುಭವಿ ಉಸ್ತಾದ್‌ಗಳ ಅಥವಾ ಆಯುರ್ವೇದ ವೈದ್ಯರ ಸಲಹೆಯ ಮೇರೆಗೆ ಇದರ ಬಳಕೆ ಸೂಕ್ತ.

ಮಣ್ಣಿನ ಮಗನ ತಾಕತ್ತು ಮಣ್ಣಿನ ಆಳದಿಂದ ಬಂದ ಬೇರಿನಲ್ಲಿದೆ ಎಂಬುದು ಶ್ಲಾಘನೀಯ ಸತ್ಯ.ನಮ್ಮ ಹಿರಿಯರ ಈ ನೈಸರ್ಗಿಕ ರಹಸ್ಯಗಳು ಇಂದಿನ ಯುವ ಪೀಳಿಗೆಗೆ ಜೀವನ ಪಾಠವಾಗಬೇಕಿದೆ. ನಿಸರ್ಗದೊಂದಿಗೆ ಮಿಳಿತವಾದ ಇಂತಹ ಪದ್ಧತಿಗಳು ನಮ್ಮ ದೇಶೀ ಕ್ರೀಡಾಪಟುಗಳನ್ನು ಅಜೇಯರನ್ನಾಗಿ ಮಾಡುವುದರಲ್ಲಿ ಸಂಶಯವಿಲ್ಲ.1

# ಮೂತ್ರಪಿಂಡದ ಹಾನಿ ತಡೆಗೆ

## ಸರಿಯಾದ ಆಹಾರ ಸೇವನೆ




ನಿಮ್ಮ ಮೂತ್ರಪಿಂಡಗಳನ್ನು ರಕ್ಷಿಸಲು ನೀವು ಕೆಲವು ಆಹಾರಗಳನ್ನು ತಪ್ಪಿಸುತ್ತೀರಿ ಅಥವಾ ಮಿತಿಗೊಳಿಸುತ್ತೀರಿ. ನಿಮಗೆ ಶಕ್ತಿಯನ್ನು ನೀಡಲು ಮತ್ತು ನಿಮ್ಮನ್ನು ಪೋಷಣೆಯಲ್ಲಿಡಲು ನೀವು ಇತರ ಆಹಾರಗಳನ್ನು ಸೇರಿಸುತ್ತೀರಿ. ನಿಮ್ಮ ನಿರ್ದಿಷ್ಟ ಆಹಾರವು ನೀವು ಸಿಕೆಡಿಯ ಆಹಾರ ಕ್ರಮವು ಆರಂಭಿಕ ಹಂತ ಅಥವಾ ಕೊನೆಯ ಹಂತದಲ್ಲಿದ್ದೀರೋ ಅಥವಾ ನೀವು ಡಯಾಲಿಸಿಸ್‌ನಲ್ಲಿದ್ದೀರೋ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ನಿಮ್ಮ ವೈಯಕ್ತಿಕ ಕಾರ್ಬೋಹೈಡ್ರೇಟ್ ಗುರಿಯು ನಿಮ್ಮ ವಯಸ್ಸು, ಚಟುವಟಿಕೆಯ ಮಟ್ಟ, ನೀವು ತೆಗೆದುಕೊಳ್ಳುವ ಯಾವುದೇ ಔಷಧಿಗಳು ಮತ್ತು ಇತರ ಅಂಶಗಳನ್ನು ಆಧರಿಸಿದೆ. ನಿಮ್ಮ ಊಟದ ಯೋಜನೆಯನ್ನು ಅನುಸರಿಸುವುದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಮ್ಮ ಗುರಿ ವ್ಯಾಪ್ತಿಯಲ್ಲಿಡಲು ಸಹಾಯ ಮಾಡುತ್ತದೆ. ಇದು ನಿಮ್ಮ ಮೂತ್ರಪಿಂಡಗಳಿಗೆ ಹೆಚ್ಚಿನ ಹಾನಿಯನ್ನು ತಡೆಯುತ್ತದೆ.



**ಮಧುಮೇಹವು ಮೂತ್ರಪಿಂಡದ ಕಾರ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ**

ರಕ್ತದಲ್ಲಿನ ಸಕ್ಕರೆ ಮಟ್ಟಗಳು ದೀರ್ಘಕಾಲದವರೆಗೆ ಅಧಿಕವಾಗಿದ್ದಾಗ, ಅವು ರಕ್ತದಿಂದ ತ್ಯಾಜ್ಯವನ್ನು ಫಿಲ್ಟರ್ ಮಾಡಲು ಸಹಾಯ ಮಾಡುವ ಸಣ್ಣ ರಕ್ತನಾಳಗಳಿಗೆ ಹಾನಿ ಮಾಡುತ್ತವೆ. ಕಾಲಾನಂತರದಲ್ಲಿ, ಇದು ಮೂತ್ರಪಿಂಡದ ಕಾರ್ಯವನ್ನು ಕಡಿಮೆ ಮಾಡುತ್ತದೆ ಮತ್ತು ಮಧುಮೇಹ ಮೂತ್ರಪಿಂಡ ಕಾಯಿಲೆಯ ಅಪಾಯವನ್ನು ಹೆಚ್ಚಿಸುತ್ತದೆ. ನ್ಯಾಶನಲ್ ಕಿಡ್ನಿ ಫೌಂಡೇಶನ್ ಪ್ರಕಟಿಸಿದ ಅಧ್ಯಯನವು ಮಧುಮೇಹವು ಜಾಗತಿಕವಾಗಿ ಸುಮಾರು 44 ಪ್ರತಿಶತ ಮೂತ್ರಪಿಂಡ ವೈಫಲ್ಯ ಪ್ರಕರಣಗಳಿಗೆ ಕಾರಣವಾಗಿದೆ ಎಂದು ಎತ್ತಿ ತೋರಿಸುತ್ತದೆ.

ಇದು ಆರಂಭಿಕ ಆಹಾರ ಹಸ್ತಕ್ಷೇಪವನ್ನು ಮುಖ್ಯಗೊಳಿಸುತ್ತದೆ.

**ಹೆಚ್ಚು ಉಪ್ಪು ಸೇವಿಸುವುದು:** ಅತಿಯಾದ ಉಪ್ಪು ಸೇವನೆಯು ಸಾಮಾನ್ಯ ತಪ್ಪುಗಳಲ್ಲಿ ಒಂದಾಗಿದೆ. ಅನೇಕ ಪ್ಯಾಕೇಜ್ ಮಾಡಿದ ಆಹಾರಗಳು, ತಿಂಡಿಗಳು, ಉಪ್ಪಿನಕಾಯಿಗಳು ಮತ್ತು ತಿನ್ನಲು ಸಿದ್ಧವಾದ ಊಟಗಳು ಹೆಚ್ಚಿನ ಪ್ರಮಾಣದಲ್ಲಿ ಸೋಡಿಯಂ ಅನ್ನು ಹೊಂದಿರುತ್ತವೆ. ಹೆಚ್ಚು ಸೋಡಿಯಂ ದೇಹವು ನೀರನ್ನು ಉಳಿಸಿಕೊಳ್ಳಲು ಕಾರಣವಾಗುತ್ತದೆ, ಇದು ರಕ್ತದೊತ್ತಡವನ್ನು ಹೆಚ್ಚಿಸುತ್ತದೆ. ಅಧಿಕ ರಕ್ತದೊತ್ತಡವು ಮೂತ್ರಪಿಂಡಗಳ ಮೇಲೆ ಹೆಚ್ಚುವರಿ ಒತ್ತಡವನ್ನುಂಟು ಮಾಡುತ್ತದೆ, ಇದು ಕಾಲಾನಂತರದಲ್ಲಿ ಹಾನಿಯನ್ನು ಹೆಚ್ಚಿಸುತ್ತದೆ. ಹಾಗಾಗಿ ಉಪ್ಪು ಸೇವನೆಯನ್ನು ಮಿತಿಗೊಳಿಸಲು ಮತ್ತು ಸಂಸ್ಕರಿಸಿದ ಆಹಾರಗಳಲ್ಲಿ ಅಡಗಿರುವ ಸೋಡಿಯಂ ಬಗ್ಗೆ ಎಚ್ಚರದಿಂದಿರಲು ಸಲಹೆ ನೀಡುತ್ತಾರೆ.

**ಮಧುಮೇಹವು ವಿಶ್ವಾದ್ಯಂತ ಮೂತ್ರಪಿಂಡ ಕಾಯಿಲೆಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದ್ದು, ಹಾನಿಯು ಕಾಲಾನಂತರದಲ್ಲಿ ಮೌನವಾಗಿ ಬೆಳೆಯುತ್ತದೆ. ನಿರಂತರವಾಗಿ ಅಧಿಕ ರಕ್ತದ ಸಕ್ಕರೆ ಮಟ್ಟಗಳು ಮೂತ್ರಪಿಂಡಗಳಲ್ಲಿನ ಸಣ್ಣ ರಕ್ತನಾಳಗಳಿಗೆ ಹಾನಿಯನ್ನುಂಟುಮಾಡಬಹುದು, ತ್ಯಾಜ್ಯವನ್ನು ಪರಿಣಾಮಕಾರಿಯಾಗಿ ಫಿಲ್ಟರ್ ಮಾಡುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತವೆ. ಔಷಧಿ ಮತ್ತು ನಿಯಮಿತ ಮೇಲ್ವಿಚಾರಣೆ ಅತ್ಯಗತ್ಯವಾದರೂ, ಮೂತ್ರಪಿಂಡದ ಆರೋಗ್ಯವನ್ನು ರಕ್ಷಿಸುವಲ್ಲಿ ಆಹಾರವು ಅಷ್ಟೇ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಧುಮೇಹ ಹೊಂದಿರುವ ಅನೇಕ ಜನರು ತಿಳಿಯದೆ ತಿನ್ನುವ ಅಭ್ಯಾಸಗಳನ್ನು ಅನುಸರಿಸುತ್ತಾರೆ, ಇದು ಮೂತ್ರಪಿಂಡದ ಹಾನಿಯನ್ನು ಇನ್ನಷ್ಟು ಹದಗೆಡಿಸುತ್ತದೆ.**

**ಸಂಸ್ಕರಿಸಿದ ಆಹಾರಗಳ ಮೇಲೆ ಹೆಚ್ಚು ಅವಲಂಬಿತ** ಚಿಪ್ಸ್, ಫ್ರೋಜನ್ ತಿನಿಸುಗಳು, ತ್ವರಿತ ನೂಡಲ್ಸ್ ಮತ್ತು ಪ್ಯಾಕ್ ಮಾಡಿದ ಮಾಂಸಗಳಂತಹ ಸಂಸ್ಕರಿಸಿದ ಆಹಾರಗಳು ಹೆಚ್ಚಾಗಿ ಸೋಡಿಯಂ, ಅನಾರೋಗ್ಯಕರ ಕೊಬ್ಬುಗಳು ಮತ್ತು ಸಂರಕ್ಷಕಗಳಲ್ಲಿ ಅಧಿಕವಾಗಿರುತ್ತವೆ. ಈ ಆಹಾರಗಳ ನಿಯಮಿತ ಸೇವನೆಯು ರಕ್ತದಲ್ಲಿನ ಸಕ್ಕರೆ ನಿಯಂತ್ರಣವನ್ನು ಹೆಚ್ಚು ಕಷ್ಟಕರವಾಗಿಸುತ್ತದೆ ಮತ್ತು ಮೂತ್ರಪಿಂಡದ ಹಾನಿಯ ಅಪಾಯವನ್ನು ಹೆಚ್ಚಿಸುತ್ತದೆ. ಅಮೇರಿಕನ್ ಜರ್ನಲ್ ಆಫ್ ಕ್ಲಿನಿಕಲ್ ನ್ಯೂಟ್ರಿಷನ್‌ನಲ್ಲಿ ಪ್ರಕಟವಾದ ಸಂಶೋಧನೆಯು ಅಲ್ಟ್ರಾ-ಸಂಸ್ಕರಿಸಿದ ಆಹಾರಗಳ ಹೆಚ್ಚಿನ ಸೇವನೆಯು ದೀರ್ಘಕಾಲದ ಮೂತ್ರಪಿಂಡ ಕಾಯಿಲೆಯ ಹೆಚ್ಚಿನ ಅಪಾಯದೊಂದಿಗೆ ಸಂಬಂಧ ಹೊಂದಿದೆ.

**ಹೆಚ್ಚು ಪ್ರೋಟೀನ್ ಸೇವನೆ:** ದೇಹಕ್ಕೆ ಪ್ರೋಟೀನ್ ಅತ್ಯಗತ್ಯ, ಆದರೆ ಅತಿಯಾದ ಸೇವನೆ, ವಿಶೇಷವಾಗಿ ವೈದ್ಯಕೀಯ ಸಲಹೆಯಿಲ್ಲದೆ, ಮೂತ್ರಪಿಂಡಗಳ ಮೇಲೆ ಹೆಚ್ಚುವರಿ ಒತ್ತಡವನ್ನು ಉಂಟುಮಾಡಬಹುದು. ಮಧುಮೇಹ ಅಥವಾ ಆರಂಭಿಕ ಮೂತ್ರಪಿಂಡದ ಸಮಸ್ಯೆಗಳಿರುವ ಜನರಲ್ಲಿ, ಹೆಚ್ಚಿನ ಪ್ರೋಟೀನ್ ಆಹಾರಗಳು ಮೂತ್ರಪಿಂಡದ ಹಾನಿಯನ್ನು ವೇಗಗೊಳಿಸಬಹುದು. ಮುಖ್ಯ ವಿಷಯವೆಂದರೆ ಸಮತೋಲನ. ಅತಿಯಾದ ಸೇವನೆಗಿಂತ ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ಮಧ್ಯಮ ಪ್ರೋಟೀನ್ ಸೇವನೆಯನ್ನು ಶಿಫಾರಸು ಮಾಡಲಾಗುತ್ತದೆ.

**ಕಾರ್ಬೋಹೈಡ್ರೇಟ್‌ಗಳ ಹೆಚ್ಚಿನ ಸೇವನೆ:** ಬಿಳಿ ಬ್ರೆಡ್, ಸಿಹಿತಿಂಡಿಗಳು, ಸಕ್ಕರೆ ಪಾನೀಯಗಳು ಮತ್ತು ಬೇಯಿಸಿದ ಸರಕುಗಳಂತಹ ಆಹಾರಗಳು ರಕ್ತದಲ್ಲಿನ ಸಕ್ಕರೆ ಮಟ್ಟದಲ್ಲಿ ತ್ವರಿತ ಏರಿಕೆಗೆ ಕಾರಣವಾಗಬಹುದು. ಆಗಾಗ್ಗೆ ಏರಿಳಿತಗಳು ಮೂತ್ರಪಿಂಡದ ಹಾನಿ ಸೇರಿದಂತೆ ದೀರ್ಘಕಾಲೀನ ತೊಡಕುಗಳ ಅಪಾಯವನ್ನು ಹೆಚ್ಚಿಸುತ್ತವೆ. ಕಾಲಾನಂತರದಲ್ಲಿ, ಅನಿಯಂತ್ರಿತ ರಕ್ತದಲ್ಲಿನ ಸಕ್ಕರೆ ಮೂತ್ರಪಿಂಡಗಳ ಶೋಧಕ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ, ಇದು ಕಾರ್ಯದಲ್ಲಿ ಪ್ರಗತಿಶೀಲ ಕುಸಿತಕ್ಕೆ ಕಾರಣವಾಗುತ್ತದೆ.

**ಸಾಕಷ್ಟು ನೀರು ಕುಡಿಯದಿರುವುದು:** ಜಲಸಂಚಯನವನ್ನು ಹೆಚ್ಚಾಗಿ ಕಡೆಗಣಿಸಲಾಗುತ್ತದೆ. ಇದು ಮೂತ್ರಪಿಂಡದ ಆರೋಗ್ಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಕಷ್ಟು ನೀರು ಕುಡಿಯುವುದು ದೇಹದಲ್ಲಿನ ವಿಷವನ್ನು ಹೊರಹಾಕಲು ಸಹಾಯ ಮಾಡುತ್ತದೆ ಮತ್ತು ಸರಿಯಾದ ಮೂತ್ರಪಿಂಡದ ಕಾರ್ಯವನ್ನು ಬೆಂಬಲಿಸುತ್ತದೆ.

ಕಡಿಮೆ ನೀರಿನ ಸೇವನೆಯು ಕೇಂದ್ರೀಕೃತ ಮೂತ್ರಕ್ಕೆ ಕಾರಣವಾಗಬಹುದು ಮತ್ತು ಮೂತ್ರಪಿಂಡಕ್ಕೆ ಸಂಬಂಧಿಸಿದ ಸಮಸ್ಯೆಗಳ ಅಪಾಯವನ್ನು ಹೆಚ್ಚಿಸುತ್ತದೆ. ಹಾಗಾಗಿ ಮಧುಮೇಹ ಇರುವವರು ತಮ್ಮ ದೇಹವನ್ನು ಯಾವಾಗಲೂ ಹೈಡ್ರೀಕರಿಸಿಡುವುದು ಮುಖ್ಯವಾಗಿದೆ.

**ಸಮತೋಲಿತ ಊಟವನ್ನು ಬಿಟ್ಟುಬಿಡುವುದು:** ಮಧುಮೇಹ ಹೊಂದಿರುವ ಕೆಲವು ಜನರು ಊಟವನ್ನು ಬಿಟ್ಟುಬಿಡುತ್ತಾರೆ ಅಥವಾ ಅನಿಯಮಿತ ಆಹಾರ ಪದ್ಧತಿಗಳನ್ನು ಅನುಸರಿಸುತ್ತಾರೆ, ಇದು ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಎಂದು ಭಾವಿಸುತ್ತಾರೆ. ಆದಾಗ್ಯೂ, ಇದು ಗ್ಲೂಕೋಸ್ ಮಟ್ಟದಲ್ಲಿ ಏರಿಳಿತಗಳಿಗೆ ಕಾರಣವಾಗಬಹುದು. ಅನಿಯಮಿತ ಆಹಾರ ಪದ್ಧತಿಯು ನಂತರ ಅತಿಯಾಗಿ ತಿನ್ನುವುದಕ್ಕೆ ಕಾರಣವಾಗಬಹುದು, ಇದು ಹೆಚ್ಚಾಗಿ ಅನಾರೋಗ್ಯಕರ ಆಹಾರ ಆಯ್ಕೆಗಳನ್ನು ಒಳಗೊಂಡಿರುತ್ತದೆ. ಸಮತೋಲಿತ, ಸ್ಥಿರವಾದ ಊಟ ಪದ್ಧತಿಯು ರಕ್ತದಲ್ಲಿನ ಸಕ್ಕರೆಯನ್ನು ಸ್ಥಿರವಾಗಿಡಲು ಸಹಾಯ ಮಾಡುತ್ತದೆ ಮತ್ತು ಮೂತ್ರಪಿಂಡಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ.

### ಸರಳ ಆಹಾರ ಪದ್ಧತಿ ಬದಲಾವಣೆಗಳು

- **ಕಿಡ್ನಿ ಆರೋಗ್ಯವನ್ನು ರಕ್ಷಿಸುವಲ್ಲಿ ಸಣ್ಣ, ಸ್ಥಿರವಾದ ಬದಲಾವಣೆಗಳನ್ನು ಮಾಡುವುದು ಬಹಳ ದೂರ ಹೋಗಬಹುದು. ನಿಯಂತ್ರಿತ ಉಪ್ಪು ಮತ್ತು ಸಕ್ಕರೆಯೊಂದಿಗೆ ತಾಜಾ, ಮನೆಯಲ್ಲಿ ತಯಾರಿಸಿದ ಊಟವನ್ನು ತಿನ್ನುವುದರ ಮೇಲೆ ಕೇಂದ್ರೀಕರಿಸಿ. ನಿಮ್ಮ ಆಹಾರದಲ್ಲಿ ತರಕಾರಿಗಳು, ಧಾನ್ಯಗಳು, ದ್ವಿದಳ ಧಾನ್ಯಗಳು ಮತ್ತು ಆರೋಗ್ಯಕರ ಕೊಬ್ಬನ್ನು ಸೇರಿಸಿ.**
- **ಸಂಸ್ಕರಿಸಿದ ಆಹಾರಗಳು, ಸಕ್ಕರೆ ಪಾನೀಯಗಳು ಮತ್ತು ಹುರಿದ ಪದಾರ್ಥಗಳನ್ನು ಮಿತಿಗೊಳಿಸಿ. ವೈದ್ಯಕೀಯ ಸಲಹೆಯ ಆಧಾರದ ಮೇಲೆ ಮಿತವಾಗಿ ಪ್ರೋಟೀನ್ ಸೇವಿಸಿ ಮತ್ತು ದಿನವಿಡೀ ಸಾಕಷ್ಟು ಜಲಸಂಚಯನವನ್ನು ಖಚಿತಪಡಿಸಿಕೊಳ್ಳಿ.**
- **ಎಲೆಗಳ ತರಕಾರಿಗಳು, ಧಾನ್ಯಗಳು, ಬೀಜಗಳು ಮತ್ತು ತಾಜಾ ಹಣ್ಣುಗಳಂತಹ ಆಹಾರಗಳು ಒಟ್ಟಾರೆ ಆರೋಗ್ಯವನ್ನು ಬೆಂಬಲಿಸುತ್ತವೆ ಮತ್ತು ತೊಡಕುಗಳ ಅಪಾಯವನ್ನು ಕಡಿಮೆ ಮಾಡುತ್ತವೆ.**

# ವಾಲ್ಪರೈ ಘಾಟ್ ದುರಂತ: ನಂದಿದ ಜ್ಞಾನ ದೀಪಗಳು, ಮರುಳಾದ ಸಮಾಜ

**ಏಪ್ರಿಲ್ 2026ರ ಮಧ್ಯಭಾಗದಲ್ಲಿ ತಮಿಳುನಾಡಿನ ವಾಲ್ಪರೈ ಘಾಟ್ ರಸ್ತೆಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತವು ಇಡೀ ದಕ್ಷಿಣ ಭಾರತದ ಮನಸ್ಸನ್ನು ಕಲುಕಿದ ದುರ್ಘಟನೆ. ಕೇರಳದ ಮಲ್ಲಪ್ಪುರಂ ಜಿಲ್ಲೆಯ ಶಿಕ್ಷಕರು ಮತ್ತು ಸಿಬ್ಬಂದಿ ಸೇರಿದ್ದ ಪ್ರವಾಸಿ ವ್ಯಾನ್ 13ನೇ ಹೇರ್‌ಪಿನ್ ತಿರುವಿನಲ್ಲಿ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿದ ಪರಿಣಾಮ, ಒಟ್ಟು 9 ಮಂದಿ ಅಮೂಲ್ಯ ಜೀವಗಳು ಕಳೆದುಹೋಗಿವೆ. ಈ ಘಟನೆ ಕೇವಲ ಒಂದು ಅಪಘಾತವಲ್ಲ, ಸಮಾಜದ ಬಲವಾದ ಅಸ್ತಿತ್ವವೇ ಒಂದೇ ಕ್ಷಣದಲ್ಲಿ ನಡುಗಿದ ಕ್ಷಣವಾಗಿದೆ.**



ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಮೃತರಾದವರು ಮಲಪ್ಪುರಂನ ಪರಮಲ್ ಎಎಲ್‌ಪಿ ಶಾಲೆ ಮತ್ತು ಜಿಯುಪಿ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ಅವರ ಕುಟುಂಬದ ಸದಸ್ಯರಾಗಿದ್ದರು. ಮುಖ್ಯಶಿಕ್ಷಕಿ ಅಜಿಜಾ (54) ಸೇರಿದಂತೆ ರಮ್ಲಾ, ಸುಹರಾ, ಆಶಾ, ಮಜೀದ್, ಸಜಿತಾ, ಶಕೀಲಾ, ರುಬಿಯಾ ಮತ್ತು ಹರಿಶ್ಚಂದ್ರ ಅವರಂತಹ ಒಂಬತ್ತು ಮಂದಿಯ ಜೀವಗಳು ಕಳೆದುಹೋಗಿರುವುದು ತುಂಬಾ ದುಃಖಕರ. ಇವರು ತಮ್ಮ ಜೀವನವನ್ನು ಶಿಕ್ಷಣ ಸೇವೆಗೆ ಅರ್ಪಿಸಿದ್ದ ಮಹತ್ವದ ವ್ಯಕ್ತಿಗಳು. ಇವರಂತಹ ಶಿಕ್ಷಕರು ಸಮಾಜದ ಬೆಳವಣಿಗೆಯ ಮೂಲಸ್ತಂಭಗಳು; ಅವರು ವಿದ್ಯಾರ್ಥಿಗಳಿಗೆ ಜ್ಞಾನ ನೀಡುವುದರ ಜೊತೆಗೆ ಜೀವನ ಮೌಲ್ಯಗಳನ್ನು ಬಿತ್ತುವವರು.

ಈ ದುರ್ಘಟನೆ ಸಂಭವಿಸಿದ ಸ್ಥಳವಾದ ವಾಲ್ಪರೈ ಘಾಟ್ ರಸ್ತೆ ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾದರೂ, ಅಪಾಯಕಾರಿ ಹೇರ್‌ಪಿನ್ ತಿರುವುಗಳಿಗಾಗಿ ಪ್ರಸಿದ್ಧವಾಗಿದೆ. ವಿಶೇಷವಾಗಿ 13ನೇ ತಿರುವು ಅಪಘಾತಗಳಿಗೆ ಕಾರಣವಾಗುವಂತಹ ಸಂಕೀರ್ಣ ಮಾರ್ಗವಾಗಿದೆ.

ಈ ಘಟನೆ ಮತ್ತೆ ಒಂದು ಬಾರಿ ನಮ್ಮ ರಸ್ತೆ ಸುರಕ್ಷತೆಯ ಬಗ್ಗೆ ಗಂಭೀರವಾಗಿ ಚಿಂತಿಸುವ ಅಗತ್ಯವನ್ನು ಒತ್ತಿ ಹೇಳುತ್ತದೆ. ಪ್ರವಾಸದಿಂದ ಹಿಂತಿರುಗುತ್ತಿದ್ದ ಶಿಕ್ಷಕರು ತಮ್ಮ ಮನೆಗಳಿಗೆ ಸುರಕ್ಷಿತವಾಗಿ ತಲುಪಬೇಕಾಗಿದ್ದಾಗ, ಅವರ ಜೀವಯಾನವೇ ಮಧ್ಯದಲ್ಲೇ ಅಂತ್ಯಗೊಂಡಿರುವುದು ಮನಕಲುಕುವ ಸಂಗತಿ.

ಒಬ್ಬ ಶಿಕ್ಷಕನು ತನ್ನ ಜೀವನದ ಅತ್ಯಂತ ಅಮೂಲ್ಯ ಭಾಗವನ್ನು ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಮೀಸಲಿಡುತ್ತಾನೆ. ಅವರ ಸೇವೆ ಹಣದಿಂದ ಅಳೆಯಲು ಸಾಧ್ಯವಿಲ್ಲ. ಅವರು ವಿದ್ಯಾರ್ಥಿಗಳ ಕನಸುಗಳಿಗೆ ದಾರಿ ತೋರಿಸುವ ದೀಪಗಳು. ಅಂತಹ ದೀಪಗಳು ನಂದಿದಾಗ, ಅದರ ಕತ್ತಲೆ ಕೇವಲ ಒಂದು ಕುಟುಂಬಕ್ಕೆ ಮಾತ್ರವಲ್ಲ, ಇಡೀ ಸಮಾಜಕ್ಕೆ ವ್ಯಾಪಿಸುತ್ತದೆ. ವಿದ್ಯಾರ್ಥಿಗಳು ತಮ್ಮ ಪ್ರಿಯ ಗುರುಗಳನ್ನು ಕಳೆದುಕೊಂಡ ನೋವಿನಲ್ಲಿ ಮುಳುಗುತ್ತಾರೆ. ಶಾಲೆಗಳ ವಾತಾವರಣವೇ ಶೋಕ ಸಾಗರವಾಗುತ್ತದೆ.



ಈ ಘಟನೆ ಶೈಕ್ಷಣಿಕ ವಲಯದಲ್ಲಿ ದೊಡ್ಡ ಆಘಾತವನ್ನುಂಟುಮಾಡಿದೆ. ಶಿಕ್ಷಕರು ಕೇವಲ ಉದ್ಯೋಗಿಗಳಲ್ಲ, ಅವರು ಸಮಾಜದ ಮಾರ್ಗದರ್ಶಕರು.

ಅವರ ನಷ್ಟವು ಅನೇಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಸಾಧ್ಯವಾದ ಖಾಲಿತನವನ್ನುಂಟುಮಾಡುತ್ತದೆ. ಈ ಸಂದರ್ಭದಲ್ಲಿ, ನಾವು ಶಿಕ್ಷಕರ ಮಹತ್ವವನ್ನು ಇನ್ನಷ್ಟು ಆಳವಾಗಿ ಅರಿತುಕೊಳ್ಳಬೇಕು. ಅವರ ತ್ಯಾಗ ಮತ್ತು ಸೇವೆಯನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಿದೆ.

ಈ ದುರ್ಘಟನೆಯಿಂದ ನಾವು ಹಲವು ಪಾಠಗಳನ್ನು ಕಲಿಯಬೇಕಾಗಿದೆ. ಮೊದಲನೆಯದಾಗಿ, ಪರ್ವತ ಪ್ರದೇಶಗಳ ರಸ್ತೆಗಳ ಸುರಕ್ಷತೆಯನ್ನು ಹೆಚ್ಚಿಸುವ ಅಗತ್ಯವಿದೆ. ಸೂಕ್ತ ಸೂಚನಾ ಫಲಕಗಳು, ಸುರಕ್ಷತಾ ಗೋಡೆಗಳು ಮತ್ತು ಚಾಲಕರಿಗೆ ಎಚ್ಚರಿಕೆ ನೀಡುವ ವ್ಯವಸ್ಥೆಗಳು ಇರಬೇಕು. ಎರಡನೆಯದಾಗಿ, ಚಾಲಕರು ವಿಶೇಷವಾಗಿ ಘಾಟ್ ರಸ್ತೆಯಲ್ಲಿ ಹೆಚ್ಚಿನ ಜಾಗರೂಕತೆಯಿಂದ ವಾಹನ ಚಲಾಯಿಸಬೇಕು. ಒಂದು ಕ್ಷಣದ ನಿರ್ಲಕ್ಷ್ಯ ಎಷ್ಟು ಜೀವಗಳನ್ನು ಕಸಿದುಕೊಳ್ಳಬಹುದು ಎಂಬುದಕ್ಕೆ ಈ ಘಟನೆ ಸ್ಪಷ್ಟ ಉದಾಹರಣೆಯಾಗಿದೆ.

ಮೃತರಾದವರ ಕುಟುಂಬಗಳಿಗೆ ಈ ನೋವು ಸಹಿಸಲು ಅಸಾಧ್ಯವಾದದ್ದು. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ದುಃಖವನ್ನು ಮಾತುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ, ನಾವು ಎಲ್ಲರೂ ಅವರೊಂದಿಗೆ ನಿಂತು ಮಾನಸಿಕ ಬೆಂಬಲ ನೀಡುವುದು ಅತ್ಯಂತ ಅಗತ್ಯವಾಗಿದೆ. ಸರ್ಕಾರವು ಕೂಡಾ ತಕ್ಷಣ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮಗಳನ್ನು ಬಲಪಡಿಸಬೇಕು.

ಕೊನೆಗೆ, ಈ ದುರ್ಘಟನೆ ನಮಗೆ ಜೀವನದ ಅಸ್ಥಿರತೆಯನ್ನು ಮತ್ತೊಮ್ಮೆ ನೆನಪಿಸುತ್ತದೆ. ನಾಳೆಯ ಬಗ್ಗೆ ಯಾರಿಗೂ ಖಚಿತತೆ ಇಲ್ಲ. ಆದ್ದರಿಂದ ನಾವು ಪ್ರತಿಯೊಂದು ಕ್ಷಣವನ್ನೂ ಜವಾಬ್ದಾರಿಯಿಂದ, ಜಾಗರೂಕತೆಯಿಂದ ಬದುಕಬೇಕು. ವಾಲ್ಪರೈ ದುರಂತದಲ್ಲಿ ಜೀವ ಕಳೆದುಕೊಂಡ ಶಿಕ್ಷಕರ ಆತ್ಮಗಳಿಗೆ ಶಾಂತಿ ಸಿಗಲಿ. ಅವರ ಸೇವೆ, ತ್ಯಾಗ ಮತ್ತು ಸ್ಮರಣೆ ನಮ್ಮ ಹೃದಯಗಳಲ್ಲಿ ಸದಾ ಜೀವಂತವಾಗಿರಲಿ. ಅವರಿಂದ ನಾವು ಪಡೆದ ಜ್ಞಾನವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅವರ ಕನಸುಗಳನ್ನು ಮುಂದುವರಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ.

# ಪಕ್ಷ ವಿರೋಧಿ ಕೆಲಸ ಮಾಡಿದವರಿಗೆ ಶಿಕ್ಷೆ

## ಸಮರ್ಥ್ ಗೆದ್ದೇ ಗೆಲ್ತಾರೆ ಎನ್ನುವ ಸಂಪೂರ್ಣ ನಂಬಿಕೆ ನಮಗಿದೆ ಎಂದು ಡಾ ಪ್ರಭಾ ವಿಶ್ವಾಸ

• **ಉದಯವಾಹಿನಿ, ದಾವಣಗೆರೆ**

ಪಕ್ಷದ ವರಿಷ್ಠರು ಒಂದು ನಿರ್ಧಾರ ತೆಗೆದುಕೊಂಡರೆ ಅದರ ಹಿಂದೆ ಸೂಕ್ತ ಕಾರಣ ಇರುತ್ತದೆ. ಅದರಂತೆ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ವಿರುದ್ಧ ಕೆಲಸ ಮಾಡಿದವರಿಗೆ ಶಿಕ್ಷೆಯಾಗಿದೆ, ಎಂದು ಸಂಸದೆ ಡಾ ಪ್ರಭಾ ಮಲ್ಲಿಕಾರ್ಜುನ್ ಹೇಳಿದ್ದಾರೆ ದಾವಣಗೆರೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅಬ್ದುಲ್ ಜಬ್ಬಾರ್ ಪಕ್ಷದಿಂದ ಅಮಾನತು ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಂಸದೆ, ದಾವಣಗೆರೆ ಉಪಚುನಾವಣೆ ಬಳಿಕ ಕೇಳಿಬಂದ ಆರೋಪಗಳಿಗೆ ಸಂಬಂಧಿಸಿದಂತೆ ಕೆಪಿಸಿಸಿ, ಎಐಸಿಸಿ ಮಟ್ಟದಲ್ಲಿ ಚರ್ಚಿಸಿ, ಎಲ್ಲರ ಅಭಿಪ್ರಾಯ ಪಡೆದು, ಚುನಾವಣೆಯಲ್ಲಿ ಯಾರು, ಯಾವ ರೀತಿ ಕೆಲಸ ಮಾಡಿದ್ದಾರೆ ಎಂಬುದನ್ನು ಕೂಲಂಕಷವಾಗಿ ನೋಡಿದ ಬಳಿಕವೇ ವರಿಷ್ಠರು ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಕಾಂಗ್ರೆಸ್ ಒಂದು ಶಿಸ್ತುಬದ್ಧ ಪಕ್ಷ ಎಂಬುದು ಈಗ ಎಲ್ಲರಿಗೂ ಅರ್ಥವಾಗುತ್ತಿದೆ ಎಂದರು.

**ಪಕ್ಷ ಎಲ್ಲರನ್ನೂ ಗಮನಿಸುತ್ತದೆ:** ಕೇವಲ ಅಲ್ಪಸಂಖ್ಯಾತರ ಮೇಲೆ ಕ್ರಮವಾಗುತ್ತಿದೆ. ಶಾಮನೂರು ಶಿವಶಂಕರಪ್ಪನವರು 2023ರ ಚುನಾವಣೆ ವೇಳೆ ಶಿವಮೊಗ್ಗದಲ್ಲಿ ಬಿ ವೈ ರಾಘವೇಂದ್ರರನ್ನು ಗೆಲ್ಲಿಸಿ ಎಂದು ಹೇಳಿದಾಗ ಏಕೆ ಕ್ರಮ ಕೈಗೊಳ್ಳಲಿಲ್ಲ ಎಂಬ ಪ್ರಶ್ನೆ ಕೇಳಿಬರುತ್ತಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಅವರು ಯಾರನ್ನೂ ಗೆಲ್ಲಿಸಿ ಎಂದು ಹೇಳಿಲ್ಲ. ಶಿವಮೊಗ್ಗದಲ್ಲಿ ನಡೆದ ವೀರಶೈವ ಮಹಾಸಭಾದ ಸಮಾರಂಭದಲ್ಲಿ, ರಾಘವೇಂದ್ರ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದಷ್ಟೇ ಅಪ್ಪಾಜಿ ಹೇಳಿದ್ದರು. ಪಕ್ಷ ಎಲ್ಲರನ್ನೂ ಗಮನಿಸುತ್ತದೆ, ಎಂದು ಹೇಳಿದರು.

**ಸಮರ್ಥ್ ಗೆದ್ದೇ ಗೆಲ್ತಾರೆ:** ದಾವಣಗೆರೆ ದಕ್ಷಿಣದ ಮತದಾರರು ಯಾವಾಗಲೂ ಕಾಂಗ್ರೆಸ್ ಪರವಾಗಿದ್ದಾರೆ. ಪಕ್ಷದ ಅಭ್ಯರ್ಥಿ ಸಮರ್ಥ್ 8,000, 15,000, 30,000 ಮತಗಳಿಂದ ಗೆಲ್ಲುತ್ತಾರೆ ಎಂದು ಜನರೇ ಮಾತನಾಡುತ್ತಿದ್ದಾರೆ. ಮೇ 4ರಂದು ಎಷ್ಟು ಅಂತರದ ಗೆಲುವು ಎಂದು ಗೊತ್ತಾಗಲಿದೆ. ಸಮರ್ಥ್ ಗೆದ್ದೇ ಗೆಲ್ತಾರೆ ಎನ್ನುವ ಸಂಪೂರ್ಣ ನಂಬಿಕೆ ನಮಗಿದೆ, ಎಂದು ಸಂಸದರು ವಿಶ್ವಾಸ ವ್ಯಕ್ತಪಡಿಸಿದರು.



**ಕರ್ನಾಟಕ ಮುಸ್ಲಿಂ ಮುತ್ತಹಿದ ಮಹಾಜ್ ಖಂಡನೆ:** ದಾವಣಗೆರೆ ಉಪಚುನಾವಣೆ ಬಳಿಕ ಮುಸ್ಲಿಂ ಮುಖಂಡರ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ತಳೆದಿರುವ ನಿಲುವನ್ನು ನಾನಾ ಮುಸ್ಲಿಂ ಸಂಘಟನೆಗಳ ಒಕ್ಕೂಟವಾದ ಕರ್ನಾಟಕ ಮುಸ್ಲಿಂ ಮುತ್ತಹಿದ ಮಹಾಜ್ ಖಂಡಿಸಿದೆ.

ಕಾಂಗ್ರೆಸ್ ಪಕ್ಷವು ಮುಸ್ಲಿಂರನ್ನು ವೋಟ್‌ಬ್ಯಾಂಕ್ ಆಗಿ ಮಾತ್ರ ಪರಿಗಣಿಸಿದ್ದು, ಅನ್ಯಾಯದ ವಿರುದ್ಧ ಧ್ವನಿ ಎತ್ತುವರಿಗೆ ಶಿಸ್ತು ಕ್ರಮಗಳ ಮೂಲಕ ಬೆದರಿಕೆ ಹಾಕಲಾಗುತ್ತಿದೆ. ಈ ಧೋರಣೆಯನ್ನು ಮುಸ್ಲಿಂ ಸಮುದಾಯ ಯಾವತ್ತೂ ಒಪ್ಪಿಕೊಳ್ಳುವುದಿಲ್ಲ, ಎಂದು ರಾಜ್ಯ ಮುಸ್ಲಿಂ ಮುತ್ತಹಿದ ಮಹಾಜ್ ರಾಜ್ಯ ಸಂಯೋಜಕ ಮಸೂದ್ ಅಬ್ದುಲ್ ಖಾದಿರ್ ಸುದ್ದಿಗೋಷ್ಠಿಯಲ್ಲಿ ಬುಧವಾರ ಎಚ್ಚರಿಸಿದರು.

> ಪಕ್ಷ ವಿರೋಧಿ ನೆಪದಲ್ಲಿ ನಿರ್ದಿಷ್ಟ ಸಮುದಾಯವನ್ನು ಮಾತ್ರ ಟಾರ್ಗೆಟ್ ಮಾಡಲಾಗಿದ್ದು, ಇದು ಕೆಲವು ವ್ಯಕ್ತಿಗಳಿಗೆ ಸೀಮಿತವಾದ ವಿಷಯವಲ್ಲ. ಮುಸ್ಲಿಂ ಸಮುದಾಯದ ಘನತೆ, ಗೌರವಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿದೆ. ದಾವಣಗೆರೆ ಉಪ ಚುನಾವಣೆ ಹಿನ್ನೆಲೆಯಲ್ಲಿ ಮುಸ್ಲಿಂ ಮುಖಂಡರ ವಿರುದ್ಧ ಕೈಗೊಳ್ಳುತ್ತಿರುವ ಕ್ರಮಗಳು ನ್ಯಾಯ, ಮೌಲ್ಯಗಳಿಗೆ ವಿರುದ್ಧವಾಗಿವೆ.
>
> -ಡಾ ಪ್ರಭಾ ಮಲ್ಲಿಕಾರ್ಜುನ್, ಸಂಸದೆ

### ಕಾಂಗ್ರೆಸ್ ಶಿಸ್ತಿನ ಪಕ್ಷ

ಕಾಂಗ್ರೆಸ್‌ನಲ್ಲಿ ಮುಸ್ಲಿಂ ಮುಖಂಡರ ವಿರುದ್ಧದ ಕ್ರಮದ ಬಗ್ಗೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರತಿಕ್ರಿಯೆ, ಉಪಚುನಾವಣೆಯಲ್ಲಿ ಪಕ್ಷದ ವಿರುದ್ಧ ಕೆಲಸ ಮಾಡಿದವರಿಗೆ ಹೈಕಮಾಂಡ್ ಸೂಕ್ತ ಶಿಕ್ಷೆ ನೀಡಿದ್ದು, ಕಾಂಗ್ರೆಸ್ ಶಿಸ್ತಿನ ಪಕ್ಷ ಎಂದಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಅವರು ಭಾರಿ ಅಂತರದಿಂದ ಗೆಲ್ಲುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ನವಲಿ ಸೇರಿ ವಿವಿಧ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಇಂದು

• **ಉದಯ ವಾಹಿನಿ ಕಾರಟಗಿ**

ಉಪ-ವಿಭಾಗದ ನವಲಿ ಶಾಖಾ ವ್ಯಾಪ್ತಿಯಲ್ಲಿ ದಿನಾಂಕ : 23/4/2026 ಗುರುವಾರ 110/11KV ನವಲಿ ವಿದ್ಯುತ್ ಉಪ-ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಾಹಣೆ ಕೈಗೊಳ್ಳುತ್ತಿದ್ದು, ಬೆಳ್ಳಿಗ್ಗೆ 8:00 ರಿಂದ ಮಧ್ಯಾಹ್ನ 02:00 ಗಂಟೆವರೆಗೆ ಈ ಕೆಳಗೆ ತಿಳಿಸಿದ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ವ್ಯತ್ಯಯ ಉಂಟಾಗುತ್ತದೆ. ಕಾರಣ 110/11KV ವಿದ್ಯುತ್ ಉಪ ವಿತರಣಾ ಕೇಂದ್ರದಿಂದ ಸರಬರಾಜುಗೊಂಡಿರುವ ನವಲಿ, ನವಲಿ ತಾಂಡಾ, ಸಂಕನಾಳ, ಆದಾಪೂರ, ಬೈರಾಪೂರ, ಹಿರೇಖೇಡ, ಚಿಕ್ಕಖೇಡ, ನೀರಲೂಟಿ, ಸಿರಿವಾರ. ಗೋಡಿನಾಳ, ಮಲ್ಲಿಗೆವಾಡ, ಕೆ. ಕಾಟಾಪುರ, ಬಸವಣ್ಣಕ್ಯಾಂಪ್, ಚಿಕ್ಕ-ಡಂಕನಕಲ್, ಹಿರೇ-ಡಂಕನಕಲ್, ಜೀರಾಳ, ಜೀರಾಳ ಕಲ್ಲುಡಿ ಮತ್ತು ಕ್ಯಾಂಪ್, ಉದ್ದಿಹಾಳ, ಈಚನಾಳ, ಕ್ಯಾರಿಹಾಳ, ಚರ್ಚಿನಗುಡ್ಡ, ತಾಂಡ, ವಡಕಿ, ಉಮಳಿ ಕಾಟಾಪುರ, ಆಕಳಕುಂಪಿ, ಗುಡದೂರ, ಕೆ. ಮಲ್ಲಾಪೂರ, ಕರಡೋಣಿ, ಸೋಮನಾಳ ಬುನ್ನಟ್ಟಿ, ಯತ್ನಟ್ಟಿ, ಇನ್ನಿತರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಿದ್ಯುತ್ ವ್ಯತ್ಯಯವಾಗುತ್ತದೆ. ಕಾರಣ ಸುತ್ತಮುತ್ತಲಿನ ಗ್ರಾಮಗಳ ಗ್ರಾಹಕರು ಜೆಸ್ಕಾಂನಲ್ಲಿ ಸಹಕರಿಸಲು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನ ಉಪ-ವಿಭಾಗ, ಗು.ವಿ.ಸ. ಕಂ.ನಿ.ನಿ. ಕಾರಟಗಿ, ಇವರು ವಿನಂತಿಸಿದ್ದಾರೆ

**ವಿಶೇಷ ಸೂಚನೆ:** ಈ ಮೂಲಕ ಸಾರ್ವಜನಿಕರಿಗೆ ಸೂಚಿಸುವುದೇನೆಂದರೆ, ಸದರಿ ಮೇಲಿನ ಕೆಲಸವು ಬೇಗನೆ ಮುಕ್ತಾಯಗೊಂಡಲ್ಲಿ ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು ಆದ್ದರಿಂದ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ಥಿ ಕೆಲಸ ಕಾರ್ಯಗಳನ್ನು ಮಾಡಬಾರದೆಂದು ಈ ಮೂಲಕ ಕೋರಲಾಗಿದೆ. ಒಂದು ವೇಳೆ ವಿದ್ಯುತ್ ಅಪಘಾತ ಸಂಭವಿಸಿದಲ್ಲಿ ನಮ್ಮ ಕಂಪನಿಯು ಜವಬ್ದಾರಿಯಾಗಿರುವುದಿಲ್ಲ.ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಬಾಗಲಕೋಟ ವಿವಿ: ಉದ್ಯಮಿ ಮಹೇಶ ಬೆಲ್ಲದ ಸೇರಿ ಮೂವರಿಗೆ ಗೌರವ ಡಾಕ್ಟರೇಟ್


• **ಉದಯವಾಹಿನಿ, ಬಾಗಲಕೋಟೆ**



ಇಳಕಲ್ ವಿಜಯ ಮಹಾಂತೇಶ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ, ಬಾಹ್ಯಾಕಾಶ ವಿಜ್ಞಾನಿ ಎಸ್. ನಂಬಿ ನಾರಾಯಣನ್, ಉದ್ಯಮಿ ಮಹೇಶ ಬೆಲ್ಲದ ಅವರಿಗೆ ಜಮಖಂಡಿಯಲ್ಲಿರುವ ಬಾಗಲಕೋಟ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲಾಗಿದೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಆನಂದ ದೇಶಪಾಂಡೆ, ಗುರುಮಹಾಂತ ಸ್ವಾಮೀಜಿ ಅವರು ದಾರ್ಶನಿಕರಾಗಿ ವ್ಯಸನ ಮುಕ್ತ ಸಮಾಜ, ಸಾಮಾಜಿಕ ಸುಧಾರಣೆಗಳಿಗೆ ಮಾಡಿರುವ ಕಾರ್ಯ ಗುರುತಿಸಿ. ಎಸ್. ನಂಬಿ ನಾರಾಯಣನ್ ಅವರಿಗೆ ಭಾರತೀಯ ಬಾಹ್ಯಾಕಾಶಕ್ಕೆ ನೀಡಿದ ಕೊಡುಗೆಗಾಗಿ ನೀಡಲಾಗುತ್ತಿದೆ ಎಂದರು. ಮಹೇಶ ಬೆಲ್ಲದ ಅವರಿಗೆ ಟೆಕ್ ಉದ್ಯಮ, ಸಾಮಾಜಿಕ ಸೇವೆ, ಗುಣಮಟ್ಟದ ಶಿಕ್ಷಣಕ್ಕೆ ನೀಡಿದ ಕೊಡುಗೆ ಗುರುತಿಸಿ ಗೌರವ ಡಾಕ್ಟರೇಟ್ ನೀಡಲು ನಿರ್ಧರಿಸಲಾದೆ ಎಂದರು. ಏ.24 ರಂದು ಬೆಳಿಗ್ಗೆ 11.30ಕ್ಕೆ ಬಿಎಲ್‌ಡಿಇ ದರ್ಬಾರ್ ಹಾಲ್‌ನಲ್ಲಿ ನಡೆಯುವ ಒಂದನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಲ್ಹೋತ್ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಿದ್ದಾರೆ ಎಂದರು.

# ಕುಡಿಯಲು ಕಾಲುವೆ ನೀರೇ ಗತಿ

• **ಉದಯವಾಹಿನಿ, ತೆಕ್ಕಲಕೋಟೆ**



ಸಮೀಪದ ಸಿರಿಗೇರಿ ಗ್ರಾಮ ಸೇರಿದಂತೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ, ಕೆರೆಯ ಅಭಿವೃದ್ಧಿ ಕಾಮಗಾರಿಯು ಸಂಪೂರ್ಣ ಸ್ಥಗಿತಗೊಂಡಿದ್ದು, ಕೆರೆ ನೀರು ಅವಲಂಬಿಸಿದ್ದ ಗ್ರಾಮಸ್ಥರಿಗೆ ಕುಡಿಯಲು ಕಾಲುವೆ ನೀರೇ ಗತಿ ಎಂಬಂತಾಗಿದೆ. ದಾಸಾಪುರ ಗ್ರಾಮದ ಬಳಿ ನಿರ್ಮಿಸಲಾದ ಕೆರೆಯು ಸಿರಿಗೇರಿ, ಕೊಂಚಿಗೇರಿ, ದಾಸಾಪುರ, ಸಿದ್ಧರಾಂ ಪುರ ಗ್ರಾಮಗಳಿಗೆ ನೀರು ಪೂರೈಕೆ ಮಾಡುವ ಉದ್ದೇಶದಿಂದ ಕೆರೆ ನಿರ್ಮಿಸಲಾಗಿತ್ತು. ಆದರೆ ಕೆಲ ವರ್ಷಗಳಿಂದ ಕೆರೆ ಸಿಥಿಲಗೊಂಡು ಶೇಖರಣೆ ಮಾಡಿದ್ದ ನೀರು ಸೋರಿಕೆ ಆಗುತ್ತಿದ್ದ ಕಾರಣ. ಕೆರೆಯನ್ನು ಪುನಃ ಅಭಿವೃದ್ಧಿಗೊಳಿಸಲು ತೀರ್ಮಾನಿಸಲಾಗಿತ್ತು.

ಅದರಂತೆ 2024 ರಲ್ಲಿ ಸಿರಿಗೇರಿ ಮತ್ತು ಇತರೆ 3 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಪುನಃಶ್ಚೇತನ ಕಾಮಗಾರಿಯ ಅಂದಾಜು ಮೊತ್ತ 9.96 ಕೋಟಿ ಜಲ ಜೀವನ ಮಿಷನ್ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆಗೆ ಒಪ್ಪಿಗೆ ನೀಡಲಾಗಿತ್ತು. ಅದರನ್ವಯ ಕೆರೆಯ ನೀರನ್ನು ಸಂಪೂರ್ಣ ಬರಿದು ಮಾಡಿ, ಕೆರೆಯ ನೆಲಕ್ಕೆ ಹಾಸಿದ್ದ ಬಂಡೆಗಳನ್ನು ಕಿತ್ತುಹಾಕಿ ಗುಡ್ಡೆ ಹಾಕಲಾಯಿತು. ನಂತರ ಕಾಮಗಾರಿ ಆರಂಭವಾಗದೆ ಕಿತ್ತಲಾದ ನೆಲಹಾಸು (ಕರೆ) ಬಂಡೆಗಳ ರಾಶಿ ಕೆರೆ ಅಂಗಳದಲ್ಲಿ ಕಂಡುಬರುತ್ತಿದ್ದು, ಪುರಾತನ ಪಳೆಯುಳಿಕೆಗಳ ಅವಶೇಷಗಳಂತೆ ಕಂಡು ಬರುತ್ತಿದೆ.


ಕೆರೆ ಕಾಮಗಾರಿ ಚಾಲ್ತಿಯಲ್ಲಿದ್ದು, ಕಾಲುವೆಯಿಂದ ಕೆರೆವರೆಗಿನ ಪೈಪ್ ಲೈನ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಜೂನ್ ಅಂತ್ಯದ ವೇಳೆಗೆ ಕಾಮಗಾರಿ ಮುಗಿಯಲಿದೆ ಎಂದು ಜಿ.ಪಂ. ಜೆಇ ಕಾಂತರಾಜ್ ತಿಳಿಸಿದರು. ಏಪ್ರಿಲ್ ಅಂತ್ಯಕ್ಕೆ ಕಾಲುವೆಗೆ ನೀರು ಸರಬರಾಜು ಇರುವುದಿಲ್ಲ ಅದ್ದರಿಂದ ಮೇ, ಜೂನ್ ಮತ್ತು ಜುಲೈ ತಿಂಗಳವರೆಗೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಲಿದೆ ಎಂಬ ಆತಂಕ ಗ್ರಾಮಸ್ಥರದು.ಕುಡಿಯುವ ನೀರು ಸರಬರಾಜು ಇಲ್ಲದೆ ಇರುವಾಗ ಬೋರ್‌ವೆಲ್ ನೀರು ಬಿಡಲಾಗುವುದು ಎಂದು ಹೆಸರು ಹೇಳಲು ಇಚ್ಚಿಸದ ಅಧಿಕಾರಿ ತಿಳಿಸಿದ್ದಾರೆ.

# ಡೋಣಿ ನದಿ ಹೂಳು ಎತ್ತಿ ಶಾಶ್ವತ ಪರಿಹಾರಕ್ಕೆ ಆಗ್ರಹ

• **ಉದಯವಾಹಿನಿ, ವಿಜಯಪುರ**

ಜಿಲ್ಲೆ ಪಂಚ ನದಿಗಳ ಜಿಲ್ಲೆ ಎಂದು ಖ್ಯಾತಿಯಾಗಿದೆ, ಆದರೆ ಪ್ರತಿ ಎರಡು ವರ್ಷ ಮೂರು ವರ್ಷಕ್ಕೊಮ್ಮೆ ಒಣ ಬರ ಹಸಿಬರ ತಪ್ಪಿದ್ದಲ್ಲ ಇದರಿಂದ ಈ ಭಾಗದ ರೈತರು ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ ಕೂಡಲೇ ಇದಕ್ಕೊಂದು ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಮಾತನಾಡಿದರು.

ಅದರಲ್ಲಿ ಪ್ರಮುಖವಾಗಿ ಮಹಾರಾಷ್ಟ್ರದಿಂದ ಇತ್ತ ಕರ್ನಾಟಕದ ಮಾರ್ಗವಾಗಿ ಆಂಧ್ರಕ್ಕೆ ಸೇರುವಂತಹ ದೋಣಿಯು ಸುಮಾರು 215 km ಉದ್ದ ಇದ್ದು ಇದರಲ್ಲಿ ಸಾಕಷ್ಟು ಹೂಳು ತುಂಬಿ, ಮಳೆಗಾಲದಲ್ಲಿ ದೋಣಿ ತುಂಬಿ ಹರಿಯುವಾಗ ಆ ಹೊಳಿನಿಂದ ನೀರು ದೋಣಿ ನೀರು ಅಕ್ಕಪಕ್ಕದ ಜಮೀನುಗಳಿಗೆ ನುಗ್ಗಿ ತನ್ನ ರುದ್ರಾವತಾರದೊಂದಿಗೆ ಸಾಕಷ್ಟು ನಷ್ಟ ಉಂಟು ಮಾಡುತ್ತದೆ. ಇದಕ್ಕಾಗಿ ಹಲವಾರು ವರ್ಷಗಳಿಂದ ಈ ದೋಣಿ ಅಕ್ಕಪಕ್ಕದ ರೈತರು,ರೈತ ಮುಖಂಡರು, ರೈತ ಸಂಘದವರು ಹಾಗೂ ರೈತಪರ ಚಿಂತಕರು ಜಿಲ್ಲಾಧಿಕಾರಿಗಳಿಗೆ ಹಾಗೂ ರಾಜ್ಯ ಸರಕಾರಕ್ಕೆ ಹಲವಾರು ಬಾರಿ ಮನವಿಗಳನ್ನು ಸಲ್ಲಿಸಿದರು ಇದಕ್ಕೆ ಒಂದು ಶಾಶ್ವತ ಪರಿಹಾರ ಸಿಕ್ಕಿಲ್ಲ .



ಉದಯವಾಹಿನಿ ಚಿತ್ರ

ಈ ಕೂಡಲೇ ಕರ್ನಾಟಕದಲ್ಲಿ ಹಾದು ಹೋಗುವಂತ ದೋಣಿಯ ಸಂಪೂರ್ಣ ಅಳತೆಯನ್ನು ಮಾಡಿ ಅಲ್ಲಿರುವಂಥ ಹೂಳನ್ನ ತೆಗೆದು ಅಕ್ಕಪಕ್ಕದಲ್ಲಿ ಕಲ್ಲಿನ ತಡೆಗೋಡೆ ಮಾಡಿ ದೊಡ್ಡ ದೊಡ್ಡ ಮರಗಳನ್ನು ಹಚ್ಚುವುದರ ಮೂಲಕ ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕು, ಇದಕ್ಕಾಗಿ ವಿಜಯಪುರದ ಜಿಲ್ಲಾಧಿಕಾರಿಗಳಾದಂತ ಡಾಕ್ಟರ್ ಕೆ ಆನಂದ ಅವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದಂತಹ ಡಾ. ಎಂಬಿ ಪಾಟೀಲ್ ಅವರು ರಾಜ್ಯ ಸರ್ಕಾರಕ್ಕೆ ಒಂದು ಪ್ರಸ್ತಾವನೆ ಸಲ್ಲಿಸಿ ಅದಕ್ಕೆ ಬೇಕಾಗುವಂತ ಅನುದಾನವನ್ನ ಮಂಜೂರು ಮಾಡಿಸಬೇಕು ಅಂದಾಗ ಮಾತ್ರ ದೋಣಿಯ ಅಕ್ಕ ಪಕ್ಕದ ರೈತರಿಗೆ ಅನುಕೂಲವಾಗಲಿದೆ.

ಅದು ಬಿಟ್ಟು ರೈತರು ನಷ್ಟಗೊಂಡಾಗ ಕೇವಲ ನೆಪ ಮಾತ್ರಕ್ಕೆ ಒಂದು ಕೋಟಿ ಎರಡು ಕೋಟಿ ಐದು ಕೋಟಿ ಅಂತ ಹೇಳಿ ಪ್ರತಿ ವರ್ಷ ನೀವು ಅನುದಾನ ಇಟ್ಟರೂ ಕೂಡ ಇದಕ್ಕೆ ಯಾವುದು ಶಾಶ್ವತ ಪರಿಹಾರ ಆಗುವುದಿಲ್ಲ ಕೂಡಲೇ ಎಚ್ಚೆತ್ತುಕೊಂಡು ಶಾಶ್ವತ ಪರಿಹಾರಕ್ಕಾಗಿ ಸಾವಿರ ಕೋಟಿ ರೂಪಾಯಿ ಮೀಸಲಿಡಬೇಕು ಅಂತ ಹೇಳಿ ಈ ಸಂದರ್ಭದಲ್ಲಿ ಆಗಮಿಸುತ್ತೇವೆ. ಈ ಸಂಧರ್ಭದಲ್ಲಿ ರೈತ ಮುಖಂಡರಾದ ಮಲ್ಲಿಕಾರ್ಜುನ ಭಟಗಿ, ಅಭಿಷೇಕ್ ಹೂಗಾರ ಇದ್ದರು.

# ನರಗುಂದ | ಗೋಣಿಚೀಲ ಕೊರತೆ: ಕಡಲೆ ಖರೀದಿ ಸ್ಥಗಿತ

## ಬೆಂಬಲ ಬೆಲೆಯಡಿ ಖರೀದಿ; ಅವಧಿ ಮುಗಿಯುವ ಆತಂಕದಲ್ಲಿ ರೈತಸಮೂಹ

• **ಉದಯವಾಹಿನಿ, ನರಗುಂದ**

ಪಟ್ಟಣದ ಮಾರುಕಟ್ಟೆಯಲ್ಲಿ 12 ದಿನಗಳಿಂದ ಗೋಣಿಚೀಲಗಳು ಬಾರದೆ, ಕಡಲೆ ಖರೀದಿ ಸ್ಥಗಿತಗೊಂಡಿದೆ.ಇದರಿಂದ, ನೋಂದಾಯಿಸಿದ ರೈತರು ಕಡಲೆ ಮಾರಾಟ ಮಾಡಲು ಚಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ. ಬೆಂಬಲ ಬೆಲೆಯಡಿ ಕಡಲೆ ಖರೀದಿ ಕೇಂದ್ರ ಆರಂಭವಾದರೂ ರೈತರಿಗೆ ಪ್ರಯೋಜನ ಇಲ್ಲದಂತಾಗಿದೆ. ಒಂದು ತಿಂಗಳ ಹಿಂದೆ ಕಡಲೆ ಖರೀದಿ ಕೇಂದ್ರ ಆರಂಭಗೊಂಡಿತ್ತು. ಕಡಲೆ ಖರೀದಿಯೂ ನಡೆಯಿತು. ಕೆಲವರಿಗೆ ಹಣವೂ ಪಾವತಿಯಾಗಿದೆ. ಆದರೆ, ಗೋಣಿಚೀಲ ಪೂರೈಸಬೇಕಾದ ಕೆ.ಎಸ್.ಸಿ.ಎಂ.ಎಫ್ ನಿರ್ಲಕ್ಷ್ಯ ವಹಿಸಿದ್ದರಿಂದ ರೈತರಿಗೆ ತೊಂದರೆ ಉಂಟಾಗಿದೆ.

ಕಡಲೆ ಖರೀದಿ ಕೇಂದ್ರಗಳಾದ ಪಟ್ಟಣದ ಟಿಎಪಿಸಿಎಂಎಸ್ ಹಾಗೂ ತಾಲ್ಲೂಕಿನ ಪಿಕೆಪಿಎಸ್ ಕೇಂದ್ರಗಳಿಗೆ ಗೋಣಿ ಚೀಲ ಪೂರೈಕೆಯಾಗಿಲ್ಲ. ಅಲ್ಲಿನ ಸಿಬ್ಬಂದಿಯೂ ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

**ಅವಧಿ ಮುಗಿಯುವ ಆತಂಕ:** ಏಪ್ರಿಲ್ 30ರೊಳಗೆ ಕಡಲೆ ಮಾರಾಟ ಮಾಡಬೇಕಿದೆ. ಭಾರಿ ಪ್ರಮಾಣದಲ್ಲಿ ಕಡಲೆ ಖರೀದಿ ಬಾಕಿ ಇರುವುದರಿಂದ, ಗಡುವಿನೊಳಗೆ ಖರೀದಿ ಮಾಡುವರೇ, ಇಲ್ಲವೇ ಎಂಬ ಆತಂಕ ರೈತರಲ್ಲಿದೆ.

ಈ ಸಾಲಿನ ಹಿಂಗಾರು ಹಂಗಾಮಿನಲ್ಲಿ ಖುಷಿ ಹಾಗೂ ನೀರಾವರಿ ಜಮೀನುಗಳಲ್ಲಿ ಕಡಲೆ ಬಿತ್ತನೆ ಮಾಡಲಾಗಿತ್ತು. ಅಲ್ಪಮಟ್ಟಿಗೆ ಇಳುವರಿ ಬಂದಿದೆ. ಆದರೆ, ಮಾರುಕಟ್ಟೆಯಲ್ಲಿ ಸಮರ್ಪಕವಾಗಿ ಬೆಲೆ ಸಿಗದ ಕಾರಣ, ಸರ್ಕಾರ ಆರಂಭಿಸಿದ ಖರೀದಿ ಕೇಂದ್ರಗಳನ್ನೇ ಅವಲಂಬಿಸಬೇಕಿದೆ. ನೋಂದಾಯಿತ ರೈತರ ಪೈಕಿ ಶೇ 40ರಷ್ಟು ರೈತರಷ್ಟೇ ಕಡಲೆ ಮಾರಾಟ ಮಾಡಿದ್ದಾರೆ.



ಉದಯವಾಹಿನಿ ಚಿತ್ರ

**ನೋಂದಣಿ:** 2026ರ ಫೆಬ್ರವರಿ 30ರಂದು ಸರ್ಕಾರ ಬೆಂಬಲ ಬೆಲೆಯಡಿ ಕೇಂದ್ರ ತೆರೆಯಲು ಆದೇಶ ಮಾಡಿತು. ಅದರಂತೆ ಪಟ್ಟಣದ ಟಿಎಪಿಸಿಎಂಎಸ್, ತಾಲ್ಲೂಕಿನ ಚಿಕ್ಕ ನರಗುಂದ, ಜಗಾಪೂರ, ಶಿರೋಳ, ಸುರಕೋಡ, ಸಂಕದಾಳ, ಕೊಣ್ಣೂರ, ಹಿರೇಕೊಪ್ಪ, ಖಾನಾಪೂರದ ಪ್ರಾಥಮಿಕ ಸಹಕಾರ ಸಂಘಗಳು ಮತ್ತು ಬಾಬಾಸಾಹೇಬ ರೈತ ಉತ್ಪಾದನಾ ಕಂಪನಿಯಲ್ಲಿ ಒಟ್ಟು 20,732 ರೈತರು ಕಡಲೆ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ.

ಕಡಲೆ ಮಾರಾಟ ಮಾಡಲು ಪ್ರತಿ ದಿನ ರೈತರು ಕೇಂದ್ರಕ್ಕೆ ಬಂದು, ಅಧಿಕಾರಿಗಳನ್ನು ವಿಚಾರಿಸುತ್ತಿದ್ದಾರೆ. ಗೋಣಿ ಚೀಲ ಬಂದಿಲ್ಲ ಎಂಬ ಸಹಜ ಉತ್ತರ ದೊರೆಯುತ್ತಿದೆ. ಇದರಿಂದ ರೈತರು ರೋಸಿಹೋಗಿದ್ದಾರೆ.

**ರೈತರಿಗೆ ಹೋರಾಟ ಅನಿವಾರ್ಯ:** ಗೋಣಿಚೀಲಗಳು ಬಾರದ ಕಾರಣ ರೈತರು ಕಡಲೆ ಮಾರಾಟ ಮಾಡಲಾಗುತ್ತಿಲ್ಲ, ಅವಧಿ ಮುಗಿಯುವ ಆತಂಕವೂ ಇದೆ. ಇದರಿಂದ ಸರ್ಕಾರದ ಯೋಜನೆಯ ಲಾಭ ಎಲ್ಲಾ ರೈತರಿಗೆ ಸಿಗದಂತಾಗಿದೆ. ಕೆ.ಎಸ್.ಸಿ.ಎಂ. ಎಫ್ ಕೂಡಲೇ ಗೋಣಿಚೀಲಗಳನ್ನು ಪೂರೈಕೆ ಮಾಡಬೇಕು. ಇಲ್ಲವಾದರೆ ರೈತರಿಗೆ ಹೋರಾಟ ಅನಿವಾರ್ಯವಾಗುತ್ತದೆ' ಎಂದು ರೈತ ಮುಖಂಡ ಎಸ್.ಬಿ. ಜೋಗಣ್ಣವರ ಹೇಳಿದರು.

> 20 ಸಾವಿರ ಗೋಣಿಚೀಲಕ್ಕಾಗಿ ಬೇಡಿಕೆ ಸಲ್ಲಿಸಿದ್ದೇವೆ. ಕೋಲ್ಕತ್ತದಿಂದ ಶೀಘ್ರದಲ್ಲೇ ಬರಲಿವೆ. ಬಂದ ತಕ್ಷಣ ಕಡಲೆ ಖರೀದಿ ಕೇಂದ್ರಗಳಿಗೆ ಪೂರೈಸಲಾಗುವುದು.
>
> -ಸಚಿನ್ ಪಾಟೀಲ, ಕೆ.ಎಸ್.ಸಿ.ಎಂ.ಎಫ್. ವ್ಯವಸ್ಥಾಪಕ

# ಮಹಿಳಾ ಮೀಸಲಾತಿ ಮಸೂದೆ: 'ಇಂಡಿಯಾ' ಒಕ್ಕೂಟ ಬೆಲೆ ತೆರಲಿದೆ: ಸಿ.ಸಿ.ಪಾಟೀಲ

• **ಉದಯವಾಹಿನಿ ಗದಗ**



ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಸೋಲಿಸಿದ್ದಕ್ಕೆ ಕಾಂಗ್ರೆಸ್ ಅದರ ಮಿತ್ರಪಕ್ಷಗಳ ಇಂಡಿಯಾ ಒಕ್ಕೂಟ ಮುಂದಿನ ದಿನಗಳಲ್ಲಿ ದೊಡ್ಡ ಬೆಲೆ ತೆರಲಿದೆ ಎಂದು ನರಗುಂದ ಶಾಸಕ ಸಿ.ಸಿ.ಪಾಟೀಲ ಹೇಳಿದರು.

ಕ್ಷೇತ್ರ ಪುನರ್ ವಿಂಗಡಣೆಯಿಂದ ಹೊಸ ನಾಯಕತ್ವ ಸೃಷ್ಟಿಯಾಗುತ್ತಿತ್ತು. ಮಹಿಳಾ ಮೀಸಲಾತಿಯಿಂದ ಸ್ತ್ರೀ ಸಬಲೀಕರಣವಾಗುತ್ತಿತ್ತು. ಆದರೆ, ಇಂಡಿಯಾ ಒಕ್ಕೂಟ ಇದಕ್ಕೆ ಕಲ್ಲುಹಾಕಿದ್ದು ಅವರ ಶಾಪ ತಟ್ಟಲಿದೆ' ಎಂದು ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕಿಡಿಕಾರಿದರು. ಮಹಿಳರಿಗೆ ರಾಜಕೀಯ ಪ್ರಾತಿನಿಧ್ಯದ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಸ್ತ್ರೀಶಕ್ತಿಯ ಬಳಕೆ ಸೇರಿದಂತೆ ಹಲವು ಮುಖ್ಯ ಉದ್ದೇಶಗಳನ್ನು ಇಟ್ಟುಕೊಂಡು ಮಹಿಳಾ ಮೀಸಲಾತಿ ವಿಧೇಯಕ ಮತ್ತು ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗಿತ್ತು. ಆದರೆ, ಇಂಡಿಯಾ ಒಕ್ಕೂಟ ಅದನ್ನು ಸೋಲಿಸಿತು. ಇದಕ್ಕೆ ಪ್ರಿಯಾಂಕಾ ಗಾಂಧಿ ಸೇರಿದಂತೆ ಕಾಂಗ್ರೆಸ್ ಮಿತ್ರ ಪಕ್ಷಗಳ ಹಲವು ಮಹಿಳಾ ಸಂಸದರು ಚಪ್ಪಾಳೆ ತಟ್ಟಿ ಸಂಭ್ರಮಿಸಿದ್ದು, ಲೋಕಸಭೆ ಇತಿಹಾಸದಲ್ಲಿ ಮರೆಯಲಾರದ ವರ್ತನೆ ಎಂದು ಟೀಕಿಸಿದರು.

ಇದು ನೆನ್ನೆ, ಮೊನ್ನೆಯ ಬೇಡಿಕೆ ಅಲ್ಲ. ಕಳೆದ 30 ವರ್ಷಗಳ ಬೇಡಿಕೆಯಾಗಿದೆ. 1971ರ ಜನಗಣತಿ ಪ್ರಕಾರ ದೇಶದಲ್ಲಿ 55 ಕೋಟಿ ಜನಸಂಖ್ಯೆ ಇತ್ತು. ಆಗ 543 ಲೋಕಸಭಾ ಕ್ಷೇತ್ರಗಳಿದ್ದವು. ಈಗ ದೇಶದ ಜನಸಂಖ್ಯೆ 140 ಕೋಟಿ ದಾಟಿದೆ. ಅದಕ್ಕೆ ತಕ್ಕಂತೆ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕೂಡ ಹೆಚ್ಚಿಸುವುದು ಅನಿವಾರ್ಯ.

ಕಾಂಗ್ರೆಸ್‌ನವರು ಕ್ಷೇತ್ರ ಪುನರ್‌ವಿಂಗಡಣೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂದು ಆರೋಪ ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಸಂಗತಿ ಎಂದು ಹೇಳಿದರು.

ಮಹಿಳೆಯರು ಇಂದು ಎಲ್ಲಾ ರಂಗದಲ್ಲೂ ಮುಂಚೂಣಿಯಲ್ಲಿದ್ದಾರೆ. ಇಂದಿರಾ ಗಾಂಧಿ ದೇಶ ಮುನ್ನಡೆಸಿದ್ದನ್ನು ಕಾಂಗ್ರೆಸ್ ಮರೆತಿದೆ. ಈ ಮಸೂದೆಯನ್ನು ಸೋಲಿಸುವ ಮೂಲಕ ಕಾಂಗ್ರೆಸ್, ಮಿತ್ರ ಪಕ್ಷಗಳು ಮಹಿಳೆಯರನ್ನು ಅವಮಾನಿಸಿದ್ದಾರೆ. ನಾರಿಶಕ್ತಿಯ ಕನಸು ಭಗ್ನ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆಯನ್ನು ಪ್ರತ್ಯೇಕವಾಗಿ ಮಂಡಿಸಿದ್ದರೆ ನಾವು ಒಪ್ಪುತ್ತಿದ್ದೆವು. ಅದರ ಜತೆಗೆ ಕ್ಷೇತ್ರ ಪುನರ್‌ವಿಂಗಡಣೆ ಜೋಡಿಸಿದ್ದಕ್ಕೆ ನಾವು ವಿರೋಧಿಸಿದ್ದೇವೆ ಎಂದು ಕಾಂಗ್ರೆಸ್ ಹೇಳಿಕೆ ಕೊಟ್ಟಿದೆ. ಅವರು ಮಾಡಿದ ತಪ್ಪು ಮುಚ್ಚಿಕೊಳ್ಳುವುದಕ್ಕೆ ಈ ರೀತಿ ಹೇಳಿಕೆ ಕೊಡುತ್ತಿದ್ದಾರೆ ಎಂದು ಹರಿಹಾಯ್ದರು.

ಈಗ ಸೋಲಾಗಿದೆ ಎಂದು ಬಿಜೆಪಿ ಸುಮ್ಮನೆ ಕೂರುವುದಿಲ್ಲ. ಮುಂದಿನ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಶೇ 66 ಮತ ಪಡೆದು ಮಸೂದೆ ಜಾರಿಗೊಳಿಸುವಲ್ಲಿ ಯಶಸ್ಸು ಕಂಡೇ ಕಾಣುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಮಿನಿ ನ್ಯೂಸ್

### ದಂಡಕ್ಕೆ ತಡೆಯಾಜ್ಞೆ

• **ಉದಯವಾಹಿನಿ, ಬಾಗಲಕೋಟೆ**

ಪತ್ರಕರ್ತರ ವಿರುದ್ಧ ದಾಖಲಿಸಿದ ಪ್ರಕರಣದಲ್ಲಿ ದೂರುದಾರರಿಗೆ ದಂಡ ವಿಧಿಸಿದ್ದ ಸಿವಿಲ್ ನ್ಯಾಯಾಲಯದ ಆದೇಶಕ್ಕೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ತಡೆಯಾಜ್ಞೆ ನೀಡಿದೆ. 2023 ಮಾರ್ಚ್ 14ರಂದು ವಿಡಿಯೋ ಮಾಡುವುದನ್ನು ತಡೆದು ಹಲ್ಲೆ ನಡೆಸಲು ಬಂದಿದ್ದರು ಎಂದು ಬಸವನಗೌಡ ಪಾಟೀಲ ಎಂಬುವರು, ಪತ್ರಕರ್ತರಾದ ಸಂತೋಷ ದೇಶಪಾಂಡೆ, ಅನಿರುದ್ಧ ಗಲಗಲಿ, ಆನಂದ ದಲಭಂಜನ, ಶಂಕರ ಕಲ್ಯಾಣಿ ವಿರುದ್ಧ ದೂರು ನೀಡಿದ್ದರು.

ವಿಚಾರಣೆ ನಡೆಸಿದ ಸಿವಿಲ್ ನ್ಯಾಯಾಲಯವು ದೂರುದಾರರಿಗೆ 50 ಸಾವಿರ ದಂಡ ವಿಧಿಸಿ ಆದೇಶಿಸಿತ್ತು. ಈ ಆದೇಶ ಪ್ರಶ್ನಿಸಿ ದೂರುದಾರರು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿ ಪರಿಗಣಿಸಿದ ನ್ಯಾಯಾಲಯವು ದಂಡದ ಆದೇಶಕ್ಕೆ ತಡೆಯಾಜ್ಞೆ ನೀಡಿದೆ. ವಕೀಲರಾದ ಅಬ್ದುಸಮದ್ ಜರತಾರಗರ, ಎಸ್.ಆರ್. ಅನಗಿ ವಕಾಲತ್ತು ವಹಿಸಿದ್ದರು ಎಂದು ದೂರುದಾರ ಬಸನಗೌಡ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮೆಕ್ಕೆಜೋಳದ ರಾಶಿಗೆ ಬೆಂಕಿ: ಹಾನಿ

• **ಉದಯವಾಹಿನಿ, ಕಲಘಟಗಿ**

ತಾಲ್ಲೂಕಿನ ತುಮರಿಕೊಪ್ಪ ಗ್ರಾಮದಲ್ಲಿ ಸೋಮವಾರ ಸಂಜೆ ಸೋಲಾರ್ ಪ್ಯಾನಲ್‌ಗೆ ಸಿಡಿಲು ಬಡಿದು ಸುಮಾರು 200 ಕ್ವಿಂಟಲ್ ಸಂಗ್ರಹದ ಮೆಕ್ಕೆಜೋಳದ ರಾಶಿಗೆ ಬೆಂಕಿ ತಗುಲಿ, ಲಕ್ಷಾಂತರ ರೂಪಾಯಿ ಹಾನಿಯಾಗಿದೆ. ಗ್ರಾಮದ ರೈತ ರುದ್ರಯ್ಯ ಗೊಡಿಮನಿ ಅವರ ಜಮೀನಿನಲ್ಲಿ ಕೊಳವೆ ಬಾವಿಗೆ ಅಳವಡಿಸಿದ್ದ ಸೋಲಾರ್ ಪ್ಯಾನಲ್‌ಗೆ ಸಿಡಿಲು ಬಡಿದ ತಕ್ಷಣ ಬೆಂಕಿ ಹೊತ್ತಿಕೊಂಡು ಪಕ್ಕದ ಮೆಕ್ಕೆಜೋಳ ರಾಶಿಗೆ ತಗುಲಿದೆ. ಅಗ್ನಿಶಾಮಕ ದಳ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದೆ. ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ತಹಶೀಲ್ದಾರ್ ಬಸವರಾಜ ಹೊಂಕದಣವರ ಹಾಗೂ ಸಚಿವ ಸಂತೋಷ ಲಾಡ್ ಅವರ ಆಪ್ತ ಸಹಾಯಕ ಸೋಮಶೇಖರ ಬೆನ್ನೂರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಚಿವರಿಂದ ಪರಿಹಾರ ಕೊಡಿಸುವ ಭರವಸೆ ನೀಡಿದರು.

### ಬೆದರಿಕೆ: 25.60 ಲಕ್ಷ ವಂಚನೆ

• **ಉದಯವಾಹಿನಿ, ಹುಬ್ಬಳ್ಳಿ**


ನಗರದ ಬೈರಿದೇವರಕೊಪ್ಪದ ಅನಿಲ ನೈನೇಗಲಿ ದಂಪತಿಗೆ ಕರೆ ಮಾಡಿದ ಅಪರಿಚಿತ ವ್ಯಕ್ತಿ, ಆತಂಕವಾದಿಯೊಂದಿಗೆ ನಂಟು ಹೊಂದಿ, ಹವಾಲಾ ವ್ಯವಹಾರದಲ್ಲಿ ಭಾಗಿಯಾಗಿದ್ದೀರಿ ಎಂದು ಬೆದರಿಸಿ 26.50 ಲಕ್ಷ ವರ್ಗಾಯಿಸಿಕೊಂಡು ವಂಚಿಸಿದ್ದಾನೆ. ಈ ಬಗ್ಗೆ ಹುಬ್ಬಳ್ಳಿಯ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಗ್ಯಾಸ್ ಸಿಲಿಂಡರ್ ವಶ:** ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಅನ್ನು ಅಕ್ರಮವಾಗಿ ಆಟೋದಲ್ಲಿ ಸಾಗಾಟ ಮಾಡುತ್ತಿದ್ದ ಮಿಲನ ಕಾಲೋನಿಯ ಸುಲೇಮಾನ್ ಮಕಾಂದಾರ ಅವರನ್ನು ಹಳೇ ಹುಬ್ಬಳ್ಳಿ ಪೊಲೀಸರು ಬಂಧಿಸಿ, ನಾಲ್ಕು ಗ್ಯಾಸ್ ಸಿಲಿಂಡರ್ ಮತ್ತು ಆಟೋ ವಶಪಡಿಸಿಕೊಂಡಿದ್ದಾರೆ. ಆನಂದನಗರ ಶಿವಪುತ್ರ ಮಠದ ಬಳಿ ಆಟೋದಲ್ಲಿ ಗ್ಯಾಸ್ ಸಿಲಿಂಡರ್ ತುಂಬಿಕೊಂಡು ಸಾಗಾಟ ಮಾಡುತ್ತಿದ್ದಾಗ ಪೊಲೀಸರು ದಾಳಿ ನಡೆಸಿದರು. ಪ್ರಕರಣ ದಾಖಲಾಗಿದೆ.

### ಪೆಹಲ್ಗಾಮ್ ಉಗ್ರ ದಾಳಿಯಂತ ಘಟನೆಗಳು ಮರುಕಳಿಸದಿರಲಿ

• **ಉದಯವಾಹಿನಿ, ಬೀದರ್**

ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ವರ್ಷದ ಹಿಂದೆ ನಡೆದ ಉಗ್ರರ ದಾಳಿಯಂತ ಘಟನೆಗಳು ಮತ್ತೆ ಮರುಕಳಿಸದಂತೆ ನೋಡಿಕೊಳ್ಳಬೇಕಿದೆ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು. ಭಾಲ್ಕಿಯ ಹೆಲಿಪ್ಯಾಡ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪೆಹಲ್ಗಾಮ್ ದಾಳಿಗೆ ಭಾರತೀಯ ಸೈನಿಕರು ಪ್ರತ್ಯುತ್ತರ ನೀಡಿದ್ದಾರೆ. ಆ ಘಟನೆ ನಡೆಯಬಾರದಿತ್ತು. ನಡೆದು ಹೋಗಿದೆ. ಭವಿಷ್ಯದಲ್ಲಿ ಇಂಥ ಘಟನೆಗಳು ಆಗಬಾರದು ಎಂದರು. ಪ್ರವಾಸೋದ್ಯಮ ದೃಷ್ಟಿಯಿಂದ ಪೆಹಲ್ಗಾಮ್ ನಂಥ ಘಟನೆಗಳು ಆಗಬಾರದು. ಅಮಾಯಕ ಜನರ ಮೇಲೆ ದಾಳಿ ನಡೆಸುವುದು ಸರಿಯಲ್ಲ ಎಂದು ಹೇಳಿದರು. 'ಮೋದಿ ಒಬ್ಬ ಭಯೋತ್ಪಾದಕ' ಎಂಬ ವಿಚಾರದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಪರೋಕ್ಷವಾಗಿ ಮೋದಿಗೆ ನಾನು ಈ ಅರ್ಥದಲ್ಲಿ ಹೇಳಿಲ್ಲ ಎಂದ ಅವರು, ರಾಜ್ಯದಲ್ಲಿ ಸಚಿವ ಸಂಪುಟ ಪುನರ್ ರಚನೆಯ ವಿಚಾರ ಸಿಎಂ ಅವರನ್ನೇ ಕೇಳಬೇಕು ಎಂದು ಹೇಳಿದರು.




# ಸರಕಾರದ ಯೋಜನೆ ಕೆಲ ಪ್ರದೇಶಕ್ಕೆ ಸೀಮಿತ

## ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಸರಕಾರ 'ಅಪಘಾತ ವಿಮೆ' ಯೋಜನೆ ಕಡ್ಡಾಯ

• **ಉದಯವಾಹಿನಿ, ಬೆಳಗಾವಿ**

ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಸರಕಾರ 'ಅಪಘಾತ ವಿಮೆ' ಯೋಜನೆ ಕಡ್ಡಾಯಗೊಳಿಸಿದ್ದರೂ ಸಮರ್ಪಕ ಅನುಷ್ಠಾನವಾಗಿಲ್ಲ. ಅಭಯಾರಣ್ಯ, ಜಲಪಾತ ಸೇರಿದಂತೆ ನಾನಾ ತಾಣಗಳಿಗೆ ಅಪಾರ ಪ್ರವಾಸಿಗರು ಭೇಟಿ ನೀಡುತ್ತಿದ್ದರೂ ಸುರಕ್ಷತೆಗೆ ವಿಮೆ ರಕ್ಷಣೆ ಇಲ್ಲದಿರುವುದು ಪರಿಸರ ಪ್ರವಾಸದ ಪ್ರಯಾಸ ನೀಗಿಲ್ಲ.



ಉದಯವಾಹಿನಿ ಚಿತ್ರ

ಪ್ರವಾಸಿಗರಿಗಿಲ್ಲ ವಿಮೆ ರಕ್ಷಣಾ ಕವಚ

**2023ರಲ್ಲೇ ಆದೇಶ:** ಕೊಡಗು ಜಿಲ್ಲೆಯಲ್ಲಿ ಚಾರಣದ ವೇಳೆ ಪ್ರವಾಸಿಗರು ಸಂಕಷ್ಟಕ್ಕೆ ಸಿಲುಕಿದ ಘಟನೆ, ಚಂದ್ರದ್ರೋಣ ಪರ್ವತ ಶ್ರೇಣಿಯ ಜಲಪಾತದ ಬಳಿ ಬಾಲಕಿ ನಾಪತ್ತೆ ಪ್ರಕರಣವೂ ಸೇರಿದಂತೆ ಕೆಲ ಘಟನೆಗಳು ಪ್ರವಾಸಿಗರ ಸುರಕ್ಷತೆ ಕುರಿತು ಎಚ್ಚರಿಕೆ ಗಂಟೆ ಬಾರಿಸಿದ್ದವು. ಈ ಹಿನ್ನೆಲೆಯಲ್ಲಿಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ವಿಮೆ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೂಚಿಸಿದ್ದರು. ಅದರಂತೆ 2023ರ ಜೂ.19 ರಂದು ಕರ್ನಾಟಕ ಅರಣ್ಯ ಇಲಾಖೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಮೂಲಕ ಎಲ್ಲಾ ಪರಿಸರ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಪ್ರವಾಸಿಗರಿಗೆ ಅಪಘಾತ ವಿಮೆ ಕಡ್ಡಾಯಗೊಳಿಸುವಂತೆ ಸ್ಪಷ್ಟ ಆದೇಶ ಹೊರಡಿಸಲಾಗಿದೆ.

**ಬೆಳಗಾವಿ ಜಿಲ್ಲೆಗಿಲ್ಲ ಆದ್ಯತೆ:** ಈ ಯೋಜನೆ ರಾಜ್ಯದ ಕೆಲವು ಅರಣ್ಯ ವಲಯಗಳಲ್ಲಿ ಮಾತ್ರ ಅನುಷ್ಠಾನಗೊಂಡಿದೆ. ಬಂಡೀಪುರ, ನಾಗರಹೊಳೆ ಸೇರಿದಂತೆ ಕೆಲವು ಪ್ರಮುಖ ತಾಣಗಳಲ್ಲಿ ಮಾತ್ರ ಪ್ರವಾಸಿಗರಿಗೆ ಅಪಘಾತ ವಿಮೆ ವ್ಯವಸ್ಥೆ ಜಾರಿಯಲ್ಲಿದೆ. ರಾಜ್ಯ ಸರಕಾರದ ಜಂಗಲ್ ಲಾಡ್ಜಸ್ ಆ್ಯಂಡ್ ರೆಸಾರ್ಟ್ ತನ್ನ ವ್ಯಾಪ್ತಿಯ ಪರಿಸರ ಪ್ರವಾಸಿ ತಾಣಗಳಲ್ಲಿ ವಿಮೆ ನೀಡುತ್ತಿದೆ. ಆದರೆ, ಬೆಳಗಾವಿ ಜಿಲ್ಲೆಯ ಪ್ರಮುಖ ಪರಿಸರ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಇನ್ನೂ ಈ ಯೋಜನೆ ಜಾರಿಯಾಗಿಲ್ಲ.

**ಪರಿಸರ ಪ್ರವಾಸೋದ್ಯಮಕ್ಕೆ ಹಿನ್ನಡೆ:** ಖಾನಾಪುರ ತಾಲ್ಲೂಕಿನ ಭೀಮಗಡ ಅಭಯಾರಣ್ಯ, ತಿಲಾರಿ, ಜಾಂಬೋಟಿ ಅರಣ್ಯ ಪ್ರದೇಶ ಸೇರಿದಂತೆ ಅನೇಕ ಸ್ಥಳಗಳಿಗೆ ವರ್ಷವಿಡೀ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಜಲಪಾತಗಳು, ಕಾಡು ಮಾರ್ಗಗಳಲ್ಲಿ ಟ್ರೆಕ್ಕಿಂಗ್ ಮಾಡುವಾಗ, ಗುಡ್ಡ ಪ್ರದೇಶಗಳಲ್ಲಿ ಜಾರಿಬೀಳುವುದು, ನೀರಿನಲ್ಲಿ ಮುಳುಗುವುದು, ವನ್ಯಜೀವಿ ಹಾಗೂ ಜೇನುಹುಳುಗಳ ದಾಳಿ ಸೇರಿದಂತೆ ಇತರ ಅಪಾಯಗಳು ಸಾಮಾನ್ಯವಾಗಿದ್ದರೂ ಅಪಘಾತ ಸಂಭವಿಸಿದರೆ ತಕ್ಷಣ ಆರ್ಥಿಕ ನೆರವು ನೀಡುವ ವಿಮೆ ವ್ಯವಸ್ಥೆ ಇಲ್ಲ. ಇದು ಗಡಿ ಜಿಲ್ಲೆಯ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿಗೆ ಹಿನ್ನಡೆಯಾಗಿದೆ.

ಈ ಕುರಿತು ವನ್ಯಜೀವಿ ಸಂರಕ್ಷಣಾವಾದಿಗಳು ಸರಕಾರದ ಗಮನ ಸೆಳೆದಿದ್ದಾರೆ. ಪ್ರವಾಸೋದ್ಯಮ ಬೆಳವಣಿಗೆಗೆ ಸಮಾನವಾಗಿ ಪ್ರವಾಸಿಗರ ಜೀವಭದ್ರತೆ ಖಚಿತಪಡಿಸುವುದು ಸರಕಾರದ ಹೊಣೆ. ಆದ್ದರಿಂದ, ರಾಜ್ಯದ ಎಲ್ಲಾ ಪರಿಸರ ಪ್ರವಾಸೋದ್ಯಮ ತಾಣಗಳಲ್ಲಿ ಕಡ್ಡಾಯ ಅಪಘಾತ ವಿಮೆ ಯೋಜನೆ ತ್ವರಿತವಾಗಿ ಜಾರಿಗೆ ತರಬೇಕು ಎಂದು ಆಗ್ರಹಿಸಿದ್ದಾರೆ.

> ಬೆಳಗಾವಿ ವಿಭಾಗದ ವ್ಯಾಪ್ತಿಯ ಅರಣ್ಯ ಇಲಾಖೆ ನಿರ್ವಹಣೆ ಮಾಡುವ ಪರಿಸರ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರಿಗೆ ಜೀವ ವಿಮೆ ಒದಗಿಸುವಂತೆ ಹಲವು ಬಾರಿ ಮನವಿ ಮಾಡಿದ್ದೇವೆ. ಆದರೆ, ಯಾವ ಕಾರಣಕ್ಕಾಗಿ ಇಷ್ಟೊಂದು ವಿಳಂಬವಾಗುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಇನ್ನಾದರೂ ಆದ್ಯತೆ ಮೇರೆಗೆ ಈ ಕುರಿತು ಕ್ರಮ ಕೈಗೊಳ್ಳಬೇಕು. ಶೀಘ್ರದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಅವರನ್ನು ಭೇಟಿ ಮಾಡಿ ಈ ಕುರಿತು ಮನವಿ ಸಲ್ಲಿಸಲಾಗುವುದು.
>
> -ಗಿರಿಧರ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

> ಬೆಳಗಾವಿ ವಿಭಾಗದಲ್ಲಿ ಪ್ರವಾಸಿಗರಿಗೆ ವಿಮೆ ಸುರಕ್ಷತೆ ಒದಗಿಸುವ ವಿಚಾರ ಚರ್ಚೆ ಹಂತದಲ್ಲಿದೆ. ಈ ಬಗ್ಗೆ ಶೀಘ್ರದಲ್ಲಿ ಅಂತಿಮ ನಿರ್ಧಾರ ಕೈಗೊಂಡು ಸೌಲಭ್ಯ ಕಲ್ಪಿಸಲಾಗುವುದು.
>
> - ಎನ್.ಇ.ಕ್ರಾಂತಿ, ಡಿಸಿಎಫ್, ಬೆಳಗಾವಿ

### ಆಯ್ದ ಪ್ರದೇಶಗಳಿಗೆ ಮಾತ್ರ ಸೀಮಿತ

ಕರ್ನಾಟಕದ ಅರಣ್ಯ ವಲಯಗಳಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಜಾರಿಗೆ ತಂದಿರುವ ಅಪಘಾತ ವಿಮೆ ಯೋಜನೆಯು ಸದ್ಯಕ್ಕೆ ಆಯ್ದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದೆ. ರಾಜ್ಯದ ಪ್ರಮುಖ ಹುಲಿ ಸಂರಕ್ಷಿತ ಪ್ರದೇಶಗಳಾದ ಬಂಡೀಪುರ ಮತ್ತು ನಾಗರಹೊಳೆಗಳಲ್ಲಿ ಈ ವಿಮಾ ಸೌಲಭ್ಯ ಯಶಸ್ವಿಯಾಗಿ ಜಾರಿಯಲ್ಲಿದೆ. ಈ ಯೋಜನೆ ರಾಜ್ಯಾದ್ಯಂತ ಏಕರೂಪವಾಗಿ ಅನುಷ್ಠಾನಗೊಂಡಿಲ್ಲ ಎಂಬುದು ಗಮನಾರ್ಹ. ಉತ್ತರ ಕರ್ನಾಟಕದ ಭಾಗಗಳಲ್ಲಿ, ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಪರಿಸರ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಇನ್ನೂ ಈ ಯೋಜನೆ ಕುಂಟುತ್ತಾ ಸಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ನಿಕಟ ಸಂಬಂಧಿಗಳ ಮನೆಗೆ ಹೋಗುವುದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದು. ಸಂಬಂಧಿಗಳು, ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ. ಪ್ರೀತಿಯಲ್ಲಿ ಒಂದು ಅವಸರದ ಹೆಜ್ಜೆಯನ್ನು ತಪ್ಪಿಸಿ.

**ವೃಷಭ** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ಇಂದು, ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು.

**ಮಿಥುನ** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ.

**ಕರ್ಕಾಟಕ** ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ಊಹೆಗಳು ಲಾಭ ತರುತ್ತವೆ. ನಿಮ್ಮ ಸ್ನೇಹಿತರು, ಸಂಬಂಧಿಗಳ ಮೇಲೆ ನಿಮ್ಮ ಅಭಿಪ್ರಾಯ ಹೇರುವುದು ಅವರನ್ನು ಅನಗತ್ಯವಾಗಿ ಸಿಟ್ಟಾಗಿಸಬಹುದಾದ್ದರಿಂದ ಅವರಿಗೆ ಒತ್ತಾಯ ಮಾಡಬೇಡಿ.

**ಸಿಂಹ** ಒಂದು ಲಾಭಕರ ದಿನ, ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ಇಂದು ನೀವು ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಬಹುದು ಆದರೆ ಇದರ ಹೊರತಾಗಿಯೂ ನಿಮ್ಮ ಆರ್ಥಿಕ ಭಾಗವು ಬಲವಾಗಿರುತ್ತದೆ ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.

**ಕನ್ಯಾ** ಮಾನಸಿಕ ಸ್ಪಷ್ಟತೆಯನ್ನು ನಿರ್ವಹಿಸಲು ಗೊಂದಲ ಮತ್ತು ಹತಾಶೆಯನ್ನು ತಪ್ಪಿಸಿ ಸಮಯ ಮತ್ತು ಹಣದ ಕಾತರ ನೀವು ಮಾಡಬೇಕು ಇಲ್ಲದಿದ್ದರೆ ಮುಂಬರುವ ಸಮಯ ತೊಂದರೆಗಳಿಂದ ತುಂಬಿರಬಹುದು ಇಂದು ನೀವು ಸಲಹೆ ಕೊಟ್ಟರೆ ಅದನ್ನು ಸ್ವೀಕರಿಸಲೂ ಸಿದ್ಧವಾಗಿರಿ.

**ತುಲಾ** ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ–ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ನೀವು ನಿಮ್ಮ ಹೂಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಉಳಿತಾಯ ಮಾಡಿದರೆ ಹಣ ಮಾಡುತ್ತೀರಿ. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ.

**ವೃಶ್ಚಿಕ** ವಿಧಿಯನ್ನು ಆಧರಿಸದಿರಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದ್ದು ಇದು ಎಂದಿಗೂ ತಾನಾಗಿಯೇ ನಿಮ್ಮ ಬಳಿ ಬರುವುದಿಲ್ಲ. ನಿಮ್ಮ ತೂಕವನ್ನು ನಿಯಂತ್ರಿಸಲು, ನಿಮ್ಮ ಆರೋಗ್ಯವನ್ನು ಪುನಃ ಪಡೆಯಲು ವ್ಯಾಯಾಮ ಮಾಡಲು ಇದು ಒಳ್ಳೆಯ ಸಮಯ.

**ಧನಸ್ಸು** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ರಿಯಲ್ ಎಸ್ಟೇಟ್ ಮತ್ತು ಆರ್ಥಿಕ ವ್ಯವಹಾರಗಳಿಗೆ ಒಳ್ಳೆಯ ದಿನ. ಸ್ನೇಹಿತರು ಇಂದು ರಾತ್ರಿ ರೋಮಾಂಚಕವಾದದ್ದನ್ನೇನಾದರೂ ಯೋಜಿಸಿ ನಿಮಗೆ ಆನಂದ ತರುತ್ತಾರೆ.

**ಮಕರ** ಇಂದು ನೀವು ಹಲವಾರು ಒತ್ತಡಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು ಹಾಗೂ ಇದು ನಿಮಗೆ ಕಿರಿಕಿರಿ ಹಾಗೂ ಆತಂಕದ ಭಾವನೆಗಳನ್ನು ಉಂಟುಮಾಡಬಹುದು. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ಮತ್ತು ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ.

**ಕುಂಭ** ಹೊರಾಂಗಣ ಚಟುವಟಿಕೆಗಳು ನಿಮಗೆ ಉಪಯುಕ್ತವಾಗುತ್ತವೆ. ಕೋಟೆಯೊಳಗಿನ ಜೀವನ ಶೈಲಿ ಮತ್ತು ಯಾವಾಗಲೂ ಭದ್ರತೆಯ ಬಗ್ಗೆ ಯೋಚಿಸುವುದು ನಿಮ್ಮ ದೈಹಿಕ ಹಾಗೂ ನಿಮ್ಮ ಮಾನಸಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ. ಇದು ನಿಮ್ಮನ್ನು ಒಬ್ಬ ಗಾಬರಿಯ ವ್ಯಕ್ತಿಯನ್ನಾಗಿಯೂ ಮಾಡುತ್ತದೆ.

**ಮೀನ** ಸ್ನೇಹಿತರ ಶೀತಲ ವರ್ತನೆ ನಿಮ್ಮ ಮನಸ್ಸಿಗೆ ನೋವು ತರುತ್ತದೆ. ಆದರೆ ಶಾಂತವಾಗಿರಲು ಪ್ರಯತ್ನಿಸಿ. ನಿಮಗೆ ಇದು ಹಿಂದೆ ನೀಡುವ ಬದಲಿಗೆ ದುಃಖವನ್ನು ತಡೆಗಟ್ಟಲು ಪ್ರಯತ್ನಿಸಿ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ.

# ನಾಲೆಯ ನೀರು ಕಲುಷಿತ ತಡೆಗೆ ಕ್ರಮ

**ಸಾಮಾಜಿಕ ಕಾರ್ಯಕರ್ತ ಚಂದ್ರಶೇಖರ್, ದ್ಯಾವಣ್ಣ ಅಚ್ಚಳಿ ಅವರ ಮನವಿಗೆ ಸಿಎಂ ಕಚೇರಿಯ ವಿಶೇಷ ಕರ್ತವ್ಯ ಅಧಿಕಾರಿ ಡಾಕ್ಟರ್ ಕೆ ವೈಷ್ಣವಿ ಸ್ಪಂದನೆ.**

• ಉದಯವಾಹಿನಿ ಕಾರಟಗಿ



ಮರ್ಲಾನಹಳ್ಳಿ ಗ್ರಾ.ಪಂ ವ್ಯಾಪ್ತಿಯಲ್ಲಿ ಹರಿಯುವ ತುಂಗಭದ್ರಾ ಎಡದಂಡೆ ನಾಲೆಯ ವಿತರಣಾ ಕಾಲುವೆಗೆ ಮಲಿನ ನೀರು ಮತ್ತು ಶೌಚಾಲಯದ ನೀರು ಸೇರುತ್ತಿರುವುದನ್ನು ತಡೆಗಟ್ಟುವಂತೆ ಕೋರಿ ಸಲ್ಲಿಸಿದ್ದ ದೂರಿಗೆ ಮುಖ್ಯಮಂತ್ರಿಗಳ ಕಚೇರಿ ಸಕಾರಾತ್ಮಕವಾಗಿ ಸ್ಪಂದಿಸಿದೆ.

ತುಂಗಭದ್ರಾ ಎಡದಂಡೆ ನಾಲೆಯ 31ನೇ ವಿತರಣಾ ಕಾಲುವೆಯ (31/3/2) ಉಪ ಕಾಲುವೆಗೆ ಗ್ರಾಮದ ಕೆಲವು ಭಾಗಗಳಿಂದ ಮಲಿನ ನೀರು ನೇರವಾಗಿ ಸೇರುತ್ತಿತ್ತು. ಇದು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ ಗ್ರಾಮದ ಮುಖಂಡರಾದ ಚಂದ್ರಶೇಖರ್, ಯರಡೋಣ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ದ್ಯಾವಣ್ಣ ಅಚ್ಚಳಿ ಅವರು


ಉದಯವಾಹಿನಿ ಚಿತ್ರ

ಮುಖ್ಯಮಂತ್ರಿಗಳ ಆಪ್ತ ವಲಯದ ವಿಶೇಷ ಕರ್ತವ್ಯಾಧಿಕಾರಿ ಶ್ರೀಮತಿ ಡಾ. ಕೆ. ವೈಷ್ಣವಿ, ಕೆ.ಎಂ.ಎ.ಎಸ್ ಇವರಿಗೆ ದೂರು ಸಲ್ಲಿಸಿ, ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದರು.

ಈ ದೂರಿನನ್ವಯ ಮುಖ್ಯಮಂತ್ರಿಗಳ ಕಚೇರಿಯಿಂದ ಸೂಚನೆ ಬಂದ ತಕ್ಷಣ ಎಚ್ಚೆತ್ತ ಮರ್ಲಾನಹಳ್ಳಿ ಗ್ರಾಮ ಪಂಚಾಯತ್ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ನಾಲೆಯ ನೀರನ್ನು ಕಲುಷಿತಗೊಳಿಸುತ್ತಿದ್ದ ಸ್ಥಳಗಳನ್ನು ಗುರುತಿಸಿ, ಸಂಬಂಧಪಟ್ಟ ವ್ಯಕ್ತಿಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ ಕೂಡಲೇ ಸ್ವಂತ ಇಂಗು ಗುಂಡಿಗಳನ್ನು ನಿರ್ಮಿಸಿಕೊಳ್ಳಲು ಸೂಚನೆ ನೀಡಲಾಗಿದ್ದು, ಈ ಕುರಿತು ಜಿಪಿಎಸ್ ಆಧಾರಿತ ಫೋಟೋಗಳೊಂದಿಗೆ ಸರ್ಕಾರಕ್ಕೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ವರದಿ ಸಲ್ಲಿಸಿದ್ದಾರೆ.

ಈ ಕುರಿತು ಮಾತನಾಡಿದ ಚಂದ್ರಶೇಖರ್, ದ್ಯಾವಣ್ಣ ಅಚ್ಚಳಿ ಅವರು, ನಾಲೆಯ ನೀರು ಲಕ್ಷಾಂತರ ಜನರ ಜೀವನಾಡಿ. ಅದಕ್ಕೆ ಕೊಳಚೆ ನೀರು ಸೇರುವುದು ಅಪಾಯಕಾರಿ. ಈ ಬಗ್ಗೆ ನಾವು ಪಟ್ಟುಬಿಡದೆ ಮಾಡಿದ ಮನವಿಗೆ ಸರ್ಕಾರ ಮತ್ತು ಸ್ಥಳೀಯ ಆಡಳಿತ ಸ್ಪಂದಿಸಿರುವುದು ಸಂತೋಷ ತಂದಿದೆ ಎಂದು ತಿಳಿಸಿದ್ದಾರೆ. ಈ ಹೋರಾಟದಲ್ಲಿ ಅನಿಲ್ ಕುಮಾರ್ ಭೋವಿ, ಗ್ರಾಮದ ಹಿರಿಯರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಸಾರ್ವಜನಿಕ ಹಿತಾಸಕ್ತಿಯ ಈ ಸಾಮಾಜಿಕ ಕೆಲಸಕ್ಕೆ ಸಾರ್ವಜನಿಕರಿಂದ ಪ್ರಶಂಸೆ ವ್ಯಕ್ತವಾಗಿದೆ,

**ಟೆರರಿಸ್ಟ್‌ಗೂ ಟೆರರ್ ಟು ಟೆರರಿಸ್ಟ್‌ಗೂ ವ್ಯತ್ಯಾಸ ಅರಿಯುವಲ್ಲಿ ಮಲ್ಲಿಕಾರ್ಜುನ ಖರ್ಗೆ ವಿಫಲ**

# ಖರ್ಗೆ ಅವರಿಗೆ ಸಿಪಿ ರಾಧಾಕೃಷ್ಣನ್ ತಿರುಗೇಟು

• ಉದಯವಾಹಿನಿ, ಬೀದರ್

ಪ್ರಧಾನಮಂತ್ರಿ, ನರೇಂದ್ರ ಮೋದಿ ಟೆರರಿಸ್ಟ್ ಎಂಬ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ದೇಶಾದ್ಯಂತ ಭಾರೀ ಆಕ್ರೋಶಕ್ಕೆ ಗುರಿಯಾಗಿದೆ. ಬಿಜೆಪಿ ಮಾತ್ರವಲ್ಲದೇ ಸಾಮಾನ್ಯ ಜನ ಕೂಡ ದೇಶದ ಪ್ರಧಾನಿ ಅವರನ್ನು ಭಯೋತ್ಪಾದಕ ಎಂದು ಕರೆದಿರುವುದನ್ನು ಟೀಕಿಸಿದ್ದಾರೆ. ಎಐಸಿಸಿ ಅಧ್ಯಕ್ಷರ ಸ್ಪಷ್ಟನೆ ಬಳಿಕವೂ ಈ ವಿವಾಧ ಇನ್ನೂ ತಣ್ಣಗಾಗಿಲ್ಲ.

ಈ ಮಧ್ಯೆ ಬೀದರ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ, ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್ ಅವರು ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಇದೇ ವಿಚಾರವಾಗಿ ಟೀಕಿಸಿದ ಘಟನೆ ನಡೆದಿದೆ. ಇಬ್ಬರೂ ನಾಯಕರು ಬೀದರ್‌ನಲ್ಲಿ ನಡೆದ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ ವಚನ ಜಾತ್ರೆ– 2026, ಪೂಜ್ಯ ಶ್ರೀ ಡಾ. ಚನ್ನಬಸವ ಪಟ್ಟದ್ದೇವರ 27ನೆಯ ಸ್ಮರಣೋತ್ಸವ, ನಾಡೋಜ ಪೂಜ್ಯ ಶ್ರೀ ಮ.ಘ.ಚ ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

- ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಟೆರರಿಸ್ಟ್ ಎಂದು ಕರೆದಿದ್ದ ಮಲ್ಲಿಕಾರ್ಜುನ ಖರ್ಗೆ.
- ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಪ್ಪು–ಬಿಳುಪಿನ ನಡುವೆ ವ್ಯತ್ಯಾಸ ಗೊತ್ತಾಗಲ್ಲ ಎಂದ ಉಪರಾಷ್ಟ್ರಪತಿ.

ಈ ವೇಳೆ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್, ತಾವು ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಒಂದು ನಿರ್ದಿಷ್ಟ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿರುವುದಾಗಿ ಹೇಳಿದರು. ಕೆಲವೊಮ್ಮೆ ಮಲ್ಲಿಕಾರ್ಜುನ ಖರ್ಗೆ ಅವರು ಕಪ್ಪು ಮತ್ತು ಬಿಳುಪಿನ ನಡುವೆ ವ್ಯತ್ಯಾಸವನ್ನು ಗುರುತಿಸುವಲ್ಲಿ ವಿಫಲರಾಗುತ್ತಾರೆ. ಹಾಗೆಯೇ ಅವರು ಭಯೋತ್ಪಾದಕರು ಮತ್ತು ಭಯೋತ್ಪಾದಕರಲ್ಲಿ ನಡುಕ ಹುಟ್ಟಿಸಿರುವವರ ನಡುವಿನ ವ್ಯತ್ಯಾಸವನ್ನು ಗುರುತಿಸುವಲ್ಲಿಯೂ ವಿಫಲರಾಗಿದ್ದಾರೆ ಎಂದು ಉಪರಾಷ್ಟ್ರಪತಿಗಳು ಸೂಚ್ಯವಾಗಿ ಹೇಳಿದರು. ಪ್ರಧಾನಿ ಮೋದಿ ಅವರನ್ನು ಪರೋಕ್ಷವಾಗಿ ಟೆರರ್ ಟು ಟೆರರಿಸ್ಟ್ ಎಂದು ಕರೆದಿರುವ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್, ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ಪರೋಕ್ಷವಾಗಿ ತಿರುಗೇಟು ನೀಡಿದ್ದಾರೆ.

**ಬಿಜೆಪಿ ವಿರೋಧ:** ಇನ್ನು ನಿರೀಕ್ಷೆಯಂತೆಯೇ ಪ್ರಧಾನಿ ಮೋದಿ ಅವರನ್ನು ಟೆರರಿಸ್ಟ್ ಎಂದು ಕರೆದ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ವಿರುದ್ಧ, ಬಿಜೆಪಿ ನಾಯಕರು ಕೆಂಡಾಮಂಡಲರಾಗಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಗುಡುಗಿರುವ ಪ್ರಹ್ಲಾದ್ ಜೋಶಿ, ಪಂಚರಾಜ್ಯ ವಿಧಾನಸಭೆ ಚುನಾವಣೆಗಳ ಫಲಿತಾಂಶ ಬರುವ ಮೊದಲೇ ಕಾಂಗ್ರೆಸ್ ನಾಯಕರು ಹತಾಶೆ ತೋರ್ಪಡಿಸಲಾರಂಭಿಸಿದ್ದಾರೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅದೇ ರೀತಿ ಎಐಸಿಸಿ ಅಧ್ಯಕ್ಷರ ಹೇಳಿಕೆಯನ್ನು ಖಂಡಿಸಿರುವ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಅತ್ಯಂತ ನಾಚಿಕೆಗೇಡಿತನದ್ದು. ಪ್ರಧಾನಿಯವರ ವಿರುದ್ಧ ಇಂತಹ ಪದಗಳನ್ನು ಬಳಸುವುದು, 140 ಕೋಟಿ ಭಾರತೀಯರ ಬುದ್ಧಿವಂತಿಕೆಗೆ ಮಾಡಿದ ಅವಮಾನ ಎಂದು ಹರಿಹಾಯ್ದಿದ್ದಾರೆ.



ಉದಯವಾಹಿನಿ ಚಿತ್ರ

**ಖರ್ಗೆ ಸ್ಪಷ್ಟನೆ**

ಚೆನ್ನೈನಲ್ಲಿ ಪ್ರಧಾನಿ ಮೋದಿ ಕುರಿತು ತಾವು ನೀಡಿದ ಹೇಳಿಕೆ ವಿವಾದ ಸೃಷ್ಟಿಸಿರುವುದನ್ನು ಅರಿತ ಮಲ್ಲಿಕಾರ್ಜುನ ಖರ್ಗೆ, ಕಲಬುರಗಿಯಲ್ಲಿ ಈ ಕುರಿತು ಸ್ಪಷ್ಟನೆ ನೀಡಿದ್ದರು. ನಾನು ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆದಿಲ್ಲ. ಬದಲಿಗೆ, ವಿಪಕ್ಷ ನಾಯಕರು ಮತ್ತು ಅಭ್ಯರ್ಥಿಗಳ ಮನೆ ಮೇಲೆ ಇಡಿ, ಐಟಿ ದಾಳಿ ನಡೆಸುವ ಮೂಲಕ ಅವರ ಆಡಳಿತವು ಸೃಷ್ಟಿಸುತ್ತಿರುವ ಆತಂಕವನ್ನು ಭಯೋತ್ಪಾದನೆ ಎಂದು ಕರೆದಿದ್ದೇನೆ ಎಂದು ಎಐಸಿಸಿ ಅಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ.

**ಕೆಂಗಣ್ಣಿಗೂ ಗುರಿ**

ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರನ್ನು ಟೆರರಿಸ್ಟ್ ಎಂದು ಕರೆದು ವಿವಾದ ಸೃಷ್ಟಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿ ನಾಯಕರಿಂದ ತೀವ್ರ ಟೀಕೆ ಎದುರಿಸುತ್ತಿದ್ದಾರೆ. ಇದೀಗ ಹಿರಿಯ ಕಾಂಗ್ರೆಸ್ ನಾಯಕ ಉಪರಾಷ್ಟ್ರಪತಿ ಸಿಪಿ ರಾಧಾಕೃಷ್ಣನ್ ಅವರ ಕೆಂಗಣ್ಣಿಗೂ ಗುರಿಯಾಗಿದ್ದಾರೆ. ಬೀದರ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ ಉಪರಾಷ್ಟ್ರಪತಿಗಳು ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂಬ ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಎಐಸಿಸಿ ಅಧ್ಯಕ್ಷರಿಗೆ ಕಪ್ಪು–ಬಿಳುಪಿನ ನಡುವೆ ವ್ಯತ್ಯಾಸ ಗೊತ್ತಿಲ್ಲ ಎಂಬ ಸಿಪಿ ರಾಧಾಕೃಷ್ಣನ್ ಹೇಳಿಕೆ ಇದೀಗ ಸದ್ದು ಮಾಡುತ್ತಿದೆ.

## ನೈಟಿ, ಗೌನ್ ಹಾಕುತ್ತಿದ್ದ ಪತ್ನಿಗೆ ಬೆಂಕಿಯಿಟ್ಟ ಪತಿ

• ಉದಯವಾಹಿನಿ, ಬೆಳಗಾವಿ

ಪತ್ನಿ ತೊಟ್ಟ ಬಟ್ಟೆ ಬಗ್ಗೆ ಜಗಳ ನಡೆದು ಕೊನೆಗೆ ಆಕೆಗೆ ಬೆಂಕಿ ಹಚ್ಚಿದ ಪಾಪಿ ಪತಿರಾಯ ಪರಾರಿಯಾಗಿರುವ ಘಟನೆ ಜಿಲ್ಲೆಯ ಖಾನಾಪೂರ ನಂದಗಡದಲ್ಲಿ ನಡೆದಿದೆ. ಕೃಷ್ಣಾಜಿ ಪಾಟೀಲ್ ಪತ್ನಿಗೆ ಬೆಂಕಿ ಹಚ್ಚಿದ ಆರೋಪಿಯಾಗಿದ್ದು, ಘಟನೆಯಲ್ಲಿ ಪತ್ನಿ ಮಂಜುಳಾ ಪಾಟೀಲ್‌ಗೆ ಗಂಭೀರ ಸುಟ್ಟ ಗಾಯಗಳಾಗಿದ್ದು, ತಕ್ಷಣ ಅಕ್ಕಪಕ್ಕದವರು ದಾವಿಸಿ ಬೆಂಕಿ ನಂದಿಸಿ ಆಕೆಯನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದರು.

ಶೇ.80ರಷ್ಟು ಸುಟ್ಟ ಗಾಯಗಳಾಗಿದ್ದು, ಪರಿಸ್ಥಿತಿ ಚಿಂತಾಜನಕವಾಗಿದೆ. ಈ ಹಿನ್ನೆಲೆಯಲ್ಲಿ ಕುಟುಂಬಸ್ಥರು ಹೆಚ್ಚಿನ ಚಿಕಿತ್ಸೆಗಾಗಿ ಬಿಮ್ಸ್ ಆಸ್ಪತ್ರೆಯಿಂದ ಗೋವಾಗೆ ಶಿಟ್ ಮಾಡಿದ್ದಾರೆ.

ಮಂಜುಳಾ ಹಾಗೂ ಕೃಷ್ಣಾಜಿ ಕಳೆದ ಎಂಟು ವರ್ಷಗಳ ಹಿಂದೆ ಮದುವೆಯಾಗಿದ್ದರು. ಮನೆಯಲ್ಲಿ ಹೆಂಡತಿ ಸೀರೆ ಬದಲು ನೈಟಿ, ಗೌನ್ ಹಾಕುತ್ತಿರುವ ವಿಚಾರಕ್ಕೆ ಇಬ್ಬರ ನಡುವೆ ಆಗಾಗ ಗಲಾಟೆಯಾಗುತ್ತಿತ್ತು ವಾಗ್ವಾದ ಅತೀರೇಕಕ್ಕೆ ಹೋಗಿ ಪತ್ನಿಗೆ ಬೆಂಕಿ ಹಚ್ಚಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಗಲಾಟೆ ಶಬ್ಧ ಕೇಳಿ ಸ್ಥಳೀಯರು ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಶೀಲನೆ ನಡೆಸಿ ನಂತರ ಆರೋಪಿಯನ್ನು ಬಂಧಿಸಿದ್ದಾರೆ. ನಂದಗಢ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತೆರಿಗೆ ಸಂಗ್ರಹಣೆಯಲ್ಲಿ ನಿರ್ಲಕ್ಷ್ಯ: ಶಾಸಕ ಗರಂ

• ಉದಯವಾಹಿನಿ, ಹಾವೇರಿ

ಇಲ್ಲಿಯ ನಗರಸಭೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ತೆರಿಗೆ ಸಂಗ್ರಹದಲ್ಲಿ ನಿರ್ಲಕ್ಷ್ಯ ತೋರುತ್ತಿದ್ದು, ಇದರ ವಿರುದ್ಧ ಶಾಸಕ ರುದ್ರಪ್ಪ ಲಮಾಣಿ ಅವರು ಗರಂ ಆದರು. ನಗರದಲ್ಲಿರುವ ನಗರಸಭೆಯ ಕಚೇರಿಯಲ್ಲಿ ಮಂಗಳವಾರ ಸಭೆ ನಡೆಸಿದ ಅವರು, ಪ್ರಗತಿ ಪರಿಶೀಲನೆ ನಡೆಸಿದರು. ತೆರಿಗೆ ಸಂಗ್ರಹಣೆಯ ಗುರಿ ತಲುಪದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಏಪ್ರಿಲ್ ತಿಂಗಳೊಳಗೆ ಸಂಗ್ರಹವಾಗಬೇಕಿದ್ದ ತೆರಿಗೆ ಸಂಗ್ರಹ, ತೀರಾ ಕಡಿಮೆಯಾಗಿದೆ. ಇದಕ್ಕೆ ಕಾರಣವೇನು? ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ? ಎಂದು ಪ್ರಶ್ನಿಸಿದರು. ನಗರಸಭೆ ಕಾರ್ಯವೈಖರಿಯನ್ನು ಸುಧಾರಿಸಿಕೊಳ್ಳಬೇಕು. ಸಾರ್ವಜನಿಕ ವಿರೋಧಿ ನೀತಿಯನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕೆಲಸ ಮಾಡಬೇಕು. ಇಲ್ಲದಿದ್ದರೆ, ನಗರಸಭೆ ಬಿಟ್ಟು ಹೋಗಬಹುದು ಎಂದು ಎಚ್ಚರಿಕೆ ನೀಡಿದರು. ಹಾವೇರಿ ನಗರದಲ್ಲಿ ಜನರ ಸಹಕಾರದೊಂದಿಗೆ ಕೆಲಸ ಮಾಡಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ನಗರವನ್ನು ಮಾದರಿಯನ್ನಾಗಿ ಮಾಡಲು ನಾನು ಸಿದ್ದನಿದ್ದೇನೆ. ಅದಕ್ಕೆ ಪೂರಕವಾಗಿ ಅಧಿಕಾರಿಗಳು ಶ್ರಮವಹಿಸಿ ಕೆಲಸ ಮಾಡಬೇಕು. ಅಂದಾಗ ಮಾತ್ರ ಹಾವೇರಿ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದರು.

# ಧಾರವಾಡದ ಆಕಾಶವಾಣಿ ಕಚೇರಿ ಬೆಂಗಳೂರಿಗೆ ಸ್ಥಳಾಂತರ ಇಲ್ಲ

• ಉದಯವಾಹಿನಿ, ಧಾರವಾಡ

ಧಾರವಾಡದ ಆಕಾಶವಾಣಿ ಪ್ರಾದೇಶಿಕ ಕಚೇರಿಯನ್ನು ಬೆಂಗಳೂರಿಗೆ ಸ್ಥಳಾಂತರಿಸಿದ್ದ ತನ್ನ ವಿವಾದಾತ್ಮಕ ಆದೇಶವನ್ನು ಪ್ರಸಾರ ಭಾರತಿ ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿದೆ. ಈ ಮೂಲಕ ಉತ್ತರ ಕರ್ನಾಟಕದ ಧ್ವನಿಯಾಗಿರುವ ಧಾರವಾಡ ಆಕಾಶವಾಣಿ ಕೇಂದ್ರದ ಸುದ್ದಿ ವಿಭಾಗದ ಅಸ್ತಿತ್ವ ಉಳಿದುಕೊಂಡಿದೆ. ಈ ಕುರಿತು ಏಪ್ರಿಲ್ 22 ರಂದು ಅಧಿಕೃತ ಆದೇಶ ಹೊರಬಿದ್ದಿದೆ.ಈ ಹಿಂದೆ, ಏಪ್ರಿಲ್ 17 ರಂದು ಆದೇಶವೊಂದನ್ನು ಹೊರಡಿಸಿದ್ದ ಪ್ರಸಾರ ಭಾರತಿಯು, ಧಾರವಾಡ ಕಚೇರಿಯ ಕೆಲಸದೊತ್ತಡವನ್ನು ತಾತ್ಕಾಲಿಕವಾಗಿ ಬೆಂಗಳೂರಿನ ಪ್ರಾದೇಶಿಕ ಕಚೇರಿಯ ಸ್ಥಳಾಂತರಿಸಲು ಸೂಚಿಸಿತ್ತು.

**ಉತ್ತರ ಕರ್ನಾಟಕ ಜನತೆಗೆ ನೆಮ್ಮದಿ ತಂದ ನಿರ್ಧಾರ:** ಉತ್ತರ ಕರ್ನಾಟಕದ ಆಗುಹೋಗುಗಳನ್ನು, ಕೃಷಿ, ರಾಜಕೀಯ, ಸಾಂಸ್ಕೃತಿಕ ಸುದ್ದಿಗಳನ್ನು ಸ್ಥಳೀಯ ಸೊಗಡಿನಲ್ಲಿಯೇ ಬಿತ್ತರಿಸುವಲ್ಲಿ ಧಾರವಾಡ ಆಕಾಶವಾಣಿ ಕೇಂದ್ರ ಪ್ರಮುಖ ಪಾತ್ರ ವಹಿಸುತ್ತಿದೆ. ಇದರ ಸುದ್ದಿ ಘಟಕವನ್ನು ಬೆಂಗಳೂರಿಗೆ ಸ್ಥಳಾಂತರಿಸುವ ನಿರ್ಧಾರವು ಸಹಜವಾಗಿಯೇ ಆ ಭಾಗದ ಕೇಳುಗರಲ್ಲಿ ಹಾಗೂ ಸಿಬ್ಬಂದಿಯಲ್ಲಿ ಆತಂಕ ಮೂಡಿಸಿತ್ತು. ಇದೀಗ ಕೇಂದ್ರ ಕಚೇರಿಯೇ ತನ್ನ ಆದೇಶವನ್ನು ರದ್ದುಗೊಳಿಸಿರುವುದರಿಂದ ಧಾರವಾಡದಿಂದಲೇ ಯಥಾವತ್ತಾಗಿ ಸುದ್ದಿ ಪ್ರಸಾರ ಕಾರ್ಯ ಮುಂದುವರೆಯಲಿದೆ. ಈ ಹೊಸ ಆದೇಶದ ಪ್ರತಿಯನ್ನು ಧಾರವಾಡ ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳ ಮುಖ್ಯಸ್ಥರಿಗೆ ಹಾಗೂ ಪ್ರಸಾರ ಭಾರತಿಯ ಉನ್ನತ ಅಧಿಕಾರಿಗಳಿಗೆ ರವಾನಿಸಲಾಗಿದೆ.



ಉದಯವಾಹಿನಿ ಚಿತ್ರ

**ಆದೇಶ ಹಿಂಪಡೆದ ಪ್ರಸಾರ ಭಾರತಿ**

**ಪ್ರಹ್ಲಾದ್ ಜೋಶಿ ಟ್ವೀಟ್ ಮಾಡಿ ಸಂತಸ:** ಈ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ನಮ್ಮ ಧಾರವಾಡ ಆಕಾಶವಾಣಿ ಪ್ರಾದೇಶಿಕ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಲು ಪ್ರಸಾರ ಭಾರತಿ ಸಕ್ಷಮ ಪ್ರಾಧಿಕಾರವು ನಿರ್ಧಾರ ಕೈಗೊಂಡಿದ್ದನ್ನು ಕುರಿತು ಉತ್ತರ ಕರ್ನಾಟಕದ ಜನರಿಂದ ವಿರೋಧ ವ್ಯಕ್ತವಾಗಿತ್ತು. ಈ ಕುರಿತು ನಾನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವರಾದ ಅಶ್ವಿನಿ ವೈಷ್ಣವ್ ಅವರನ್ನು ಸಂಪರ್ಕಿಸಿ ಅವರಿಗೆ ಧಾರವಾಡ ಪ್ರಸಾರ ಭಾರತೀಯ ಕೇಂದ್ರದ ಕಾರ್ಯವ್ಯಾಪ್ತಿ ಮತ್ತು ಅದನ್ನು ಧಾರವಾಡದಲ್ಲಿಯೇ ಮುಂದುವರಿಸುವ ಅವಶ್ಯಕತೆಯನ್ನು ತಿಳಿಸಿದ್ದೆನು. ನನ್ನ ಮನವಿಗೆ ಸ್ಪಂದಿಸಿದ ಕೇಂದ್ರ ಸಚಿವರು ಧಾರವಾಡ ಆಕಾಶವಾಣಿ ಪ್ರಾದೇಶಿಕ ಕೇಂದ್ರವನ್ನು ಧಾರವಾಡದಲ್ಲಿಯೇ ಮುಂದುವರಿಯಲು ಆದೇಶಿಸಿದ್ದು ಪ್ರಧಾನ ಮಂತ್ರಿ, ನರೇಂದ್ರ ಮೋದಿ ಹಾಗೂ ಅಶ್ವಿನಿ ವೈಷ್ಣವ್ ಅವರಿಗೆ ಸಮಸ್ತ ಉತ್ತರ ಕರ್ನಾಟಕದ ಜನತೆಯ ಪರವಾಗಿ ಧನ್ಯವಾದಗಳು. ನಮ್ಮ ಉತ್ತರ ಕರ್ನಾಟಕದ ಜನಪ್ರಿಯ ಆಕಾಶವಾಣಿ ಪ್ರಾದೇಶಿಕ ಕೇಂದ್ರ, ನಮ್ಮ ಧಾರವಾಡದಲ್ಲಿಯೇ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ.

## ಅಕಾಲಿಕ ಮಳೆಯಿಂದ ಅಪಾರ ಹಾನಿ

• ಉದಯವಾಹಿನಿ, ರಾಣೆಬೆನ್ನೂರು

ತಾಲ್ಲೂಕಿನಾದ್ಯಂತ ಸಂಜೆ ಗುಡುಗು, ಸಿಡಿಲು ಸಹಿತ ಜೋರು ಮಳೆಯಾಗಿದೆ. ಇದರಿಂದಾಗಿ ಹಲವು ಕಡೆಗಳಲ್ಲಿ ಅಪಾರ ಹಾನಿ ಸಂಭವಿಸಿದೆ. ಆಲಿಕಲ್ಲು ಸಹಿತ ಮಳೆಯಿಂದಾಗಿ ಕೃಷಿ ಉತ್ಪನ್ನಗಳಿಗೂ ಹಾನಿಯಾಗಿ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನಗರದಲ್ಲಿ ಚರಂಡಿ ಹಾಗೂ ಮಳೆ ನೀರು ಅಂಗಡಿಗಳಿಗೆ ನುಗ್ಗಿ ಅಪಾರ ಹಾನಿ ಸಂಭವಿಸಿದೆ.

ನಗರದ ಎಂ.ಜಿ.ರಸ್ತೆ, ದರ್ಗಾ ವೃತ್ತ, ತರಕಾರಿ ಮಾರುಕಟ್ಟೆ, ನೆಹರು ಮಾರುಕಟ್ಟೆ, ಟಾಂಗಾಕೂಟ ಹಾಗೂ ದೇವರಗುಡ್ಡ ಬಸ್ ನಿಲ್ದಾಣ ರಸ್ತೆ ಸಂಪೂರ್ಣ ಜಲಾವೃತಗೊಂಡಿವೆ. ಮಳೆ ರಭಸಕ್ಕೆ ಚರಂಡಿ ನೀರು ಸುತ್ತಮುತ್ತಲಿನ ಅಂಗಡಿಗಳಿಗೆ ನುಗ್ಗಿತು. ಕೆಲ ಹೊತ್ತು ವಿದ್ಯುತ್ ಸಂಪರ್ಕ ಸ್ಥಗಿತಗೊಂಡ ಕಾರಣ ವ್ಯಾಪಾರಸ್ಥರು ಮತ್ತು ಗ್ರಾಹಕರು ಪರದಾಡಿದರು.

ಚರಂಡಿ ಸರಿಯಾಗಿ ನಿರ್ಮಿಸದ ಕಾರಣ ಮಳೆ ನೀರು ರಸ್ತೆ ಮೇಲೆ ಹರಿದು ಅಂಗಡಿಗಳಿಗೆ ನುಗ್ಗಿ ಹಾನಿ ಉಂಟಾಗುತ್ತದೆ. ಮಳೆ ನೀರು ಹೊರ ಹಾಕುವುದೇ ಹರಸಾಹಸವಾಗಿದೆ. ಅಂಗಡಿಗಳು ವಾರಗಟ್ಟಲೇ ಕೆಟ್ಟ ವಾಸನೆ ಬೀರುವುದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಅಡ್ಡಾಡುವಂತಾಗಿದೆ. ನಗರಸಭೆ ಅಧಿಕಾರಿಗಳು ಕೂಡಲೇ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಸ್ಥಳೀಯರಾದ ಸಂದೀಪ ಕುರಡೇಕರ, ರಾಜು ರೇವಣಕರ, ಅಕ್ಷಯ ರೋಖಡೆ ಒತ್ತಾಯಿಸಿದರು.

# ತಿರುಮಲ ದೇವಸ್ಥಾನಕ್ಕೆ 7 ಎಕರೆ ಭೂಮಿ

• ಉದಯವಾಹಿನಿ, ಬೆಳಗಾವಿ

ನಗರ ಹೊರವಲಯದಲ್ಲಿ ಏಳು ಎಕರೆ ಪ್ರದೇಶದಲ್ಲಿ ಬೃಹತ್ ವೆಂಕಟೇಶ್ವರ ದೇವಸ್ಥಾನ ಕಟ್ಟಲು ಆಂಧ್ರಪ್ರದೇಶದ ತಿರುಮಲ ತಿರುಪತಿ ದೇವಸ್ಥಾನ ಆಡಳಿತ ಮಂಡಳಿಗೆ ಬೆಳಗಾವಿ ರೆಡ್ಡಿ ಸಂಘ ಭೂಮಿ ಹಸ್ತಾಂತರ ಕಾರ್ಯಕ್ರಮ ಜರುಗಿತು. ಇಲ್ಲಿನ ರೆಡ್ಡಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಭೂ ದಾಖಲೆಗಳನ್ನು ನಿಯಮಬದ್ಧವಾಗಿ ಹಸ್ತಾಂತರ ಮಾಡಲಾಯಿತು. ದೇವಸ್ಥಾನ ಕಟ್ಟುವ ಸಂಬಂಧವಾಗಿ ಮಹತ್ವದ ಚರ್ಚೆ ನಡೆಸಲಾಯಿತು.

ಟಿಟಿಡಿ ಆಡಳಿತ ಮಂಡಳಿಯ ಸದಸ್ಯ ಎಸ್.ನರೇಶ್ ಕುಮಾರ್, ದೇವಸ್ಥಾನ ನಿರ್ಮಾಣಕ್ಕಾಗಿ ಬೆಳಗಾವಿ ರೆಡ್ಡಿ ಸಂಘವು ಸದಭಿಪ್ರಾಯದಿಂದ 7 ಎಕರೆ ಭೂಮಿಯನ್ನು ಹಸ್ತಾಂತರ ಮಾಡಿರುವುದು ಶ್ಲಾಘನೀಯ ಕ್ರಮ. ಮುಂದಿನ ಎರಡು ವರ್ಷಗಳಲ್ಲಿ 100 ಕೋಟಿ ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣಗೊಳ್ಳಲಿದ್ದು, ಇದರಲ್ಲಿ ಶೇ 80ರಷ್ಟು ಅನುದಾನವನ್ನು ಟಿಟಿಡಿ ಒದಗಿಸಲಿದೆ. ಶೇ 10ರಷ್ಟು ರೆಡ್ಡಿ ಸಂಘ ಹಾಗೂ ಉಳಿದ ಶೇ 10ರಷ್ಟು ದಾನಿಗಳಿಂದ ಸಂಗ್ರಹಿಸಲಾಗುವುದು ಎಂದು ವಿವರಿಸಿದರು.

ಕರ್ನಾಟಕದ ದಾನಿಗಳ ಸಹಕಾರದಿಂದಲೇ ದೇವಸ್ಥಾನ ನಿರ್ಮಾಣ ಮಾಡುವ ಸಂಕಲ್ಪ ಕೈಗೊಳ್ಳಲಾಗಿದೆ. ಮೂರು ರಾಜ್ಯಗಳ ಕೇಂದ್ರ ಸ್ಥಾನವಾಗಿರುವ ಬೆಳಗಾವಿ ನಗರದ ಹೊರವಲಯದಲ್ಲಿ ತಿರುಮಲ ವೆಂಕಟರಮಣ ದೇವಸ್ಥಾನ ನಿರ್ಮಾಣವಾಗುವುದರಿಂದ ಭಕ್ತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ ಎಂದು ಹೇಳಿದರು.

ಮಹಾರಾಷ್ಟ್ರದ ಕೊಲ್ಲಾಪುರದಲ್ಲಿರುವ ಮಹಾಲಕ್ಷ್ಮಿ ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರಿಗೆ ಕೂಡ ಈ ದೇವಸ್ಥಾನದಿಂದ ಹೆಚ್ಚಿನ ಸೌಲಭ್ಯ ದೊರೆಯಲಿದೆ. ತಿರುಪತಿಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳನ್ನು ಇದೇ ಮಾದರಿಯಲ್ಲಿ ಇಲ್ಲಿ ಸಹ ಆಯೋಜಿಸಲಾಗುವುದು.

ಭಕ್ತರಿಗೆ ವಸತಿ, ಪ್ರಸಾದ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತದೆ ಎಂದು ಹೇಳಿದರು. ಇದಲ್ಲದೆ, ಟಿಟಿಡಿ ಸಂಸ್ಥೆ ದೇವಸ್ಥಾನಗಳ ನಿರ್ಮಾಣ, ಪುನರುಜ್ಜೀವನಕ್ಕಾಗಿ ಸುಮಾರು 9 ಸಾವಿರ ಕೋಟಿ ಮೊತ್ತವನ್ನು ಮೀಸಲಿಟ್ಟಿದ್ದು, ದೇಶದ ಆರು ಕಡೆಗಳಲ್ಲಿ ಟಿಟಿಡಿ ದೇವಸ್ಥಾನಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

## ಹಿಂದೂ-ಮುಸ್ಲಿಂ ಐಕ್ಯದ ಪ್ರತೀಕ ಹಾಜಿ ಸರವರ್ ಉರುಸ್ ಏ.24 ರಂದು

• ಉದಯವಾಹಿನಿ,ಚಿಂಚೋಳಿ



ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದ ಹಾಜಿ ಸರವರ್ ಉರುಸ್ ಏ.24ರಂದು ಸಡಗರ ಸಂಭ್ರಮದಿಂದ ಜರುಗಲಿದೆ ಎಂದು ದರ್ಗಾದ ಸಜ್ಜಾದೆ ನಶೀನ ಮುತ್ತವಲ್ಲಿ ಮಸ್ತಾನ್ ಅಲಿ ಪಟ್ಟೇದ್ದಾರ ತಿಳಿಸಿದ್ದಾರೆ.

ಗಡಿಕೇಶ್ವಾರ ಗ್ರಾಮವು ಹಿಂದೂ–ಮುಸ್ಲಿಂ ಧರ್ಮೀಯರ ನಂಬಿಕೆ ಮತ್ತು ಭಕ್ತಿಯ ಸಂಗಮವಾಗಿಪ್ರಸಿದ್ಧಿ ಪಡೆದಿದೆ.

ಈ ಭಾವೈಕ್ಯತೆಯ ಪ್ರತೀಕವಾದ ಹಾಜಿ ಸರವರ್ ಉರುಸ್ ಸಡಗರ ಸಂಭ್ರಮದಿಂದ ಜರುಗಲಿದ್ದು, ಉರುಸ್ ಅಂಗವಾಗಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದರ್ಶನ ಪಡೆದು ಪುನೀತರಾಗಬೇಕು ಮನವಿ ಮಾಡಿದ್ದಾರೆ.

ಏಪ್ರಿಲ್ 24ರಂದು ಶುಕ್ರವಾರ ರಾತ್ರಿ, 9ಗಂಟೆಗೆ ಮಸ್ತಾನ್ ಅಲಿ ಪಟ್ಟೇದಾರರವರ ಮನೆಯಿಂದ ಗಂಧದ ಮೆರವಣಿಗೆ ಚಾಲನೆ ನೀಡಲಾಗುವುದು ವಾದ್ಯಮೇಳಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸುವ ಈ ಮೆರವಣಿಗೆ ದರ್ಗಾಕ್ಕೆ ತಲುಪಿದ ಬಳಿಕ ಸಂಪ್ರದಾಯ ಬದ್ಧ ವಿಧಿವಿಧಾನಗಳೊಂದಿಗೆ ಗಂಧದ ಕಾರ್ಯಕ್ರಮ ನೆರವೇರಲಿದೆ.

ಏ 25ರಂದು ರಾತ್ರಿ 9 ಗಂಟೆಗೆ ದೀಪೋತ್ಸವ, ಮಿಲಾದುನ್ನಬಿ, ಖವಾಲಿ ಕಾರ್ಯಕ್ರಮಗಳು ಜರುಗಲಿವೆ.

ಏ.26ರಂದು ಮುಂಜಾನೆ 6ಗಂಟೆಗೆ ದೇವರ ಪ್ರಸಾದ ವಿತರಣೆ ನಡೆಯಲಿದೆ. ಉತ್ಸವದ ಸಮಾರೋಪ ಏ.27ರಂದು ಹರಿಜಾತ್ರೆ ಮೆರೆವಣಿಗೆ ಮುಖಾಂತರ ಪುನಃ ಮಸ್ತಾನ ಅಲಿ ಅಬ್ದುಲ್ ಘನಿ ಪಟ್ಟೇದಾರ ಸಜ್ಜಾದೆ ನಶೀನ ಮುತ್ತವಲ್ಲಿ ಮನೆಗೆ ಮರಳಿ ದೇವರನ್ನು ತರುವುದೊಂದಿಗೆ ಜಾತ್ರೆ ಮುಕ್ತಾಯಗೊಳ್ಳತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಹುಲಿಕಲ್ ಘಾಟ್‌ನಲ್ಲಿ ಮತ್ತೆ ಸಂಕಷ್ಟ: ಗುಡ್ಡ ಕುಸಿತ, ಸಂಚಾರ ನಿಷೇಧ, ಚಂಡಿಕಾಂಬ ದೇವಸ್ಥಾನ ದರ್ಶನಕ್ಕೂ ತೊಂದರೆ**

# ಕುಂದಾಪುರ ಭಾಗದ ಜನರಿಗೆ ಸಮಸ್ಯೆ

• ಉದಯವಾಹಿನಿ, ಕುಂದಾಪುರ

ಉಡುಪಿ ಜಿಲ್ಲೆಯ ಸಂಪರ್ಕ ಕೊಂಡಿ ಹುಲಿಕಲ್ ಘಾಟ್‌ನಲ್ಲಿ (ರಾಜ್ಯ ಹೆದ್ದಾರಿ 52) ಇತ್ತೀಚೆಗೆ ಗುಡ್ಡ ಕುಸಿದು ಮೂವರು ಮೃತಪಟ್ಟ ಘಟನೆ ನಂತರ, ಶಿವಮೊಗ್ಗ ಜಿಲ್ಲಾಡಳಿತ ವಾಹನಗಳ ಸಂಚಾರ ನಿಷೇಧಿಸಿ ಅಧಿಸೂಚನೆ ಹೊರಡಿಸಿದೆ. ಇದರಿಂದ ಘಾಟಿ ತಪ್ಪಲು ನಿವಾಸಿಗಳಿಗೆ ಸಂಕಷ್ಟ ಎದುರಾಗಿದೆ. ಕಳೆದ ಮಳೆಗಾಲದಲ್ಲಿ ಘಾಟಿಯಲ್ಲಿ ಸಂಭವಿಸಿದ ಗುಡ್ಡ ಕುಸಿತ, ತದನಂತರ ಘಾಟಿ ಅಭಿವೃದ್ಧಿ ಕಾಮಗಾರಿ ಕಾರಣಕ್ಕೆ ಸಂಚಾರ ಸ್ಥಗಿತಗೊಂಡಿತ್ತು. ಇದರಿಂದ ಘಾಟಿ ಸನಿಹದ ಮಾಸ್ತಿಕಟ್ಟೆ, ಯಡೂರು, ಸುಳುಗೋಡು, ಕಾನುಗೋಡು, ನಗರ, ಕಬಳೆ, ಹುಲಿಕಲ್, ಕುಂದಾಪುರ ತಾಲ್ಲೂಕಿನ ಹೊಸಂಗಡಿ ಪ್ರದೇಶದ ಜನರು ತೊಂದರೆಗೀಡಾಗಿದ್ದರು.

ಮತ್ತೊಮ್ಮೆ ಸಂಚಾರ ನಿಷೇಧ ಅಧಿಸೂಚನೆ ಹೊರಬಿದ್ದಿರುವುದರಿಂದ ಘಾಟಿ ಸನಿಹದ ಜನತೆ ದಿಕ್ಕೆಟ್ಟಿದ್ದಾರೆ. ಯಾವುದೇ ಸರಕು ವಾಹನಗಳು ಬರುತ್ತಿಲ್ಲ. ಪ್ರಸಿದ್ಧ ಯಾತ್ರಾಕ್ಷೇತ್ರ, ಚಂಡಿಕಾಂಬ ದೇವಸ್ಥಾನ ದರ್ಶನಕ್ಕೂ ತೊಂದರೆಯಾಗಿದೆ. ಕುಂದಾಪುರ–ಶಿವಮೊಗ್ಗ–ಬೆಂಗಳೂರು ನಡುವೆ ಪಯಣಿಸುತ್ತಿದ್ದ ಬಸ್‌ಗಳು ನಿಟ್ಟೂರು ಘಾಟಿ ಮೂಲಕ ಪಯಣಿಸುತ್ತಿದ್ದು,

**ಸರಕು ವಾಹನಗಳು ಬರುತ್ತಿಲ್ಲ**


ಉದಯವಾಹಿನಿ ಚಿತ್ರ

> **ಹುಲಿಕಲ್ ಘಾಟ್‌ನಲ್ಲಿ ಭೂಕುಸಿತ ತಪ್ಪಿಸಲು ರಕ್ಷಣಾತ್ಮಕ ಗೋಡೆ ನಿರ್ಮಿಸುವ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಈ ಮಾರ್ಗವು ವಾಹನಗಳಿಗೆ ಸಂಚಾರಕ್ಕೆ ಸೂಕ್ತವಾಗಿಲ್ಲ. ನಡೆಯುತ್ತಿರುವ ಕೆಲಸ ಪೂರ್ಣಗೊಳ್ಳುವವರೆಗೆ, ಕೇಂದ್ರ ವಲಯದ ಮುಖ್ಯ ಇಂಜಿನಿಯರ್ ಶಿಫಾರಸು ಪ್ರಕಾರ ರಸ್ತೆಯಲ್ಲಿ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ.**
> – ಅಭಿಷೇಕ್ ವಿ., ಹೆಚ್ಚುವರಿ ಜಿಲ್ಲಾಧಿಕಾರಿ,

> **ಸಂಚಾರ ನಿಷೇಧ ಹಿನ್ನೆಲೆಯಲ್ಲಿ ಘಾಟಿಯ ಪ್ರಮುಖ ಸಂಪರ್ಕ ಕೊಂಡಿ ಹೊಸಂಗಡಿ ಪೇಟೆ ಬಿಕೋ ಎನ್ನುತ್ತಿದೆ. ಗ್ಯಾಸ್ ಬಿಕ್ಕಟ್ಟಿನ ಕಾರಣಕ್ಕೆ ಮೊದಲೇ ಸೊರಗಿ ಹೋಗಿದ್ದ ಹೋಟೆಲ್, ವಸತಿಗೃಹ ಇನ್ನಿತರ ವ್ಯವಹಾರ ಚಟುವಟಿಕೆಗಳು ಟೂರಿಸ್ಟ್‌ಗಳಿಲ್ಲದೆ ಭಣಗುಡುವಂತಾಗಿದೆ.**
> –ವಿಠೋಬ ಮಲ್ಯ, ಹೊಸಂಗಡಿ.

ಹುಲಿಕಲ್ ಘಾಟಿಯ ಅಂಚಿನಲ್ಲಿರುವ ಹೊಸಂಗಡಿ ಪೇಟೆ ವ್ಯವಹಾರ ಕುಸಿದಿದೆ.

**ಪರ್ಯಾಯ ಮಾರ್ಗಕ್ಕೆ ಶಿಫಾರಸು:** ಶಿವಮೊಗ್ಗ ಜಿಲ್ಲಾಡಳಿತ ಪ್ರಯಾಣಿಕರಿಗೆ ಪರ್ಯಾಯ ಮಾರ್ಗಗಳನ್ನು ಶಿಫಾರಸು ಮಾಡಿದೆ. ಈ ಹಿಂದೆ ತೀರ್ಥಹಳ್ಳಿ–ಕಾನುಗೋಡು–ಮಾಸ್ತಿಕಟ್ಟೆ–ಹುಲಿಕಲ್ ಘಾಟ್– ಹೊಸಂಗಡಿ–ಸಿದ್ದಾಪುರ–ಕುಂದಾಪುರ ಮಾರ್ಗವಾಗಿ ತೆರಳುತ್ತಿದ್ದ ವಾಹನಗಳು ಇನ್ನು ಮುಂದೆ ತೀರ್ಥಹಳ್ಳಿ–ಕಾನುಗೋಡು–ನಗರ–ಕೊಲ್ಲೂರು–ಕುಂದಾಪುರ ಮಾರ್ಗವಾಗಿ ತಲುಪಬಹುದು. ತೀರ್ಥಹಳ್ಳಿ ಯಡೂರು–ಸುಳಗೋಡು– ಹುಲಿಕಲ್ ಘಟ್ಟ–ಸಿದ್ದಾಪುರ–ಕುಂದಾಪುರ ಮಾರ್ಗವಾಗಿ ಸಂಚರಿಸುವ ವಾಹನಗಳು ತೀರ್ಥಹಳ್ಳಿ ಯಡೂರು–ಮಾಸ್ತಿಕಟ್ಟೆ– ಕಾನುಗೋಡು–ನಗರ–ಕೊಲ್ಲೂರು–ಕುಂದಾಪುರದ ಪರ್ಯಾಯ ಮಾರ್ಗವಾಗಿ ಸಂಚರಿಸಬಹುದು. ಶಿವಮೊಗ್ಗ/ಸಾಗರ–ಹೊಸ ನಗರ–ನಗರ–ಮಾಸ್ತಿಕಟ್ಟೆ–ಹುಲಿಕಲ್ ಘಾಟ್–ಹೊಸಂಗಡಿ– ಸಿದ್ದಾಪುರ–ಕುಂದಾಪುರ ಮಾರ್ಗವಾಗಿ ಸಾಗುತ್ತಿದ್ದ ವಾಹನಗಳು ಶಿವಮೊಗ್ಗ–ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೊನ್ನಾವರ ತಲುಪಿ ಭಟ್ಕಳ, ಬೈಂದೂರು ಮೂಲಕ ಕುಂದಾಪುರಕ್ಕೆ ತೆರಳಬಹುದು ಎಂದು ತಿಳಿಸಿದೆ.

## ಕೇರಳದಲ್ಲಿ ಪಟಾಕಿ ಫ್ಯಾಕ್ಟರಿ ಸ್ಫೋಟ ದುರಂತ : 13 ಮಂದಿ ಸಾವು

**ತ್ರಿಶೂರ್:** ಕೇರಳದ ಮುಂಡತಿಕೋಡ್‌ನಲ್ಲಿರುವ ಪಟಾಕಿ ಉತ್ಪಾದನಾ ಘಟಕದಲ್ಲಿ ಒಂದು ದಿನದ ಹಿಂದೆ ಸಂಭವಿಸಿದ ಸ್ಫೋಟದ ಸ್ಥಳದಿಂದ ಒಂಬತ್ತು ಸಂಪೂರ್ಣ ಶವಗಳು ಮತ್ತು 25ಕ್ಕೂ ಹೆಚ್ಚು ಜನರ ದೇಹದ ಭಾಗಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್‌ಹೇಳಿದ್ದಾರೆ. ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಕೆಎಸ್‌ಡಿಎಂಎ) ಹೇಳಿಕೆಯೊಂದರಲ್ಲಿ, ಸ್ಫೋಟದ ಸ್ಥಳದಿಂದ 26 ದೇಹದ ಭಾಗಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಗುರುತಿಸುವಿಕೆಗಾಗಿ ಅವರ ಡಿಎನ್‌ಎ ಪರೀಕ್ಷೆಗಳಿಗೆ ಒಳಪಟ್ಟರೆ, ಸತ್ತವರ ಸಂಖ್ಯೆ ಬದಲಾಗುತ್ತದೆ ಎಂದು ತಿಳಿಸಿದೆ. ತಡರಾತ್ರಿಯವರೆಗೆ, ಕೆಎಸ್‌ಡಿಎಂಎ ಪ್ರಕಾರ ಕನಿಷ್ಠ 13 ಜನರು ಘಟನೆಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಶಂಕಿಸಲಾಗಿದೆ.

ರಾಜೀವ್ ಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಬಯೋಟೆಕ್ನಾಲಜಿಯ ತಜ್ಞರು ಇಂದು ಬೆಳಿಗ್ಗೆ ಆಗಮಿಸಿ ದೇಹದ ಭಾಗಗಳ ಮಾದರಿಗಳನ್ನು ಸಂಗ್ರಹಿಸುತ್ತಾರೆ ಮತ್ತು ಶವಪರೀಕ್ಷೆಯ ನಂತರ ಕುಟುಂಬ ಸದಸ್ಯರಿಗೆ ಈಗಾಗಲೇ ಗುರುತಿಸಲ್ಪಟ್ಟ ಮತ್ತು ಬಿಡುಗಡೆ ಮಾಡಲಾದ ಸಂಪೂರ್ಣ ಶವಗಳನ್ನು ಡಿಎನ್‌ಎ ಪರೀಕ್ಷೆಗಾಗಿ ಸಂಗ್ರಹಿಸುತ್ತಾರೆ ಎಂದು ಸಚಿವರು ಹೇಳಿದರು. ಈ ಘಟನೆಯಲ್ಲಿ ಅನೇಕ ದೇಹಗಳು ಮತ್ತು ಭಾಗಗಳು ತೀವ್ರವಾಗಿ ಸುಟ್ಟುಹೋಗಿರುವುದರಿಂದ ಗುರುತಿಸುವುದು ಕಷ್ಟಕರವಾಗಿದೆ ಎಂದು ಅವರು ಹೇಳಿದರು.13 ಜನರು ತಮ್ಮ ಗಾಯಗಳಿಗೆ ತ್ರಿಶೂರ್ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಮತ್ತು ಅವರಲ್ಲಿ 10 ಜನರು ಐಸಿಯುನಲ್ಲಿದ್ದಾರೆ ಎಂದು ಜಾರ್ಜ್ ಹೇಳಿದರು.

10 ಮಂದಿಯಲ್ಲಿ ಇಬ್ಬರಿಗೆ ವೆಂಟಿಲೇಟರ್ ಅಳವಡಿಸಲಾಗಿದೆ ಎಂದು ಅವರು ಹೇಳಿದರು.ಘಟನೆಯಲ್ಲಿ ಬದುಕುಳಿದವರಿಗೆ ಮಾನಸಿಕ ಬೆಂಬಲವನ್ನು ಸಹ ನೀಡಲಾಗುತ್ತಿದೆ ಎಂದು ಸಚಿವರು ಹೇಳಿದರು.ಸ್ಫೋಟ ಸಂಭವಿಸಿದಾಗ ಘಟಕದಲ್ಲಿ ಎಷ್ಟು ಜನರು ಇದ್ದರು ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಅವರು ಹೇಳಿದರು.

ಕೆಲವು ಹೇಳಿಕೆಗಳ ಪ್ರಕಾರ ಘಟಕದಲ್ಲಿ 40 ಕಾರ್ಮಿಕರಿದ್ದರು ಎಂದು ಹೇಳಲಾಗುತ್ತದೆ, ಆದರೆ ಅವರಲ್ಲಿ ಕೆಲವರು ಹಗಲಿನಲ್ಲಿ ತಮ್ಮ ಮನೆಗಳಿಗೆ ಮರಳಿದ್ದರು ಎಂದು ಜಾರ್ಜ್ ಹೇಳಿದರು.ವಿಚಾರಣೆಗಳು ನಡೆಯುತ್ತಿವೆ ಮತ್ತು ಸ್ಫೋಟ ಸಂಭವಿಸಿದಾಗ ಘಟಕದಲ್ಲಿ ಎಷ್ಟು ಜನರು ಇದ್ದರು ಎಂಬುದರ ನಿಖರವಾದ ಅಂಕಿ ಅಂಶವನ್ನು ತಲುಪಲು ಹೆಚ್ಚಿನ ಸಮಯ ಬೇಕಾಗುತ್ತದೆ ಎಂದು ಅವರು ಹೇಳಿದರು.

## ಗೃಹ ಸಚಿವರ ರಾಜೀನಾಮೆಗೆ ಕೇಳಿಬರುತ್ತಿದೆ ಒತ್ತಾಯ

### ಭಾರತದಿಂದ ರವಾನೆಯಾಗುವ ವಸ್ತುಗಳ ಮೇಲೆ ಸುಂಕ, ವಿದ್ಯಾರ್ಥಿ ಸಂಘಟನೆಗಳ ಬ್ಯಾನ್ ಸರ್ಕಾರದ ನಿರ್ಧಾರದಿಂದ ಮತ್ತೆ ರೊಚ್ಚಿಗೆದ್ದ ನೇಪಾಳದ ಯುವಸಮುದಾಯ

**ಕಠ್ಮಂಡು:** ಕಳೆದ ವರ್ಷ ನೇಪಾಳದಲ್ಲಿ ಭುಗಿಲೆದ್ದ ವಿದ್ಯಾರ್ಥಿ ಪ್ರತಿಭಟನೆಗಳ ಬಳಿಕ ಅಲ್ಲಿನ ಸರ್ಕಾರ ಉರುಳಿತ್ತು.ಇದೀಗ ಚುನಾವಣೆಯಲ್ಲಿ ರ್‍ಯಾಪರ್ ಕಂ ರಾಷ್ಟ್ರೀಯ ನಾಯಕ ಬಾಲೆನ್ ಶಾ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಒಂದೇ ತಿಂಗಳಿನಲ್ಲಿ ಹೊಸ ಸರ್ಕಾರದ ವಿರುದ್ಧ ಜನಾಕ್ರೋಶ ಭುಗಿಲೆದಿದ್ದು,ವಿದ್ಯಾರ್ಥಿಗಳು, ರಾಜಕೀಯ ಗುಂಪುಗಳು ಮತ್ತು ಸಾಮಾನ್ಯ ನಾಗರಿಕರು ಸೇರಿದಂತೆ ಪ್ರತಿಭಟನಾಕಾರರು ಕಠ್ಮಂಡು, ಇತರ ನಗರಗಳಲ್ಲಿ ಬೀದಿಗಿಳಿದಿದ್ದಾರೆ. ಸದ್ಯ ಈ ಪ್ರತಿಭಟನೆಗಳು ಬೀದಿಗಳಿಂದ ದೇಶದ ಆಡಳಿತ ಕೇಂದ್ರವಾದ ಸಿಂಘಾ ದರ್ಬಾರ್‌ಗೆ ಹರಡಿವೆ. ಈ ಆಕ್ರೋಶಕ್ಕೆ ಪ್ರಮುಖ ಕಾರಣವಾಗಿರುವುದು ಭಾರತದಿಂದ ತರುವ ಸರಕುಗಳ ಮೇಲಿನ ಕಡ್ಡಾಯ ಸುಂಕ ಸೇರಿದಂತೆ ವಿದ್ಯಾರ್ಥಿ ಯೂನಿಯನ್ ಬ್ಯಾನ್‌ಮಾಡಿರುವುದು.

**ವಿದ್ಯಾರ್ಥಿ ಯೂನಿಯನ್ ಬ್ಯಾನ್ ಮಾಡಲು ಮುಂದಾದ ಬಾಲೆನ್ ಶಾ ಸರ್ಕಾರ:** ಕಳೆದ ಬಾರಿ ನೇಪಾಳದಲ್ಲಿ ಭ್ರಷ್ಟಚಾರದ ಆಡಳಿತ ಎಂದು ಆರೋಪಿಸಿ ನಡೆದ ಜೆನ್-ಝಿ ಪ್ರತಿಭಟನೆಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದೇ ವಿದ್ಯಾರ್ಥಿ ಸಂಘಗಳು. ಇದೀಗ ನೇಪಾಳದ ಸರ್ಕಾರ ವಿದ್ಯಾರ್ಥಿ ಸಂಘಗಳನ್ನು ಬ್ಯಾನ್ ಮಾಡಲು ಮುಂದಾಗಿದೆ. ಇದು ಸದ್ಯ ತಮ್ಮ ಸ್ವತಂತ್ರದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನವೆಂದು ಕೂಗು ಕೇಳಿಬರುತ್ತಿದ್ದು, ಸರ್ಕಾರ ಸಂವಾದದಲ್ಲಿ ತೊಡಗಿಸಿಕೊಳ್ಳುವ ಬದಲು ದಮನಕಾರಿ ವಿಧಾನವನ್ನು ಅಳವಡಿಸಿಕೊಂಡಿದೆ ಎಂದು ವಿದ್ಯಾರ್ಥಿ ಮುಖಂಡರು ಆರೋಪಿಸಿದ್ದಾರೆ .

ಇದು ಸದ್ಯ ನೇಪಾಳದ ಯುವ ಸಮುದಾಯದಲ್ಲಿ ಸರ್ಕಾರದ ವಿರುದ್ಧ ಅಸಮಾಧಾನವನ್ನು ಹೆಚ್ಚಿಸುತ್ತಿದ್ದು, ದೇಶಾದ್ಯಂತ ಸಾವಿರಾರು ವಿದ್ಯಾರ್ಥಿಗಳು, ಶಾಲಾ, ಕಾಲೇಜು ಗುಂಪುಗಳ ನೇತೃತ್ವದಲ್ಲಿ ಅನೇಕ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸುತ್ತಿವೆ.

**ಗೃಹ ಸಚಿವರ ರಾಜೀನಾಮೆಗೆ ಒತ್ತಾಯ!:** ಇವೆಲ್ಲದರ ಜೊತೆಗೆ ಈ ಹೋರಾಟಗಳು ರಾಜಕೀಯ ತಿರುವನ್ನು ಪಡೆದುಕೊಂಡಿದ್ದು, ನೇಪಾಳದ ಗೃಹ ಸಚಿವ ಸುಡಾನ್ ಗುರುಂಗ್ ಆಧಾರದ ಮೇಲೆ ಅವರ ರಾಜೀನಾಮೆ ನೀಡಬೇಕೆಂದು ಬೇಡಿಕೆಗಳು ಹೆಚ್ಚಾಗುತ್ತಿವೆ. ಈ ಕುರಿತಂತೆ ವಿದ್ಯಾರ್ಥಿಗಳೊಂದಿಗೆ ರಾಜಕೀಯ ಪಕ್ಷಗಳು, ನಾಗರಿಕ ಸಮಾಜ ಗುಂಪುಗಳು ಪ್ರತಿಭಟನೆ ನಡೆಸುತ್ತಿವೆ.



### ಭಾರತದಿಂದ ನೇಪಾಳಕ್ಕೆ ರವಾನೆಯಾಗುವ ಸರಕುಗಳ ಮೇಲೆ ಕಡ್ಡಾಯ ಸುಂಕ

ನೇಪಾಳದಲ್ಲಿ ಭಾರತದ ಗಡಿಗೆ ಹೊಂದಿಕೊಂಡಿರುವ ಪ್ರಾಂತ್ಯದ ಜನರು ಬಹುತೇಕವಾಗಿ ತಮ್ಮ ದೈನಂದಿನ ಜೀವನದ ಮೇಲೆ ಭಾರತೀಯ ವಸ್ತುಗಳನ್ನು ಅವಲಂಬಿಸಿದ್ದಾರೆ. ಆದರೆ, ಇದೀಗ ಬಾಲೆನ್ ಶಾ ಸರ್ಕಾರ ಭಾರತದಿಂದ ತರುವ 100 ರೂ.ಗಿಂತ ಹೆಚ್ಚಿನ ಮೌಲ್ಯದ ಸರಕುಗಳ ಮೇಲೆ ಕಡ್ಡಾಯ ಕಸ್ಟಮ್ಸ್ ಸುಂಕ ವಿಧಿಸಿ ಆದೇಶ ಹೊರಡಿಸಿದೆ. ಇದು ತಮ್ಮ ದೈನಂದಿನ ಜೀವನವೆಚ್ಚವನ್ನು ಹೆಚ್ಚು ಮಾಡಲಿದೆ ಎಂದು ಸಾರ್ವಜನಿಕರಲ್ಲಿ ಆಕ್ರೋಶ ಭುಗಿಲೆದ್ದಿದ್ದು, ಸರ್ಕಾರ ಜನಸಾಮಾನ್ಯರ ಹಾಗೂ ಈ ದೇಶಗಳಲ್ಲಿನ ವಾಸ್ತವಿಕ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ ಎಂದು ಟೀಕೆ ವ್ಯಕ್ತವಾಗುತ್ತಿದೆ.

### ಸರ್ಕಾರದ ವಿರುದ್ಧ ರೊಚ್ಚಿಗೊಳ್ಳುವಂತೆ ಮಾಡಿದೆ

ನೇಪಾಳದಲ್ಲಿ ಬಾಲೆನ್ ಶಾ ನೇತೃತ್ವದಲ್ಲಿ ಹೊಸ ಸರ್ಕಾರ ರಚನೆಯಾಗಿ ಕೇವಲ ಒಂದು ತಿಂಗಳಿನಲ್ಲೇ ದೇಶದಾದ್ಯಂತ ಜನಾಕ್ರೋಶ ಭುಗಿಲೆದ್ದಿದ್ದು, ಪ್ರಮುಖವಾಗಿ ಭಾರತದಿಂದ 100ರೂ ದಾಟಿ ರವಾನೆಯಾಗುವ ಎಲ್ಲಾ ಸರಕುಗಳ ಮೇಲೆ ಸುಂಕ ವಿಧಿಸಿದ ಸರ್ಕಾರದ ಕ್ರಮ ವಿರೋಧಿಸಿ ಪ್ರತಿಭಟನೆಗಳು ನಡೆಯುತ್ತಿವೆ. ಇತ್ತ ವಿದ್ಯಾರ್ಥಿ ಸಂಘಟನೆಗಳ ಬ್ಯಾನ್ ಮಾಡಲು ಹೊರಟಿರುವ ನಿರ್ಧಾರ ಸೇರಿದಂತೆ ನೇಪಾಳದ ಗೃಹ ಸಚಿವರ ಮೇಲಿನ ಹಗರಣದ ಆರೋಪಗಳು ನೇಪಾಳ ಯುವ ಸಮುದಾಯ ಮತ್ತೆ ಸರ್ಕಾರದ ವಿರುದ್ಧ ರೊಚ್ಚಿಗೊಳ್ಳುವಂತೆ ಮಾಡಿದೆ.

## ಮಿನಿ ನ್ಯೂಸ್

### ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತಾ ನೀತಿ ; ಅಮಿತ್ ಶಾ

**ನವದೆಹಲಿ:** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ ವರ್ಷ ಪೆಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಸಾವನ್ನಪ್ಪಿದವರನ್ನು ಸ್ಮರಿಸಿಕೊಂಡರು, ಭಯೋತ್ಪಾದನೆ ಮತ್ತು ಅದನ್ನು ಆಶ್ರಯಿಸುವವರ ವಿರುದ್ಧ ಭಾರತ ತನ್ನ ಶೂನ್ಯ ಸಹಿಷ್ಣುತಾ ನೀತಿಯನ್ನು ಮುಂದುವರಿಸುತ್ತದೆ ಎಂದು ಹೇಳಿದರು. ನಮ್ಮ ಜನರನ್ನು ಕಳೆದುಕೊಂಡ ದುಃಖ ಮತ್ತು ನೋವು ಇನ್ನೂ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿದೆ ಎಂದು ಅವರು ಎಕ್ಸ್ ಮಾಡಿದ್ದಾರೆ.ಭಯೋತ್ಪಾದನೆ ಮಾನವೀಯತೆಯ ದೊಡ್ಡ ಶತ್ರು, ಅದರ ವಿರುದ್ಧ ಹೋರಾಡಲು ಮತ್ತು ಸೋಲಿಸಲು ನಾವು ಒಗ್ಗಟ್ಟಿನಿಂದ ನಿಲ್ಲಬೇಕು. ಭಯೋತ್ಪಾದನೆ, ಅದನ್ನು ಆಶ್ರಯಿಸುವವರ ವಿರುದ್ಧ ಭಾರತ ತನ್ನ ಶೂನ್ಯ ಸಹಿಷ್ಣುತಾ ನೀತಿಯನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು. ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಲಷ್ಕರ್-ಎ-ತೈಬಾ ಕಳೆದ ವರ್ಷ ಈ ದಿನ ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ದಾಳಿ ನಡೆಸಿತು, ಇದರಲ್ಲಿ 26 ಅಮಾಯಕರು ಸಾವನ್ನಪ್ಪಿದ್ದರು. ಪೆಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಭಾರತವು ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಎಂಬ ಪ್ರತೀಕಾರದ ಮಿಲಿಟರಿ ದಾಳಿಯನ್ನು ನಡೆಸಿತು, ಇದರಲ್ಲಿ ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಮಿಲಿಟರಿ, ಭಯೋತ್ಪಾದಕ ಮೂಲಸೌಕರ್ಯಗಳನ್ನು ನಾಶಪಡಿಸಿದವು.

### ಕಾಳೇಶ್ವರಂ ಹಗರಣ: ಕೆಸಿಆರ್, ಇತರರ ವಿರುದ್ಧ ಕ್ರಮ ಬೇಡ: ತೆಲಂಗಾಣ ಹೈಕೋರ್ಟ್

**ಹೈದರಾಬಾದ್:** ಕಾಳೇಶ್ವರಂ ಏತ ನೀರಾವರಿ ಯೋಜನೆ ಹಗರಣಕ್ಕೆ ಸಂಬಂಧಿಸಿದಂತೆ ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್, ಇತರ ಮೂವರಿಗೆ ತೆಲಂಗಾಣ ಹೈಕೋರ್ಟ್ ಬುಧವಾರ ಬಿಗ್ ರಿಲೀಫ್ ನೀಡಿದೆ. ನಿವೃತ್ತ ನ್ಯಾಯಮೂರ್ತಿ ಪಿ.ಸಿ.ಘೋಷ್ ಸಮಿತಿ ವರದಿ ಆಧಾರದ ಮೇಲೆ ಕೆಸಿಆರ್, ಇತರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ನ್ಯಾಯಾಲಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಕೆಸಿಆರ್, ಮಾಜಿ ಸಚಿವ ಟಿ.ಹರೀಶ್ ರಾವ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಅಪರೇಶ್ ಕುಮಾರ್ ಸಿಂಗ್, ನ್ಯಾಯಮೂರ್ತಿ ಜಿ.ಎಂ.ಮೊಹಿದ್ದಿನ್ ಅವರಿದ್ದ ವಿಭಾಗೀಯ ಪೀಠ ಈ ತೀರ್ಪು ನೀಡಿದೆ. ಸಮಿತಿ ಸಲ್ಲಿಸಿರುವ ವರದಿಯಲ್ಲಿ ಕೆಲವು ಲೋಪಗಳಿದ್ದು ಅರ್ಜಿದಾರರ ವಿವರಣೆ ಪಡೆಯದೆ ವರದಿಯನ್ನು ನೀಡಲಾಗಿದೆ. ಇದನ್ನು ಆಧರಿಸಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ. ಆದಾಗ್ಯೂ, ತನಿಖಾ ಸಮಿತಿ ರಚನೆ ಕಾನೂನುಬಾಹಿರವೇನಲ್ಲ ಮತ್ತು ಅದು ಸಾಂವಿಧಾನಿಕವಾಗಿ ಸರಿಯಾಗಿದೆ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

**ಪ್ರಕರಣದ ಹಿನ್ನೆಲೆ:** ಬಿಆರ್‌ಎಸ್ ಸರ್ಕಾರದ ಅವಧಿಯಲ್ಲಿ ನಿರ್ಮಿಸಲಾದ ಕಾಳೇಶ್ವರಂ ಏತ ನೀರಾವರಿ ಯೋಜನೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪದ ಮೇಲೆ ನಿವೃತ್ತ ನ್ಯಾಯಮೂರ್ತಿ ಪಿ.ಸಿ. ಘೋಷ್ ನೇತೃತ್ವದ ಸಮಿತಿಯು ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಈ ವರದಿಯಲ್ಲಿ ಕೆಸಿಆರ್, ಹರೀಶ್ ರಾವ್ ಸೇರಿದಂತೆ ಇತರರು ಯೋಜನೆಯ ಅಕ್ರಮಗಳಿಗೆ ಹೊಣೆಗಾರರಾಗಿದ್ದಾರೆ ಎಂದು ಸಮಿತಿ ತಿಳಿಸಿತ್ತು. ಈ ವರದಿಯ ಆಧಾರದ ಮೇಲೆ ಸಿಎಂ ರೇವಂತ್ ರೆಡ್ಡಿ ಅವರು ಪ್ರಕರಣವನ್ನು ಸಿಬಿಐಗೆ ವಹಿಸುವುದಾಗಿ ಘೋಷಿಸಿದ್ದರು.

### ಮಹಿಳಾ ಮೀಸಲಾತಿ ಸಂಬಂಧ ಪ್ರತಿಭಟನೆ ಬೇಡ: ಕಾರ್ಯಕರ್ತರಿಗೆ ಸೂಚನೆ

**ಲಖನೌ:** ಮಹಿಳಾ ಮೀಸಲಾತಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಪ್ರತಿಭಟನೆ ನಡೆಸದಂತೆ ಪಕ್ಷದ ಕಾರ್ಯಕರ್ತರಿಗೆ ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಸೂಚಿಸಿದ್ದಾರೆ. ಮಹಿಳಾ ಮೀಸಲಾತಿ ಕೋಟಾದೊಳಗೆ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಮಹಿಳೆಯರಿಗೆ ಪ್ರತ್ಯೇಕ ಕೋಟಾ ಇರಬೇಕು ಎಂಬ ಪಕ್ಷದ ನಿಲುವಿಗೆ ಬದ್ಧವಾಗಿದ್ದೇವೆ ಎಂದು ಅವರು ಈ ಸಂದರ್ಭದಲ್ಲಿ ತಿಳಿಸಿದ್ದಾರೆ. ಮಹಿಳಾ ಮೀಸಲಾತಿ ವಿಷಯದ ಬಗ್ಗೆ ಯಾವುದೇ ಗೊಂದಲ ಉಂಟಾಗದಂತೆ ಕಾರ್ಯಕರ್ತರಿಗೆ ಮಾಹಿತಿ ನೀಡುವಂತೆ ಅವರು ಮುಖಂಡರಿಗೆ ಸೂಚಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಪ್ರತಿಭಟನೆಯನ್ನು ನಡೆಸಬಾರದು ಎಂದೂ ಹೇಳಿದ್ದಾರೆ. ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ ಕಡೆ ಗಮನ ಹರಿಸಲು ಹೇಳಿರುವ ಅವರು, ರಾಜ್ಯದಲ್ಲಿ ಬಿಎಸ್‌ಪಿ ಸರ್ಕಾರದ ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಹಾಗೂ ಜನಕಲ್ಯಾಣ ಕಾರ್ಯಗಳನ್ನು ಜನರಿಗೆ ತಲುಪಿಸುವಂತೆ ಅವರು ಕಾರ್ಯಕರ್ತರಿಗೆ ಸೂಚನೆ ನೀಡಿದ್ದಾರೆ. ಎಕ್ಸ್‌ಪ್ರೆಸ್ ವೇಗಳು, ನೋಯ್ಡಾದ ವಿಮಾನ ನಿಲ್ದಾಣ ಸೇರಿದಂತೆ ಹಲವಾರು ಪ್ರಮುಖ ಮೂಲಸೌಕರ್ಯ ಯೋಜನೆಗಳನ್ನು ಬಿಎಸ್‌ಪಿ ಆಡಳಿತದ ಅವಧಿಯಲ್ಲಿ ರೂಪಿಸಲಾಗಿತ್ತು. ಆದರೆ ಅಂದಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವು ಒಡ್ಡಿದ ಅಡೆತಡೆಗಳಿಂದಾಗಿ ಅವುಗಳನ್ನು ಮುಂಚಿತವಾಗಿ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಎಂಬ ವಿಷಯವನ್ನು ಕಾರ್ಯಕರ್ತರು ಜನರಿಗೆ ತಿಳಿಸಬೇಕು ಎಂದು ಮಾಯಾವತಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

**'ಪ್ರತ್ಯೇಕ ಕೋಟಾ ಬೇಕು':** ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ ನೀಡುವುದನ್ನು ನಮ್ಮ ಪಕ್ಷವು ಬೆಂಬಲಿಸುತ್ತದೆ. ಆದರೆ, ಅದರೊಳಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಪ್ರತ್ಯೇಕ ಕೋಟಾ ಇರಬೇಕು ಎಂದು ಮಾಯಾವತಿ ಒತ್ತಾಯಿಸಿದ್ದಾರೆ. ಏ. 15ರಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಅವರು, ಉಪ ಕೋಟಾ ಇಲ್ಲದಿದ್ದರೆ, ಈ ವರ್ಗಗಳ ಮಹಿಳೆಯರಿಗೆ ಸಮರ್ಪಕ ಪ್ರಾತಿನಿಧ್ಯ ಸಿಗುವುದಿಲ್ಲ ಎಂದು ಅವರು ಅನುಮಾನ ವ್ಯಕ್ತಪಡಿಸಿದ್ದರು.

## ಆಪರೇಷನ್ ರೋರಿಂಗ್ ಲಯನ್ ಕಾರ್ಯಾಚರಣೆಯ ಮೊಸಾದ್ ಏಜೆಂಟ್ ಹತ್ಯೆ

**ಟೆಲ್ ಅವಿವ್:** ಇಸ್ರೇಲ್‌ನ ಆಪರೇಷನ್ ರೋರಿಂಗ್ ಲಯನ್, ಆಪರೇಷನ್ ಎಪಿಕ್ ಫ್ಯೂರಿರೂವಾರಿ ಮೊಸಾದ್‌ಗುಪ್ತಚರ ಅಧಿಕಾರಿ, ಬೇರೊಂದು ಗುಪ್ತ ಕಾರ್ಯಾಚರಣೆಯಲ್ಲಿ ಹತನಾಗಿದ್ದಾನೆ ಎಂದು ತಿಳಿದುಬಂದಿದೆ. ಈ ಕುರಿತು ಇಸ್ರೇಲ್ ಗುಪ್ತಚರ ಸಂಘಟನೆಯಾದ ಮೊಸಾದ್ ಮುಖ್ಯಸ್ಥ ಡೇವಿಡ್ ಬಾರ್ನಿಯಾ ಮಾತನಾಡಿದ್ದು, ಇಸ್ರೇಲ್‌ನ ಇತ್ತೀಚಿನ ಬಹುದೊಡ್ಡ ಯಶಸ್ವಿ ಕಾರ್ಯಾಚರಣೆಯ ರೂವಾರಿ ಬೇರೊಂದು ದೇಶದಲ್ಲಿ ಸೇವೆ ಸಲ್ಲಿಸುತ್ತಾ ಹುತಾತ್ಮನಾಗಿದ್ದಾನೆ ಎಂದು ಹೇಳಿದ್ದಾರೆ. ಆದರೆ ಮೊಸಾದ್‌ನ ಗೌಪ್ಯ ನಿಯಮಗಳಿಗೆ ಅನುಸಾರವಾಗಿ ಕೊಲ್ಲಲ್ಪಟ್ಟ ಆ ಗುಪ್ತಚರ ಅಧಿಕಾರಿ ಯಾರು? ಆತನನ್ನು ಎಲ್ಲಿ ಕೊಲೆ ಮಾಡಲಾಗಿದೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ನಿರ್ದೇಶಕ ಡೇವಿಡ್ ಬಾರ್ನಿಯಾ ಉತ್ತರ ನೀಡಿಲ್ಲ. ಹತನಾದ ಆ ಮೊಸಾದ್ ಏಜೆಂಟ್‌ನನ್ನು M ಎಂದಷ್ಟೇ ಅವರು ಹೆಸರಿಸಿದ್ದಾರೆ.

ಮೊಸಾದ್‌ನ ಹುತಾತ್ಮರ ಸ್ಮರಣಾರ್ಥ ದಿನದ ಅಂಗವಾಗಿ



ಆಯೋಜಿಸಲಾಗಿದ್ದ ಸಮಾರಂಭದಲ್ಲಿ, M ನೇತೃತ್ವದ ಕಾರ್ಯಾಚರಣೆಗಳು ಸೃಜನಶೀಲತೆ, ಕರಾರುವಕ್ಕಾದ ತಂತ್ರಗಾರಿಕೆ ಮತ್ತು ಸುಧಾರಿತ ತಂತ್ರಜ್ಞಾನದ ಸಂಯೋಜನೆಯಾಗಿದ್ದವು. ನಮ್ಮ ಹೆಮ್ಮೆಯ M ಇರಾನ್ ವಿರುದ್ಧದ ಅಭಿಯಾನವನ್ನು ಯಶಸ್ವಿಗೊಳಿಸುವಲ್ಲಿ ಪ್ರಮುಖ ಪಾತ್ರನಿರ್ವಹಿಸಿದ್ದರು ಎಂದು ಮೊಸಾದ್ ನಿರ್ದೇಶಕ ಹೇಳಿದ್ದಾರೆ.

**Mಯಾರು?:** ಇಸ್ರೇಲ್‌ನ ಚಾನೆಲ್ 12 ನ್ಯೂಸ್ ಪ್ರಸಾರಕಡಿ ಪ್ರಕಾರ ಮೊಸಾದ್ ನಿರ್ದೇಶಕರು ಹೆಸರಿಸಿದ ಗುಪ್ತಚರ ಅಧಿಕಾರಿ M, ಮೇ 28, 2023ರಂದು ಉತ್ತರ ಇಟಲಿಯ ಮ್ಯಾಗಿಯೋರ್ ಸರೋವರದಲ್ಲಿ ಸಂಭವಿಸಿದ ದೋಣಿ ದುರಂತದಲ್ಲಿ ಸಾವನ್ನಪ್ಪಿದ್ದರು. M ಎಂದು ಕರೆಯಲ್ಪಡುತ್ತಿದ್ದ ಈ ಮೊಸಾದ್ ಅಧಿಕಾರಿ 50 ವರ್ಷದ ಎರೆಜ್ ಶಿಮೋನಿಯಾಗಿದ್ದು, ಅವರ ಸಾವಿನ ಸುದ್ದಿ ಬಂದಾಗ ಇಸ್ರೇಲ್ ಪ್ರಧಾನಮಂತ್ರಿ ಕಚೇರಿಯಲ್ಲಿ ಶೋಕಾಚರಣೆ ನಡೆಸಲಾಗಿತ್ತು.

ಅಂದರೆ ಮೊಸಾದ್‌ನ M ಏಜೆಂಟ್ 2023ರಲ್ಲೇ ಮೃತಪಟ್ಟಿದ್ದು, ಆತನನ್ನು ಕೊಲೆ ಮಾಡಲಾಗಿತ್ತೋ ಅಥವಾ ದೋಣಿ ದುರಂತದಲ್ಲಿ ಆತ ಸಾವಿಗೀಡಾಗಿದ್ದನೋ ಎಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಹಾಗೆಯೇ ಇರಾನ್ ಉನ್ನತ ನಾಯಕತ್ವವನ್ನು ಹತ್ಯೆಗೈಯುವ ಇಸ್ರೇಲ್ ಯೋಜನೆಯಲ್ಲಿ ಆತ ಪ್ರಮುಖ ಪಾತ್ರನಿರ್ವಹಿಸಿದ್ದ.

ಇರಾನ್ ಸರ್ವೋಚ್ಚನಾಯಕರಾಗಿದ್ದ ಆಯತೊಲ್ಲಾ ಅಲಿ ಖಮೇನಿ ಅವರನ್ನು ಹತ್ಯೆ ಮಾಡಲು, ಇಸ್ರೇಲ್ ದಶಕಗಳಿಂದ ಯೋಜನೆ ರೂಪಿಸುತ್ತಾ ಬಂದಿದೆ. ಈ ಪ್ರಕ್ರಿಯೆಯಲ್ಲಿ ಮೊಸಾದ್ ಏಜೆಂಟ್ M ಸಕ್ರಿಯವಾಗಿ ತೊಡಗಿಸಿಕೊಂಡಿದ್ದಲ್ಲದೇ, ಇಡೀ ಕಾರ್ಯಾಚಣೆಯ ಯೋಜನೆಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದ್ದ.

ಆದರೆ ಆಯತೊಲ್ಲಾ ಅಲಿ ಖಮೇನಿ ಹತ್ಯೆ ಮಾಡಿದ ಆಪರೇಷನ್ ರೋರಿಂಗ್ ಲಯನ್ ಕಾರ್ಯಾಚರಣೆ ಯಶಸ್ವಿಯಾಗಿದ್ದನ್ನು ನೋಡಲು, M ಜೀವಂತವಾಗಿರಲಿಲ್ಲ. ಆದಾಗ್ಯೂ, ಇಸ್ರೇಲ್‌ಮೊಸಾದ್‌ನ ಈ ಗುಪ್ತಚರ ಅಧಿಕಾರಿಯನ್ನು ಇಂದು ಸ್ಮರಿಸಿಕೊಂಡಿದೆ. ಇಟಾಲಿಯನ್ ಗುಪ್ತಚರ ಇಲಾಖೆಯ ಇತರ ಇಬ್ಬರು ಸದಸ್ಯರು ಮತ್ತು ಹಡಗಿನ ಕ್ಯಾಪ್ಟನ್‌ನ ಪತ್ನಿಯೊಂದಿಗೆ, ಮೊಸಾದ್‌ನ ಏಜೆಂಟ್ M ಅವರನ್ನು ಕೊಲ್ಲಲಾಗಿತ್ತು ಎಂದು ನಿರ್ದೇಶಕ ಡೇವಿಡ್‌ಬಾರ್ನಿಯಾ ತಿಳಿಸಿದ್ದಾರೆ. ಈ ಏಜೆಂಟ್‌ನನ್ನು ಅಶ್ಕೆಲೋನ್‌ನಲ್ಲಿ ಸಮಾಧಿ ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

## ಬಂಗಾಳದಲ್ಲಿ ಇಂದು ಮೊದಲ ಹಂತದ ಮತದಾನ : ಭಾರಿ ಭದ್ರತೆ

**ಕೋಲ್ಕತ್ತಾ:** ಭ್ರಷ್ಟಾಚಾರ ಮತ್ತು ಉದ್ಯೋಗಗಳಂತಹ ವಿಷಯಗಳ ಗುರುತು, ಪೌರತ್ವ ಮತ್ತು ಮತದಾರರ ಪಟ್ಟಿಯ ಹೆಸರುಗಳು ಅಳಿಸಿಹಾಕಿರುವ ವಿವಾದಗಳ ಮಧ್ಯೆ, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನ ನಾಳೆ ನಡೆಯಲಿದೆ.ಮೊದಲ ಹಂತದಲ್ಲಿ ರಾಜ್ಯದ 294 ರಲ್ಲಿ 152 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಉತ್ತರ ಬಂಗಾಳದ ಎಂಟು ಜಿಲ್ಲೆಗಳು 54 ಮತ್ತು ಮುರ್ಷಿದಾಬಾದ್, ನಾಡಿಯಾ, ಬಿರ್ಭುಮ್, ಹೂಗ್ಲಿಯಲ್ಲಿ ಹಲವಾರು ಸ್ಥಾನಗಳು. ಬಿಜೆಪಿ ಇನ್ನೂ ಉತ್ತರ ಬಂಗಾಳವನ್ನು ಅಧಿಕಾರಕ್ಕೆ ಪ್ರಮುಖ ದ್ವಾರವಾಗಿ ಅವಲಂಬಿಸಬಹುದೇ ಅಥವಾ ಟಿಎಂಸಿ ಕಳೆದುಹೋದ ನೆಲವನ್ನು ಮರಳಿ ಪಡೆಯುತ್ತದೆ ಯಶಸ್ವಿಯಾಗಿದೆಯೇ ಎಂದು ಮೊದಲ ಹಂತದ ಚುನಾವಣೆ ನಿರ್ಧರಿಸಬಹುದು.

ಸುಮಾರು 1.75 ಕೋಟಿ ಮಹಿಳೆಯರು ಸೇರಿದಂತೆ 3.60 ಕೋಟಿಗೂ ಹೆಚ್ಚು ಮತದಾರರು ನಾಳೆ ತಮ್ಮ ಮತದಾನವನ್ನು ಚಲಾಯಿಸಲು ಅರ್ಹರಾಗಿದ್ದಾರೆ. ಚುನಾವಣಾ ಆಯೋಗವು ದಾಖಲೆಯ 2,450 ಕೇಂದ್ರ ಪಡೆಗಳ ಕಂಪನಿಗಳನ್ನು ನಿಯೋಜಿಸಿದೆ, 8,000 ಕ್ಕೂ ಹೆಚ್ಚು ಮತಗಟ್ಟೆಗಳನ್ನು ಹೆಚ್ಚು ಸೂಕ್ಷ್ಮವೆಂದು ಪರಿಗಣಿಸಲಾಗಿದೆ ಗುರುತಿಸಲಾಗಿದೆ.

ಬಿಜೆಪಿಗೆ, ಮೊದಲ ಹಂತವು ಉತ್ತರ ಬಂಗಾಳಕ್ಕೆ




ಸಮಾನಾರ್ಥಕವಾಗಿದೆ. 2019 ರ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿಯ ಬೆಳವಣಿಗೆಗೆ ಕಾರಣವಾಯಿತು ಮತ್ತು 2021 ರ ವಿಧಾನಸಭಾ ಚುನಾವಣೆಯಲ್ಲಿ ಆಡಳಿತ ಪಕ್ಷದ ಪ್ರಮುಖ ಪ್ರತಿಸ್ಪರ್ಧಿಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡಿದ ಪ್ರದೇಶದಲ್ಲಿ ಪ್ರಾಬಲ್ಯವನ್ನು ಉಳಿಸಿಕೊಳ್ಳುವುದರ ಮೇಲೆ ಟಿಎಂಸಿ ರಾಜ್ಯಾದ್ಯಂತ ಸವಾಲು ಹಾಕುತ್ತದೆ ಪಕ್ಷದ ಆಶಯಗಳು ಅವಲಂಬಿತವಾಗಿವೆ.

2021ರಲ್ಲಿ ಬಿಜೆಪಿ 152 ಸ್ಥಾನಗಳಲ್ಲಿ 59 ಸ್ಥಾನಗಳನ್ನು ಗೆದ್ದಿತ್ತು, ಟಿಎಂಸಿ 93 ಸ್ಥಾನಗಳನ್ನು ಗಳಿಸಿತ್ತು. ಆದ್ದರಿಂದ, ಕೇಸರಿ ಪಾಳಯಕ್ಕೆ, ಈ ಹಂತವು ದಕ್ಷಿಣ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರ ಶಾಶ್ವತ ಶಕ್ತಿಯನ್ನು ಸರಿದೂಗಿಸಲು ಉತ್ತಮವಾಗಿದೆ ಅವಕಾಶವಾಗಿದೆ.

ಆಡಳಿತ ಪಕ್ಷಕ್ಕೆ, ಉತ್ತರದಲ್ಲಿ ಬಿಜೆಪಿ ಅಲೆಯನ್ನು ತಡೆಯುವುದು ಸ್ಪರ್ಧೆಯ ಉಳಿದ ಭಾಗಕ್ಕೆ ರಾಜಕೀಯ ಸ್ಥಿತಿಯನ್ನು ರೂಪಿಸುವಲ್ಲಿ ನಿರ್ಣಾಯಕವಾಗಿದೆ. ಜಲ್ಪೈಗುರಿ ಮತ್ತು ಅಲಿಪುರ್ದೂರ್‌ನ ಚಹಾ ತೋಟಗಳು, ಡಾರ್ಜಿಲಿಂಗ್ ಮತ್ತು ಕಾಲಿಂಪಾಂಗ್‌ನ ಬೆಟ್ಟಗಳು, ಕೂಚ್ ಬೆಹಾರ್‌ನ ರಾಜ್‌ಬನ್ಶಿ ಬೆಲ್ಟ್, ಮಾಲ್ಡಾ, ಉತ್ತರ ದಿನಾಜ್‌ಪುರದ ಗಡಿ ಜಿಲ್ಲೆಗಳು ಮತ್ತು ಅಲ್ಪಸಂಖ್ಯಾತರ ಪ್ರಾಬಲ್ಯದ ಮುರ್ಷಿದಾಬಾದ್, ನಾಡಿಯಾದ ಪಾಕೆಟ್‌ಗಳಲ್ಲಿ ಈ ಹಂತ ತೀವ್ರವಾಗಿ ವಿಭಿನ್ನ ಭೂದೃಶ್ಯಗಳಲ್ಲಿ ಹೋರಾಡುತ್ತಿದೆ.


ಆದಾಗ್ಯೂ, ಈ ವ್ಯತ್ಯಾಸಗಳು ಯಾವುದಾದರೂ, ಪ್ರತಿ ಜಿಲ್ಲೆಯಲ್ಲೂ ಒಂದು ವಿಷಯವು ಕರಿನೆರಳು ಬೀರಿದೆ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಸಮಯದಲ್ಲಿ ರಾಜ್ಯದ ಮತದಾರರ ಪಟ್ಟಿಯಿಂದ 91 ಲಕ್ಷಕ್ಕೂ ಹೆಚ್ಚು ಹೆಸರುಗಳನ್ನು ಅಳಿಸಲಾಗಿದೆ.

ಸ್ಥಳೀಯ ಮತದಾರರು ಸಂಖ್ಯೆ ಸುಮಾರು ಶೇ. 12ರಷ್ಟು ಕುಗ್ಗಿದೆ. ಮುರ್ಷಿದಾಬಾದ್‌ನಲ್ಲಿ ಮಾತ್ರ, 7.48 ಲಕ್ಷಕ್ಕೂ ಹೆಚ್ಚು ಹೆಸರುಗಳನ್ನು ತೆಗೆದುಹಾಕಲಾಗಿದೆ. ನಾಡಿಯಾದಲ್ಲಿ 4.85 ಲಕ್ಷಕ್ಕೂ ಹೆಚ್ಚು, ಮಾಲ್ಡಾದಲ್ಲಿ 4.59 ಲಕ್ಷ, ಉತ್ತರ ದಿನಾಜ್‌ಪುರದಲ್ಲಿ 3.63 ಲಕ್ಷ, ಕೂಚ್ ಬೆಹಾರ್‌ನಲ್ಲಿ 2.42 ಲಕ್ಷಕ್ಕೂ ಹೆಚ್ಚು ಹೆಸರುಗಳನ್ನು ಅಳಿಸಲಾಗಿದೆ.

## ಭಯೋತ್ಪಾದನೆಗೆ ತಲೆ ಬಾಗಲ್ಲ : ಮೋದಿ ಗುಡುಗು

**ನವದೆಹಲಿ:** ಪೆಹಲ್ಗಾಮ್ ಭಯೋತ್ಪಾದಕ ದಾಳಿಯ ಮೊದಲ ವರ್ಷದ ಕರಾಳ ದಿನದಂದು, ಪ್ರಧಾನಿ ನರೇಂದ್ರ ಮೋದಿ ಅವರು, ಭಾರತ ಯಾವುದೇ ರೀತಿಯ ಭಯೋತ್ಪಾದನೆಗೆ ಎಂದಿಗೂ ತಲೆಬಾಗುವುದಿಲ್ಲ ಮತ್ತು ಭಯೋತ್ಪಾ ಕರ ಘೋರ ಯೋಜನೆಗಳು ಎಂದಿಗೂ ಯಶಸ್ವಿಯಾಗು ವುದಿಲ್ಲ ಎಂದು ಪ್ರತಿಪಾದಿಸಿದರು. ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಲಷ್ಕರ್-ಎ-ತೈಬಾ ಕಳೆದ ವರ್ಷ ಈ ದಿನದಂದು ಜಮ್ಮು ಮತ್ತು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ದಾಳಿ ನಡೆಸಿ 26 ಮುಗ್ಧ ಜನರನ್ನು ಕೊಂದಿತು, ಹೆಚ್ಚಾಗಿ ಭಾರತದಾದ್ಯಂತದ ಪ್ರವಾಸಿಗರು.ಕಳೆದ ವರ್ಷ ಈ ದಿನದಂದು ನಡೆದ ಭೀಕರ ಪೆಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಬಲಿಯಾದ ಮುಗ್ಧ ಜೀವಗಳನ್ನು ನೆನಪಿಸಿಕೊಳ್ಳುತ್ತಿದ್ದೇನೆ. ಅವರನ್ನು ಎಂದಿಗೂ ಮರೆಯಲಾಗುವುದಿಲ್ಲ ಎಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಈ ನಷ್ಟವನ್ನು ನಿಭಾಯಿಸುತ್ತಿರುವ ದುಃಖಿತ ಕುಟುಂಬಗಳೊಂದಿಗೆ ತಮ್ಮ ಆಲೋಚನೆಗಳು ಸಹ ಇವೆ ಎಂದು ಪ್ರಧಾನಿ ಹೇಳಿದರು.ಒಂದು ರಾಷ್ಟ್ರವಾಗಿ, ನಾವು ದುಃಖ ಮತ್ತು ದೃಢಸಂಕಲ್ಪದಲ್ಲಿ ಒಗ್ಗಟ್ಟಿನಿಂದ ನಿಂತಿದ್ದೇವೆ. ಭಾರತ ಯಾವುದೇ ರೀತಿಯ ಭಯೋತ್ಪಾದನೆಗೆ ಎಂದಿಗೂ ತಲೆಬಾಗುವುದಿಲ್ಲ ಎಂದರು. ಭಯೋತ್ಪಾದಕರ ಘೋರ ಯೋಜನೆಗಳು ಎಂದಿಗೂ ಯಶಸ್ವಿಯಾಗುವುದಿಲ್ಲ ಎಂದು ಅವರು ಹೇಳಿದರು.

ಪೆಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಭಾರತವು ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಎಂಬ ಪ್ರತೀಕಾರದ ಮಿಲಿಟರಿ ದಾಳಿಯನ್ನು ನಡೆಸಿತು, ಇದರಲ್ಲಿ ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನ, ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಮಿಲಿಟರಿ ಭಯೋತ್ಪಾದಕ ಮೂಲಸೌಕರ್ಯಗಳನ್ನು ನಾಶಪಡಿಸಿದವು.



## ಪ್ರಧಾನಿಯನ್ನು 'ಟೆರರಿಸ್ಟ್' ಎಂದ ಖರ್ಗೆ ಕ್ಷಮೆ ಯಾಚನೆಗೆ ಬಿಜೆಪಿ ಆಗ್ರಹ

**ಹೈದರಾಬಾದ್:** ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಎಐಸಿಸಿ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರ ಭಯೋತ್ಪಾದಕ ಹೇಳಿಕೆಗೆ ಕೇಂದ್ರ ಕಲ್ಲಿದ್ದಲು ಸಚಿವ ಜಿ ಕಿಶನ್ ರೆಡ್ಡಿ ಅವರು, ಇಂತಹ ದ್ವೇಷಭರಿತ ಟೀಕೆಗಳನ್ನು ಕಾಂಗ್ರೆಸ್ ಹೈಕಮಾಂಡ್ ಮತ್ತು ಅದರ ನಾಯಕ ರಾಹುಲ್ ಗಾಂಧಿ ನಿರ್ದೇಶಿಸಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ. ಖರ್ಗೆ ತಮ್ಮ ಹೇಳಿಕೆಗಳಿಗೆ ದೇಶದ ಜನರಲ್ಲಿ ಬೇಷರತ್ತಾಗಿ ಕ್ಷಮೆಯಾಚಿಸಬೇಕು ಎಂದು ಅವರು ಒತ್ತಾಯಿಸಿದರು. ಪ್ರಜಾಪ್ರಭುತ್ವದಿಂದ ಆಯ್ಕೆಯಾದ ಪ್ರಧಾನಿಯನ್ನು ಭಯೋತ್ಪಾದಕ ಎಂದು ಕರೆಯುವುದು ಕೇವಲ ಬೇಜವಾಬ್ದಾರಿಯಲ್ಲ, ಆದರೆ ಉದ್ದೇಶಪೂರ್ವಕ ಮತ್ತು ಅವರ ಮೇಲೆ ನಂಬಿಕೆ ಇಟ್ಟಿರುವ 1.47 ಶತಕೋಟಿ ದೇಶವಾಸಿಗಳಿಗೆ ಮಾಡಿದ ಅವಮಾನ ಎಂದಿದ್ದಾರೆ.

ಈ ರೀತಿಯ ಭಾಷೆ ರಾಜಕೀಯ ಚರ್ಚೆಯನ್ನು ಕೆಳಮಟ್ಟಕ್ಕೆ ಇಳಿಸುತ್ತದೆ ಎಂದು ಅವರು ಹೇಳಿದರು. ಕಾಂಗ್ರೆಸ್, ಅದರ ನಾಯಕರು ದೇಶದ ಚುನಾಯಿತ, ಪ್ರೀತಿಯ ಪ್ರಧಾನಿಯನ್ನು ಅವಮಾನಿಸುತ್ತಿರುವುದು ಇದೇ ಮೊದಲಲ್ಲ. ಕಾಂಗ್ರೆಸ್‌ನ ಅತ್ಯುನ್ನತ ಶ್ರೇಣಿ, ಅದರ ನಾಯಕ ರಾಹುಲ್ ಗಾಂಧಿಯಿಂದ ಪ್ರಧಾನಿ ಮೋದಿ ಅವರ ಮೇಲಿನ ದ್ವೇಷಭರಿತ ಟೀಕೆಗಳು ಕೆಳಮಟ್ಟದ್ದೇ? ಎಂದು ರೆಡ್ಡಿ ಎಕ್ಸ್ ಪೋಸ್ಟ್‌ನಲ್ಲಿ ಕೇಳಿದ್ದಾರೆ.

ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆಯುವುದು ರಾಜಕೀಯವಲ್ಲ, ಬದಲಾಗಿ ಸೋತ ಮನಸ್ಥಿತಿಯ ಹತಾಶೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ (ಗೃಹ) ಬಂಡಿ ಸಂಜಯ್‌ಕುಮಾರ್ ಹೇಳಿದರು.ಎಐಸಿಸಿ ಅಧ್ಯಕ್ಷರ ಹೇಳಿಕೆಗಳಿಗೆ ಕಾಂಗ್ರೆಸ್ ತಕ್ಷಣ ಕ್ಷಮೆಯಾಚಿಸಬೇಕು ಎಂದು ಅವರು ಹೇಳಿದರು. ಕಾಂಗ್ರೆಸ್ ತನ್ನ ಸಮತೋಲನವನ್ನು ಕಳೆದುಕೊಂಡಿದೆ ಎಂದು ಹೇಳಿದ ಕುಮಾರ್‌ಅವರು, ಈ ಹೇಳಿಕೆಗಳು ಕೇವಲ ರಾಜಕೀಯ ದಾಳಿಯಲ್ಲ, ಬದಲಾಗಿ ಭಾರತೀಯ ಪ್ರಜಾಪ್ರಭುತ್ವದ ಆತ್ಮದ ಮೇಲಿನ ದಾಳಿ ಎಂದು ಹೇಳಿದರು. ಭಯೋತ್ಪಾದಕರಿಗಾಗಿ ಕಣ್ಣೀರು ಹಾಕುತ್ತಿದ್ದ, ನಮ್ಮ ಸೈನ್ಯದ ಶೌರ್ಯವನ್ನು ಪ್ರಶ್ನಿಸಿದ ಅದೇ ಕಾಂಗ್ರೆಸ್ ಇದೇ ಎಂದು ಅವರು ಹೇಳಿದರು. ದಶಕಗಳ ಕಾಲ, ನೀವು ಭಯೋತ್ಪಾದನೆಯನ್ನು ಸಮಾಧಾನಪಡಿಸುವ ನೆಪದಲ್ಲಿ ಈ ದೇಶವನ್ನು ರಕ್ತಸಿಕ್ತಗೊಳಿಸಲು ಬಿಟ್ಟಿದ್ದಿರಿ. ಇಂದು, ಪ್ರಧಾನಿ ಮೋದಿ ಅವರು ಆ ಮೃದು-ಭಯೋತ್ಪಾದನಾ ಯುಗವನ್ನು ಕೊನೆಗೊಳಿಸಿದ್ದರಿಂದ, ನೀವು ಹತಾಶೆಗೊಂಡಿದ್ದೀರಿ ಎಂದು ಅವರು ಎಕ್ಸ್ ಮಾಡಿದ್ದಾರೆ.



## ಪೆಹಲ್ಗಾಮ್ ಕಹಿ ನೆನಪಿಗೆ ಒಂದು ವರ್ಷ

**ನವದೆಹಲಿ:** ಕಾಶೀರ ಪ್ರವಾಸಕ್ಕೆ ಬಂದಿದ್ದ ಪ್ರವಾಸಿಗರಲ್ಲಿ ಹಿಂದೂಗಳನ್ನು ಹುಡುಕಿ ಹುಡುಕಿ ಹತ್ಯೆ ಮಾಡಿದ ಪೆಹಲ್ಗಾಮ್ ಭಯೋತ್ಪಾದಕ ದಾಳಿ ನಡೆದ ಕಹಿ ಘಟನೆಗೆ ಒಂದು ವರ್ಷ ಪೂರ್ಣಗೊಂಡಿದೆ. ಘೋರ ಘಟನೆ ನಡೆದು ಒಂದು ವರ್ಷವಾದರೂ ದಾಳಿಯಲ್ಲಿ ತಮ್ಮವರನ್ನು ಕಳೆದುಕೊಂಡ ಕುಟುಂಬದವರ ನೋವು, ಕಣ್ಣೀರು ಇನ್ನು ಹಸಿಯಾಗಿಯೇ ಉಳಿದಿದೆ. ಈ ಕಹಿ ಘಟನೆಗೆ ಉತ್ತರವಾಗಿ ಭಾರತ ಕೈಗೊಂಡ ಆಪರೇಷನ್ ಸಿಂಧೂರ, ಆಪರೇಷನ್‌ಮಹಾದೇವ ಮೂಲಕ ಭಾರತೀಯ ಸೇನೆಯು ತೋರಿದ ಪರಾಕ್ರಮ. ಪ್ರತೀಕಾರದ ಕುದಿಯಲ್ಲಿ ಪೆಹಲ್ಗಾಮ್ ದಾಳಿಕೋರರನ್ನು ಹುಡುಕಿ ಸದೆಬಡಿದ ಚಿತ್ರಣಗಳು ಜನರ ಸ್ಮೃತಿಪಟಲದಲ್ಲಿ ಇನ್ನು ಹಸಿರಾಗಿದೆ.

ಜಮ್ಮು-ಕಾಶ್ಮೀರದ ಪೆಹಲ್ಗಾಮ್ ಬಳಿಯ ಬೈಸರನ್ ಎಂಬ ಸುಂದರ ಪ್ರವಾಸಿ ತಾಣದಲ್ಲಿ ಪ್ರವಾಸಿಗರು ಸಂಭ್ರಮದಲ್ಲಿದ್ದಾಗ ಇದ್ದಕ್ಕಿದ್ದಂತೆ, ಏಕಾಏಕಿ ದಾಳಿ ನಡೆಸಿದ ಉಗ್ರರ ಗುಂಡಿಗೆ 26 ಮಂದಿ ಪ್ರಾಣ ಕಳೆದುಕೊಂಡಿದ್ದರು.

ಪಾಕ್ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್-ಎ-ತೊಯ್ಬಾ ಕಮಾಂಡರ್ ಸಾಜಿದ್‌ಜಾಟ್



ಸೇರಿದಂತೆ ಏಳು ಆರೋಪಿಗಳನ್ನು ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಯಿತು. ದಾಳಿಯ ಹಿಂದಿನ ಪಾಕ್ ಪಿತೂರಿಯನ್ನು ಸಹ ಎನ್‌ಐಎ ಬಹಿರಂಗಪಡಿಸಿತು. ದಾಳಿಯ ಬೆನ್ನಲ್ಲೇ ಭದ್ರತಾ ಪಡೆಗಳು ಸ್ಥಳಕ್ಕೆ ಧಾವಿಸಿ ಪ್ರದೇಶವನ್ನು ಸುರಕ್ಷಿತಗೊಳಿಸಿದವು.

ತುರ್ತು ಸೇವೆಗಳನ್ನು ಸಕ್ರಿಯಗೊಳಿಸಲಾಯಿತು. ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಸಾಗಿಸಲಾಯಿತು. ಜನರು ಸುರಕ್ಷಿತ ಸ್ಥಳಕ್ಕೆ ತಲುಪಲು ಸಹಾಯ ಮಾಡುವಲ್ಲಿ ಸ್ಥಳೀಯ ನಿವಾಸಿಗಳು, ಪೋನಿ ಹ್ಯಾಂಡ್ಲರ್‌ಗಳು ಮತ್ತು ಮಾರ್ಗದರ್ಶಕರು ನಿರ್ಣಾಯಕ ಪಾತ್ರ ವಹಿಸಿದರು. ಅವರ ತ್ವರಿತ ಪ್ರತಿಕ್ರಿಯೆಯು ಇನ್ನೂ ಹೆಚ್ಚಿನ ಸಾವು-ನೋವುಗಳನ್ನು ತಡೆಯಲು ಸಹಾಯ ಮಾಡಿತು. ಈ ದಾಳಿಯು ಇಡೀ ರಾಷ್ಟ್ರವನ್ನು ಆಘಾತಗೊಳಿಸಿತು.

ಇತ್ತೀಚಿನ ವರ್ಷಗಳಲ್ಲಿ ಚೇತರಿಸಿಕೊಳ್ಳುತ್ತಿದ್ದ ಕಾಶ್ಮೀರದ ಪ್ರವಾಸೋದ್ಯಮ ಕ್ಷೇತ್ರದ ಮೇಲೂ ಇದು ಬಲವಾದ ಪರಿಣಾಮ ಬೀರಿತು.

**ಪ್ರತಿಕಾರ:** ಪೆಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯಿಂದ ಅಮಾಯಕರ ಪ್ರಾಣಪಕ್ಷಿ ಹಾರಿಹೋಗಿತ್ತು. ಈ ದಾಳಿಗೆ ಭಾರತವು ಪ್ರತೀಕಾರದ ಸಂಕಲ್ಪ ಮಾಡಿತು. ಭಾರತೀಯ ಸೇನೆಯು ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸ್ಲಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿತು. ಭಾರತ ಮತ್ತು ಪಾಕಿಸ್ತಾನ ನಡುವೆ 2025ರ ಮೇ 7 ರಂದು ಸಂಘರ್ಷ ಪ್ರಾರಂಭವಾಯಿತು.


**ಆಪರೇಷನ್ ಮಹಾದೇವ:** ಪೆಹಲ್ಗಾಮ್‌ನಲ್ಲಿ 26 ಪ್ರವಾಸಿಗರನ್ನು ಹತ್ಯೆ ಮಾಡಿ ಎಸ್ಕೇಪ್ ಆಗಿದ್ದ ಉಗ್ರರನ್ನು ಸದೆಬಡಿಯಲು ಭಾರತ ಕೈಗೊಂಡ ಕಾರ್ಯಾಚರಣೆಯೇ ಆಪರೇಷನ್ ಮಹಾದೇವ. ಜಮ್ಮು ಮತ್ತು ಕಾಶ್ಮೀರದ ಶ್ರೀನಗರದ ಡಚಿಗಾಮ್ ಅರಣ್ಯದಲ್ಲಿ ಭದ್ರತಾ ಪಡೆಗಳು ಕಾರ್ಯಾಚರಣೆ ನಡೆಸಿ, ಪೆಹಲ್ಗಾಮ್ ದಾಳಿಯ ರೂವಾರಿಗಳಾದ ಮೂವರು ಭಯೋತ್ಪಾದಕರನ್ನು ಹೊಸಕಿ ಹಾಕಿದ್ದವು.

## ಹೊರ್ಮುಜ್ ಜಲಸಂಧಿಯಲ್ಲಿನ ಸದ್ಯದ ಪರಿಸ್ಥಿತಿ ಹೇಗಿದೆ?

### ಹೊರ್ಮುಜ್ ನಿಂದ ಇರಾನ್‌ಗೆ ದಿನಕ್ಕೆ 500 ಮಿಲಿಯನ್ ಆದಾಯ ಬರ್ತಿದೆ: ಜಲಸಂಧಿ ದಿಗ್ಬಂಧನಕ್ಕೆ ಟ್ರಂಪ್ ಹೊಸ ಕಾರಣವಿದು

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿನ ಅಮೆರಿಕಾ-ಇರಾನ್ ನಡುವಿನ ಯುದ್ಧಕ್ಕೆ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿರುವುದಾಗಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ್ದು, ಇದರ ಜೊತೆಗೆ ಹೊರ್ಮುಜ್‌ನಲ್ಲಿನ ಯುಎಸ್ ನೌಕಾಪಡೆಯ ದಿಗ್ಬಂಧನ ಮುಂದುವರೆಯಲಿದೆ ಎಂದು ತಿಳಿಸಿದ್ದಾರೆ. ಇದಕ್ಕೆ ಇದೀಗ ಹೊಸ ಕಾರಣ ನೀಡಿರುವ ಟ್ರಂಪ್ ಜಲಸಂಧಿ ಸ್ಥಗಿತ ಇರಾನ್‌ಗೆ ಭಾರಿ ನಷ್ಟವನ್ನುಂಟು ಮಾಡಲಿದೆ ಎಂದು ತಿಳಿಸಿದ್ದಾರೆ.

**ಹೊರ್ಮುಜ್‌ನಲ್ಲಿ ಇರಾನ್ ದಿನಕ್ಕೆ 500 ಮಿಲಿಯನ್ ಡಾಲರ್ ಗಳಿಸ್ತಿದ್ಯಾ?:** ಇರಾನ್ ಯುದ್ಧಕ್ಕೆ ಕದನವಿರಾಮ ವಿಸ್ತರಿಸಿದ ಬೆನ್ನಲ್ಲೇ, ತಮ್ಮ ಟ್ರುತ್ ಸೋಶಿಯಲ್ ಮೂಲಕ ಹೊರ್ಮುಜ್ ಜಲಸಂಧಿಯಲ್ಲಿ ಯುಎಸ್‌ನ ಸಂಪೂರ್ಣ ದಿಗ್ಬಂಧನ ಮುಂದುವರೆಯುವುದಾಗಿ ಟ್ರಂಪ್ ತಿಳಿಸಿದ್ದಾರೆ. ಇರಾನ್ ಹೊರ್ಮುಜ್ ಜಲಸಂಧಿಯನ್ನು ಮುಚ್ಚಲು ಬಯಸುವುದಿಲ್ಲ, ಬದಲಾಗಿ ಅದನ್ನು ತೆರೆದಿಡಲು ಬಯಸುತ್ತಾರೆ. ಏಕೆಂದರೆ ಇದರಿಂದ ಅವರು ದಿನಕ್ಕೆ 500 ಮಿಲಿಯನ್ ಡಾಲರ್ ಗಳಿಸಬಹುದು. ಆದರೆ ಆದ್ದರಿಂದ, ಅದನ್ನು ಮುಚ್ಚಿದರೆ ಅವರಿಗೆ ನಷ್ಟವಾಗಲಿದೆ.



ಆದರೆ, ನಾವು ಈಗಾಗಲೇ ಜಲಸಂಧಿಯನ್ನು ಸಂಪೂರ್ಣವಾಗಿ ನಿರ್ಬಂಧಿಸಿದ್ದು, ಇದಕ್ಕಾಗಿಯೇ ತಮ್ಮ ಗೌರವವನ್ನು ಉಳಿಸಿಕೊಳ್ಳಲು ಅವರು ಸಹ ಇರಾನ್‌ಅದನ್ನು ಮುಚ್ಚಬೇಕೆಂದು ಹೇಳುತ್ತಿದೆ ಎಂದು ಟೀಕಿಸಿದ್ದಾರೆ.

**ಹೊರ್ಮುಜ್ ಜಲಸಂಧಿ ಬಿಕ್ಕಟ್ಟು:** ಹೊರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ ನಡುವೆ ಟ್ರಂಪ್ ಈ ಹೇಳಿಕೆಗಳು ಬಂದಿದ್ದು, ಈಗಾಗಲೇ ಇರಾನ್ ಜಲಸಂಧಿಯಲ್ಲಿ ಯುಎಸ್ ನಿರ್ಬಂಧವನ್ನು ವಿರೋಧಿಸುತ್ತಿದೆ. ಅಲ್ಲದೆ, ಯುದ್ಧಕ್ಕೂ ಮೊದಲು ದಿನಕ್ಕೆ ಸುಮಾರು 140 ಹಡಗುಗಳು ಜಲಸಂಧಿಯ ಹಾದು ಹೋಗುತ್ತಿದ್ದು, ಸಂಘರ್ಷ ಆರಂಭವಾದಾಗಿನಿಂದ ಜಲಸಂಧಿಯ ಮೂಲಕ ವಾಣಿಜ್ಯ ಸಂಚಾರವು ಸಾಮಾನ್ಯ ಮಟ್ಟಕ್ಕಿಂತ ತೀರಾ ಕಡಿಮೆಯಾಗಿದ್ದು, ಕಳೆದ 24ಗಂಟೆಗಳಲ್ಲಿ ಕೇವಲ 3 ಹಡಗುಗಳು ಮಾತ್ರ ಸಂಚಾರ ಮಾಡಿವೆ ಎಂದು ಹಡಗು-ಟ್ರ್ಯಾಕಿಂಗ್ ದತ್ತಾಂಶ ವರದಿ ಮಾಡಿದೆ. ಅಷ್ಟೇ ಅಲ್ಲದೆ, ಜಲಸಂಧಿಯಲ್ಲಿ ನೂರಾರು ಹಡಗುಗಳು ಮತ್ತು ಸುಮಾರು 20,000 ನಾವಿಕರು ಕೊಲ್ಲಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂಬ ವರದಿಯಿದೆ. ಅಷ್ಟೇ ಅಲ್ಲದೆ, ಸದ್ಯ ಹೊರ್ಮುಜ್ ನಿಯಂತ್ರಣಕ್ಕಾಗಿ ಅಮೆರಿಕಾ-ಇರಾನ್ ನಡುವೆ ಸಮರ ನಡೆಯುತ್ತಿದ್ದು, ಇತ್ತ ಯುಎಸ್ ನೌಕಾಪಡೆ ಇರಾನಿ ಹಡಗುಗಳ ಮೇಲೆ ದಾಳಿ ಮಾಡುತ್ತಿದ್ದರೆ, IRGC ವಾಣಿಜ್ಯ ಕಂಟೇನರ್‌ಗಳ ಮೇಲೆ ದಾಳಿ ನಡೆಸುತ್ತಿದ್ದು, ಪರಿಸ್ಥಿತಿ ಮತ್ತಷ್ಟು ಉಲ್ಬಣವಾಗುಂತೆ ಮಾಡುತ್ತಿವೆ.

> ಇರಾನ್ ನೊಂದಿಗಿನ ಯುದ್ಧಕ್ಕೆ ಡೊನಾಲ್ಡ್ ಟ್ರಂಪ್ ಕದನವಿರಾಮ ವಿಸ್ತರಣೆಯನ್ನೇನೊ ಘೋಷಿಸಿದ್ದಾರೆ. ಆದರೆ, ಹೊರ್ಮುಜ್ ಜಲಸಂಧಿಯಲ್ಲಿ ದಿಗ್ಬಂಧನವನ್ನು ಮುಂದುವರೆಸಿದ್ದು, ಇರಾನ್ ಜಲಸಂಧಿಯಲ್ಲಿ ದಿನಕ್ಕೆ 500 ಮಿಲಿಯನ್ ಡಾಲರ್ ಗಳಿಸುತ್ತಿದೆ. ಆದರೆ, ಈ ಸ್ಥಗಿತದಿಂದಾಗಿ ಅವರಿಗೆ ನಷ್ಟವಾಗುತ್ತಿದೆ. ಹಾಗಾಗಿಯೇ ಅವರು ಜಲಸಂಧಿಯ ತೆರಯಲು ಒತ್ತಾಯಿಸುತ್ತಿದ್ದಾರೆ, ಆದಾಗ್ಯೂ, ಅಮೆರಿಕಾ ಇದಕ್ಕೆ ಒಪ್ಪಿಕೊಂಡು ಇರಾನ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.
> -ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

### ಹೊರ್ಮುಜ್ ತೆರೆದರೆ ಇರಾನ್ ಒಪ್ಪಂದ ಮಾಡಿಕೊಳ್ಳಲ್ಲ?

ಹೊರ್ಮುಜ್ ತೆರೆಯುವಂತೆ ಇರಾನ್‌ಒತ್ತಾಯವನ್ನು ಕೆಲವರು ತಮ್ಮ ಮುಂದಿಟ್ಟಿರುವುದಾಗಿ ಹೇಳಿರುವ ಟ್ರಂಪ್ ನಾಲ್ಕು ದಿನಗಳ ಹಿಂದೆ ಕೆಲವು ಜನರು ನನ್ನನ್ನು ಸಂಪರ್ಕಿಸಿ, ಸರ್, ಇರಾನ್ ಜಲಸಂಧಿಯನ್ನು ತಕ್ಷಣವೇ ತೆರೆಯಲು ಬಯಸುತ್ತಿದೆ ಎಂದು ಹೇಳಿದ್ದಾರೆ. ಆದರೆ ನಾವು ಒಂದು ವೇಳೆ ಜಲಸಂಧಿ ತೆರೆದರೆ ಅವರ ನಾಯಕರು, ಉಳಿದಿರುವ ದೇಶವನ್ನು ಸ್ಫೋಟಿಸದ ಹೊರತು ನಾವು ಇರಾನ್ ಜೊತೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದರು.



# ಟಾಕ್ಸಿಕ್ ಆಕ್ಷನ್ ಸಾಮಾನ್ಯ ಆಗಿರಲ್ಲ

ಇದೀಗ ಯಶ್ ಅವರು ಸಿನಿಮಾದ ಆಕ್ಷನ್ ಬಗ್ಗೆ ಬಹಳ ಹೆಮ್ಮೆಯಿಂದ ಮಾತನಾಡಿದ್ದಾರೆ. 'ಟಾಕ್ಸಿಕ್' ಸಿನಿಮಾಕ್ಕೆ ಭಿನ್ನವಾದ ಆಕ್ಷನ್ ಬೇಕೆಂಬುದು ಯಶ್ ಅವರ ಬಯಕೆ ಆಗಿತ್ತಂತೆ. ಆಕ್ಷನ್ ಎಂಬುದು ಹಿಂದೆ ನೋಡಿದಂತೆ ಇರಬಾರದು, ಅಲ್ಲದೆ, ಪ್ರತಿ ಆಕ್ಷನ್ ದೃಶ್ಯವೂ ಸಹ ಹಿಂದಿನದ್ದಕ್ಕಿಂತಲೂ ಭಿನ್ನವಾಗಿರಬೇಕು ಎಂಬುದು ಅವರ ನಿಲುವಾಗಿತ್ತಂತೆ. ಇದೇ ಕಾರಣಕ್ಕೆ ಯಶ್ ಅವರು ಲಾಸ್ ಏಂಜಲ್ಸ್‌ಗೆ ಹೋಗಿ ಹಾಲಿವುಡ್‌ನ ಸ್ಟಾರ್ ಆಕ್ಷನ್ ಕೊರಿಯೋಗ್ರಾಫರ್ ಜೆಜೆ ಪೆರ್ರಿ ಅವರನ್ನು ಭೇಟಿ ಆದರಂತೆ. ಯಶ್, ಜೆಜೆ ಪೆರ್ರಿ ಅವರನ್ನು ಭೇಟಿ ಆದ ವಿಡಿಯೋಗಳು, ಫೋಟೊಗಳು ಕೆಲ ವರ್ಷದ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 'ಆಕ್ಷನ್ ಸೀನ್‌ಗಳನ್ನು ಆಗಿರುವುದಕ್ಕಿಂತಲೂ ಒಂದು ಹಂತ ಮೇಲಕ್ಕೆ ತೆಗೆದುಕೊಂಡು ಹೋಗಿ ತೋರಿಸಬೇಕು ಎಂಬುದು ನನ್ನ ಆಸೆ ಆಗಿತ್ತು. ಅದರಲ್ಲೂ ಗನ್ ಫೈಟ್‌ಗಳು ಅದ್ಭುತವಾಗಿ ಮೂಡಿ ಬರಬೇಕು ಎಂಬುದು ನನ್ನ ಆಸೆಯಾಗಿತ್ತು. ಹಾಗಾಗಿ ನಾನು ಜೆಜೆ ಪೆರ್ರಿಯನ್ನು ಭೇಟಿ ಮಾಡಿದೆ. ಜೆಜೆ ಪೆರ್ರಿ, ಅದ್ಭುತ ವ್ಯಕ್ತಿ, ಅವರು ನನ್ನೊಟ್ಟಿಗೆ ಸಾಕಷ್ಟು ಸಮಯ ಕಳೆದರು. ನನ್ನ ಬಾಡಿ ಲಾಂಗ್‌ವೇಜ್ ಅನ್ನು ಅಭ್ಯಾಸ ಮಾಡಿದರು. ಅದ್ಭುತವಾದ ಆಕ್ಷನ್ ದೃಶ್ಯಗಳನ್ನು ಅವರು ಕೊಟ್ಟಿದ್ದಾರೆ' ಎಂದಿದ್ದಾರೆ ಯಶ್. 'ಗನ್ ಫೈಟ್ ಅಂತೂ ಅದ್ಭುತವಾಗಿವೆ. ಅವರು ಅದನ್ನು 'ಗನ್‌ಫು' ಎಂದು ಕರೆಯುತ್ತಾರೆ. ಒಂದು ರೀತಿ ಕುಂಫು ಜೊತೆಗೆ ಗನ್ ಫೈಟಿಂಗ್ ಸೇರಿಸಿದ್ದಾರೆ. 'ಜಾನ್ ವಿಕ್'ನ ಆಕ್ಷನ್ ನನಗೆ ಬಹಳ ಇಷ್ಟವಾಗಿತ್ತು. ಜೆಜೆ ಪೆರ್ರಿ, 'ಟಾಕ್ಸಿಕ್'ಗೂ ಸಹ ಅದ್ಭುತವಾದ ಆಕ್ಷನ್ ದೃಶ್ಯಗಳನ್ನು ನೀಡಿದ್ದಾರೆ. ಸಿನಿಮಾದಲ್ಲಿ ಆಕ್ಷನ್ ಅತ್ಯದ್ಭುತವಾಗಿದೆ.

ಆದರೆ ಆಕ್ಷನ್ ದೃಶ್ಯಗಳು, ಕತೆಯಿಂದ ಪ್ರತ್ಯೇಕವಾಗಿ ನಿಲ್ಲದೆ, ಕತೆಯನ್ನು ಮುಂದಕ್ಕೆ ಕೊಂಡೊಯ್ಯುವ ಗುಣವನ್ನು ಹೊಂದಿರಲಿವೆ' ಎಂದಿದ್ದಾರೆ ಯಶ್. 'ಟಾಕ್ಸಿಕ್' ಸಿನಿಮಾವನ್ನು ಗೀತು ಮೋಹನ್‌ದಾಸ್ ನಿರ್ದೇಶನ ಮಾಡಿದ್ದು, ಮೇಲ್ನೋಟಕ್ಕೆ ಇದು ಗ್ಯಾಂಗ್‌ಸ್ಟರ್ ಸಿನಿಮಾ ಆದರೂ ಸಹ ಆಳದಲ್ಲಿ ಇದು ಮಾನವೀಯ ಅಂಶಗಳನ್ನು ಪ್ರತಿಪಾದಿಸುವ ಕತೆಯನ್ನು ಹೊಂದಿದೆಯಂತೆ. ಸಿನಿಮಾನಲ್ಲಿ ಯಶ್ ಜೊತೆಗೆ ನಯನತಾರಾ, ರುಕ್ಮಿಣಿ ವಸಂತ್, ಕಿಯಾರಾ ಅಡ್ವಾಣಿ, ಹುಮಾ ಖುರೇಷಿ ಮತ್ತು ತಾರಾ ಸುತಾರಿಯಾ ನಟಿಸಿದ್ದಾರೆ.



# ಅಭಿಮಾನಿಗಳಿಗೆ ಸಿಹಿ ಸುದ್ದಿ ಕೊಟ್ಟ ಧನುಷ್

ಧನುಷ್, ತಮಿಳು ಚಿತ್ರರಂಗದ ಸ್ಟಾರ್ ನಟರುಗಳಲ್ಲಿ ಒಬ್ಬರು. ಮಾತ್ರವಲ್ಲ, ತನ್ನ ವಾರಗೆಯ ಇತರೆ ನಟರಗಿಂತಲೂ ಭಿನ್ನ ರೀತಿಯ ಕತೆಯ ಆಯ್ಕೆಯಿಂದ ಮಾಸ್ ಪ್ರೇಕ್ಷಕರನ್ನು ಮಾತ್ರವಲ್ಲದೆ, ಗಂಭೀರ ಸಿನಿಮಾ ಪ್ರೇಮಿಗಳ ಫೇವರೇಟ್ ಸಹ ಆಗಿದ್ದಾರೆ. ಅವರ ನಟನೆಯ ಹಲವು ಸಿನಿಮಾಗಳು, ಕೇವಲ ಮಾಸ್ ಅಂಶಗಳನ್ನು ಮಾತ್ರ ಒಳಗೊಳ್ಳದೆ ಕತೆ, ಕ್ರಿಯಾತ್ಮಕತೆ ಹೊಂದಿರುವ ಹಲವು ಸಿನಿಮಾಗಳಲ್ಲಿ ನಟಿಸಿದ್ದು, ಅವುಗಳಲ್ಲಿ ಹಲವು ಸಿನಿಮಾಗಳು ಬ್ಲಾಕ್ ಬಸ್ಟರ್ ಆಗಿವೆ. ಅವುಗಳಲ್ಲಿ ಭಾರಿ ಜನಪ್ರಿಯತೆ ಪಡೆದಿರುವ ಸಿನಿಮಾ ಎಂದರೆ 'ವಡಾ ಚೆನ್ನೈ'. ಇದೀಗ ಈ ಸಿನಿಮಾದ ಎರಡನೇ ಭಾಗದ ಬಗ್ಗೆ ಸ್ವತಃ ಧನುಷ್ ಮಾತನಾಡಿದ್ದಾರೆ. ಧನುಷ್ ಅವರ ಯಾವುದಾದರೂ ಸಿನಿಮಾದ ಸೀಕ್ವೆಲ್‌ಗೆ ಭಾರಿ ಬೇಡಿಕೆ ಇದೆಯೆಂದರೆ ಅದು 'ವಡಾ ಚೆನ್ನೈ'ಗೆ. ವೆಟ್ರಿಮಾರನ್ ನಿರ್ದೇಶಿಸಿದ್ದ ಈ ಸಿನಿಮಾ ನಿಜ ಘಟನೆಗಳನ್ನು ಆಧರಿಸಿದ ಕಾಲ್ಪನಿಕ ಕತೆ ಒಳಗೊಂಡಿತ್ತು. ಸ್ಲಂ ಯುವಕನೊಬ್ಬ, ತನ್ನ ಮೆಚ್ಚಿನ ವ್ಯಕ್ತಿಯ ಕೊಂದ ಅವನ ಗೆಳೆಯರ ಮೇಲೆ ಸೇಡು ತೀರಿಸಿಕೊಳ್ಳುವ ಕತೆಯನ್ನು ಒಳಗೊಂಡಿತ್ತು 'ವಡ ಚೆನ್ನೈ'. ಈ ಸಿನಿಮಾದ ಸೀಕ್ವೆಲ್‌ಗಾಗಿ ಹಲವು ವರ್ಷಗಳಿಂದಲೂ ಅಭಿಮಾನಿಗಳು ಕೇಳುತ್ತಲೇ ಇದ್ದಾರೆ. ಇದೀಗ ಅಭಿಮಾನಿಗಳಿಗೆ ಗುಡ್ ನ್ಯೂಸ್ ನೀಡಿದ್ದಾರೆ ಧನುಷ್. ಇದೀಗ 'ಕಾರಾ' ಹೆಸರಿನ ಸಿನಿಮಾನಲ್ಲಿ ನಟಿಸಿರುವ ಧನುಷ್, ಆ ಸಿನಿಮಾದ ಪ್ರಚಾರದ ವೇಳೆ ಮಾತನಾಡಿ, 'ವಡಾ ಚೆನ್ನೈ 2 ಖಂಡಿತವಾಗಿಯೂ ಬರಲಿದೆ. ಇದು ನೀವು ಅಂದುಕೊಂಡಿದ್ದಕ್ಕಿಂತ ಹೆಚ್ಚು ಬೇಗನೆ ಮತ್ತು ಭರ್ಜರಿಯಾಗಿಯೇ ಬರುತ್ತದೆ' ಎಂದಿದ್ದಾರೆ. 'ಸಿನಿಮಾಕ್ಕೆ 'ರೈಸ್ ಆಫ್ ಅನ್ಬು' ಎಂದು ಟ್ಯಾಗ್‌ಲೈನ್ ಇಡಲಾಗಿದ್ದು, ಪ್ರೇಕ್ಷಕರು ಅಂದುಕೊಂಡಿರುವುದಕ್ಕಿಂತಲೂ ಬೇಗನೆ ಅದು ತೆರೆಗೆ ಬರಲಿದೆ' ಎಂದಿದ್ದಾರೆ.

# ಬಯಲಾಯ್ತು ಧುರಂಧರ್ ಗಾಯಕಿಯ ಕಳ್ಳಾಟ

ಖ್ಯಾತ ಪಂಜಾಬಿ ಗಾಯಕಿ ಜಾಸ್ಮಿನ್ ಸ್ಯಾಂಡ್ಲಸ್ ಸದ್ಯ ವಿವಾದವೊಂದರ ಕೇಂದ್ರಬಿಂದುವಾಗಿದ್ದಾರೆ. ಆದಿತ್ಯ ಧರ್ ನಿರ್ದೇಶನದ 'ಧುರಂಧರ್' ಸಿನಿಮಾದ ಹಾಡುಗಳ ಮೂಲಕ ಜಾಸ್ಮಿನ್ ಅವರು ಯಶಸ್ಸಿನ ಉತ್ತುಂಗದಲ್ಲಿದ್ದಾರೆ. ಆದರೆ ಈ ಗಾಯಕಿಯ ಇತ್ತೀಚಿನ ಲೈವ್ ಕಾನ್ಸರ್ಟ್ ವಿಡಿಯೋವೊಂದು ಸಾಮಾಜಿಕ ಜಾಲತಾಣದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ. ವೇದಿಕೆ ಮೇಲೆ ಲಿಪ್ ಸಿಂಕ್ ಮಾಡಿದ್ದು ಹಾಗೂ ಮೈ ಮೇಲೆ ನೀರು ಸುರಿದುಕೊಂಡಿದ್ದು ಟೀಕೆಗೆ ಕಾರಣ ಆಗಿದೆ. ಸೋಶಿಯಲ್ ಮೀಡಿಯಾದಲ್ಲಿ ಜನರು ಹಿಗ್ಗಾಮುಗ್ಗಾ ಟ್ರೋಲ್ ಮಾಡುತ್ತಿದ್ದಾರೆ. ಏಪ್ರಿಲ್ 19ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಜಾಸ್ಮಿನ್ ಸ್ಯಾಂಡ್ಲಸ್ ಹಾಡು ಹೇಳುತ್ತಿದ್ದರು. ಲೆಹೆಂಗಾ ಧರಿಸಿ ಮಿಂಚುತ್ತಿದ್ದ ಅವರು, ತಮ್ಮ ಹಿಟ್ ಹಾಡು 'ಶರಾರತ್' ಹಾಡುತ್ತಿದ್ದಾಗ ಹಠಾತ್ತನೆ ಮೈಮೇಲೆ ನೀರು ಸುರಿದುಕೊಂಡಿದ್ದಾರೆ. ಅಷ್ಟೇ ಅಲ್ಲದೆ, ವೇದಿಕೆಯ ಮೇಲೆ ಹಾಡಿನ ಹುಕ್ ಸ್ಟೆಪ್ ಹಾಕುತ್ತಾ ಪ್ರೇಕ್ಷಕರನ್ನು ರಂಜಿಸಲು ಯತ್ನಿಸಿದರು.


ಆದರೆ, ಅವರ ಈ ಓವರ್ ಆಯಕ್ಟಿಂಗ್ ನೋಡಿ ಜನರಿಗೆ ಕಿರಿಕಿರಿ ಆಗಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೋ ಗಮನಿಸಿದರೆ ಒಂದು ಹಂತದಲ್ಲಿ ಜಾಸ್ಮಿನ್ ಸ್ಯಾಂಡ್ಲಸ್ ಅವರು ಮೈಕ್ ಕೆಳಗೆ ಇಳಿಸಿದರೂ ಹಿನ್ನೆಲೆಯಲ್ಲಿ ಹಾಡು ಪ್ಲೇ ಆಗುತ್ತಿರುವುದು ಕಂಡುಬಂದಿದೆ. ಇದು ಲಿಪ್ ಸಿಂಕ್ ಎಂಬುದು ಸ್ಪಷ್ಟವಾಗಿ ಗೊತ್ತಾಗಿದೆ. ಆದ್ದರಿಂದ ನೆಟ್ಟಿಗರು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. 'ಲೈವ್ ಕಾನ್ಸರ್ಟ್‌ನಲ್ಲೂ ಇವರು ಲೈವ್ ಆಗಿ ಹಾಡುವುದಿಲ್ಲ' ಎಂದು ಟೀಕಿಸಲಾಗಿದೆ. 'ಇವರನ್ನು ಹಾಡಲು ಕರೆಸಿದ್ದಾರೋ ಅಥವಾ ನಟನೆ ಮಾಡಲು ಕರೆಸಿದ್ದಾರೋ' ಎಂದು ನೆಟ್ಟಿಗರೊಬ್ಬರು ಪ್ರಶ್ನಿಸಿದ್ದಾರೆ. 'ಕೇವಲ ಎರಡು ಹಾಡುಗಳು ಹಿಟ್ ಆದ ಕೂಡಲೇ ಇವರ ಅತಿರೇಕದ ವರ್ತನೆ ಜಾಸ್ತಿಯಾಗಿದೆ' ಎಂಬ ಟೀಕೆ ಕೂಡ ಬಂದಿದೆ. ಇಷ್ಟೆಲ್ಲ ಟೀಕೆಗಳ ನಡುವೆಯೂ ಜಾಸ್ಮಿನ್ ಸ್ಯಾಂಡ್ಲಸ್ ಅವರ ಅಪ್ಪಟ ಅಭಿಮಾನಿಗಳು ಅವರ ಪರವಾಗಿಯೇ ಕಮೆಂಟ್ ಮಾಡಿದ್ದಾರೆ.



# ಮತ್ತೆ ಒಂದಾಗಲಿದ್ದಾರಾ ಶಾರುಖ್, ಅಟ್ಲಿ


ನಿರ್ದೇಶಕ ಅಟ್ಲಿ ಅವರಿಗೆ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬೇಡಿಕೆ ಇದೆ. ಅವರ ಜೊತೆ ಮತ್ತೆ ಕೆಲಸ ಮಾಡಲು ಶಾರುಖ್ ಖಾನ್ ಆಸಕ್ತಿ ತೋರಿಸಿದ್ದಾರೆ ಎಂಬ ಮಾಹಿತಿ ಕೇಳಿಬಂದಿದೆ. ಅಟ್ಲಿ ಮತ್ತು ಶಾರುಖ್ ಖಾನ್ ಅವರು 'ಜವಾನ್ 2' ಸಿನಿಮಾಗಾಗಿ ತಯಾರಿ ನಡೆಸುತ್ತಿದ್ದಾರೆ ಎಂದು ವರದಿ ಆಗಿದೆ. ಬಾಲಿವುಡ್ ನಟ ಶಾರುಖ್ ಖಾನ್ ಸದ್ಯ ಸತತ ಗೆಲುವಿನ ಅಲೆಯಲ್ಲಿ ತೇಲುತ್ತಿದ್ದಾರೆ. 2024ರಲ್ಲಿ ತೆರೆಕಂಡ 'ಪಠಾಣ್' ಸಿನಿಮಾ ವಿಶ್ವದಾದ್ಯಂತ 1055 ಕೋಟಿ ರೂಪಾಯಿ ಗಳಿಸಿ ದಾಖಲೆ ಬರೆಯಿತು. ಅದರ ಬೆನ್ನಲ್ಲೇ ಬಂದ 'ಜವಾನ್' ಸಿನಿಮಾ 1100 ಕೋಟಿ ರೂಪಾಯಿಗೂ ಅಧಿಕ ಕಲೆಕ್ಷನ್ ಮಾಡಿ ಬಾಕ್ಸ್ ಆಫೀಸ್‌ನಲ್ಲಿ ಧೂಳೆಬ್ಬಿಸಿತ್ತು. ಈಗ ಬರುತ್ತಿರುವ ಲೇಟೆಸ್ಟ್ ವರದಿಗಳ ಪ್ರಕಾರ, 'ಜವಾನ್' ಚಿತ್ರದ ನಿರ್ದೇಶಕ ಅಟ್ಲಿ ಮತ್ತು ಶಾರುಖ್ ಖಾನ್ ಅವರು 'ಜವಾನ್ 2 ಚಿತ್ರಕ್ಕಾಗಿ ಮತ್ತೆ ಕೈಜೋಡಿಸಲು ಸಜ್ಜಾಗಿದ್ದಾರೆ. 'ಇಂಡಿಯಾ ಟುಡೇ' ವರದಿಯ ಪ್ರಕಾರ, 'ಜವಾನ್ 2' ಚಿತ್ರದ ಕಥೆ ಮತ್ತು ಐಡಿಯಾ ಬಗ್ಗೆ ಕಳೆದ ಕೆಲವು ಸಮಯದಿಂದ ಕೆಲಸ ನಡೆಯುತ್ತಿತ್ತು. ಕೆಲವು ವಾರಗಳ ಹಿಂದೆಯಷ್ಟೇ ಚಿತ್ರದ ಸ್ಕ್ರಿಪ್ಟ್ ಅಂತಿಮಗೊಂಡಿದೆ ಎಂದು ಮೂಲಗಳು ತಿಳಿಸಿವೆ. ಶಾರುಖ್ ಖಾನ್ ಸದ್ಯ ಬಹುನಿರೀಕ್ಷಿತ 'ಕಿಂಗ್' ಸಿನಿಮಾದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದು, ಈ ಸಿನಿಮಾ ಮುಗಿದ ನಂತರ ಅಟ್ಲಿ ನಿರ್ದೇಶನದ 'ಜವಾನ್ 2' ಕೆಲಸಗಳನ್ನು ಆರಂಭಿಸಲಿದ್ದಾರೆ ಎನ್ನಲಾಗಿದೆ. 'ಜವಾನ್' ಸಿನಿಮಾದಲ್ಲಿ ತಮಿಳು ನಟ ವಿಜಯ್ ಸೇತುಪತಿ ವಿಲನ್ ಆಗಿ ಅಬ್ಬರಿಸಿದ್ದರು. ಈಗ ಸೀಕ್ವೆಲ್‌ಗಾಗಿ ಅಟ್ಲಿ ಅವರು ಮತ್ತೊಬ್ಬ ದಕ್ಷಿಣ ಭಾರತದ ಖ್ಯಾತ ನಟನನ್ನು ಖಳನಾಯಕನನ್ನಾಗಿ ಕರೆತರಲು ಆಲೋಚಿಸಿದ್ದಾರೆ. 'ತಂಡವು ದಕ್ಷಿಣದ ಒಬ್ಬ ದೊಡ್ಡ ಸ್ಟಾರ್ ನಟನನ್ನು ವಿಲನ್ ಪಾತ್ರಕ್ಕೆ ಆಯ್ಕೆ ಮಾಡಲು ಹುಡುಕಾಟ ನಡೆಸುತ್ತಿದೆ' ಎಂದು ಹೇಳಿವೆ.





# ನನಗೆ ಆ ರೀತಿ ಮೀಸೆ ಬರಲ್ಲ

ಬಾಲಿವುಡ್‌ನ ಖ್ಯಾತ ನಟ ಅಕ್ಷಯ್ ಕುಮಾರ್ ಅವರು ತಮ್ಮ ವೃತ್ತಿಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದಾರೆ. 2022ರಲ್ಲಿ ತೆರೆಕಂಡ, ಐತಿಹಾಸಿಕ ಕಥಾಹಂದರದ 'ಸಾಮ್ರಾಟ್ ಪೃಥ್ವಿರಾಜ್' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಮಕಾಡೆ ಮಲಗಿತ್ತು. ಆ ಸಮಯದಲ್ಲಿ ಚಿತ್ರಕ್ಕಿಂತ ಹೆಚ್ಚಾಗಿ ಅಕ್ಷಯ್ ಕುಮಾರ್ ಧರಿಸಿದ್ದ ನಕಲಿ ಮೀಸೆ ಭಾರಿ ಟೀಕೆಗೆ ಗುರಿಯಾಗಿತ್ತು. ಈಗ ಸುಮಾರು 4 ವರ್ಷಗಳ ನಂತರ ಅಕ್ಷಯ್ ಈ ಬಗ್ಗೆ ಮೊದಲ ಬಾರಿಗೆ ಪ್ರತಿಕ್ರಿಯಿಸಿದ್ದಾರೆ. ಶುಭಂಕರ್ ಮಿಶ್ರಾ ಅವರ ಯೂಟ್ಯೂಬ್ ಚಾನೆಲ್‌ನ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಅಕ್ಷಯ್, ನಕಲಿ ಮೀಸೆ ಬಳಸಲು ಇದ್ದ ಅಸಲಿ ಕಾರಣವನ್ನು ಬಹಿರಂಗಪಡಿಸಿದ್ದಾರೆ. ಸಿನಿಮಾಕ್ಕಾಗಿ ಅಕ್ಷಯ್ ಕುಮಾರ್ ಹೆಚ್ಚು ಸಮಯ ಮೀಸಲಿಡುವುದಿಲ್ಲ ಎಂಬ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಏಕಕಾಲಕ್ಕೆ ಹಲವು ಸಿನಿಮಾಗಳಲ್ಲಿ, ಹಲವು ಲುಕ್‌ಗಳಲ್ಲಿ ಕೆಲಸ ಮಾಡುತ್ತಿರುತ್ತೇನೆ. ಉದಾಹರಣೆಗೆ, ಈಗ ನಾನು ಗಡ್ಡ ಬಿಟ್ಟಿದ್ದೇನೆ. ಇದನ್ನು ಬೆಳೆಸಲು ನನಗೆ ಆರು ವಾರಗಳು ಬೇಕಾಯಿತು ಮತ್ತು ಆ ಸಮಯದಲ್ಲಿ ನಾನು ಯಾವುದೇ ಕೆಲಸ ಮಾಡಲಿಲ್ಲ' ಎಂದು ಸ್ಪಷ್ಟನೆ ನೀಡಿದರು. ಮುಂದುವರಿದು ಮಾತನಾಡಿದ ಅವರು, 'ಸಾಮ್ರಾಟ್ ಪೃಥ್ವಿರಾಜ್ ಸಿನಿಮಾದ ಕಥೆಗೆ ಒಂದು ವಿಶಿಷ್ಟವಾದ ಮೀಸೆಯ ಅವಶ್ಯಕತೆಯಿತ್ತು. ಆದರೆ ಅಂತಹ ಮೀಸೆ ನನ್ನ ಮುಖದ ಮೇಲೆ ಸಹಜವಾಗಿ ಬೆಳೆಯಲು ಸಾಧ್ಯವಿರಲಿಲ್ಲ. ಹಾಗಾಗಿ ನಕಲಿ ಮೀಸೆ ಬಳಸಬೇಕಾಯಿತು. ಅದು ನೋಡಲು ಚೆನ್ನಾಗಿರಲಿಲ್ಲ ಅಥವಾ ಜನರಿಗೆ ಇಷ್ಟವಾಗಿಲ್ಲದಿರಬಹುದು. ಆದರೆ ಅಂತಿಮವಾಗಿ ಇದು ಕೇವಲ ಅಭಿನಯವಷ್ಟೇ' ಎಂದಿದ್ದಾರೆ. ಚಿತ್ರದ ಲುಕ್ ಬಗ್ಗೆ ಅಸಮಾಧಾನಗೊಂಡಿದ್ದ ಅಭಿಮಾನಿಗಳ ಬಗ್ಗೆ ಅಕ್ಷಯ್ ಕುಮಾರ್ ಬೇಸರ ವ್ಯಕ್ತಪಡಿಸಿದರು. 'ಒಂದೊಮ್ಮೆ ಜನರಿಗೆ ಆ ಲುಕ್ ಇಷ್ಟವಾಗದಿದ್ದರೆ ನಾನು ಕ್ಷಮೆ ಕೇಳುತ್ತೇನೆ. ಎಂದರು.




# ಬಾಡಿಗೆ ಕಟ್ಟಲಾಗದೇ ಕೊಹ್ಲಿ ಒಡೆತನದಲ್ಲಿದ್ದ ಬ್ರ್ಯಾಂಡ್ ರೆಸ್ಟೋರೆಂಟ್ ಬಂದ್!

ಬೆಂಗಳೂರಿನ ಕ್ರಿಕೆಟ್ ಪ್ರೇಮಿಗಳ ಹಾಟ್ ಫೇವರೆಟ್ ಆಗಿದ್ದ ವಿರಾಟ್ ಕೊಹ್ಲಿ ಸಹ-ಮಾಲೀಕತ್ವದ 'ಒನ್8 ಕಮ್ಯೂನ್' ರೆಸ್ಟೋರೆಂಟ್ ಈಗ ಇತಿಹಾಸದ ಪುಟ ಸೇರಿದೆ. ಕಳೆದ ಹಲವು ತಿಂಗಳಿಂದ ಕೋಟ್ಯಂತರ ರೂಪಾಯಿ ಬಾಡಿಗೆ ಬಾಕಿ ಉಳಿಸಿಕೊಂಡಿದ್ದ ಹಿನ್ನೆಲೆಯಲ್ಲಿ, ನ್ಯಾಯಾಲಯದ ಆದೇಶದಂತೆ ಈ ಐಷಾರಾಮಿ ರೆಸ್ಟೋರೆಂಟ್ ಅನ್ನು ಶಾಶ್ವತವಾಗಿ ಸ್ಥಗಿತಗೊಳಿಸಲಾಗಿದೆ. ಸಿಲಿಕಾನ್ ಸಿಟಿಯ ಪ್ರತಿಷ್ಠಿತ ಕಸ್ತೂರ್‌ಬಾ ರಸ್ತೆಯಲ್ಲಿದ್ದ ಟೀಮ್ ಇಂಡಿಯಾ ಸ್ಟಾರ್ ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರ ಒಡೆತನದ (ಹಿಂದಿನ ಪಾಲುದಾರಿಕೆ) 'ಒನ್8 ಕಮ್ಯೂನ್' ರೆಸ್ಟೋರೆಂಟ್ ಅನ್ನು ಮುಚ್ಚಲಾಗಿದೆ. ಸುಮಾರು 2 ಕೋಟಿಗೂ ಅಧಿಕ ಬಾಡಿಗೆ ಬಾಕಿ ಉಳಿಸಿಕೊಂಡ ಹಿನ್ನೆಲೆಯಲ್ಲಿ ಕೋರ್ಟ್ ಆದೇಶದ ಮೇರೆಗೆ ಈ ಜನಪ್ರಿಯ ಹ್ಯಾಂಗೌಟ್ ತಾಣಕ್ಕೆ ಈಗ ಬೀಗ ಬಿದ್ದಿದೆ.

**ಬಾಡಿಗೆ ಬಾಕಿ ಮತ್ತು ಕೋರ್ಟ್ ಆದೇಶ:**

ಕಸ್ತೂರ್‌ಬಾ ರಸ್ತೆ ರಸ್ತೆಯಲ್ಲಿರುವ ರತ್ನಂ ಕಾಂಪ್ಲೆಕ್ಸ್‌ನಲ್ಲಿ ಈ ರೆಸ್ಟೋರೆಂಟ್ ಕಾರ್ಯನಿರ್ವಹಿಸುತ್ತಿತ್ತು. ಆದರೆ, ರೆಸ್ಟೋರೆಂಟ್ ನಡೆಸುತ್ತಿದ್ದ 'ಟ್ರಿಯೊ ಹಿಲ್ಸ್ ಹಾಸ್ಪಿಟಾಲಿಟಿ' ಸಂಸ್ಥೆಯು ಕಳೆದ ಸುಮಾರು ಆರು ತಿಂಗಳಿನಿಂದ ಕಟ್ಟಡದ ಮಾಲೀಕರಿಗೆ ಬಾಡಿಗೆ ಪಾವತಿಸಿರಲಿಲ್ಲ. ಈ ಬಾಕಿ ಮೊತ್ತ ಸುಮಾರು 2 ಕೋಟಿಗೂ ಹೆಚ್ಚು ದಾಟಿತ್ತು ಎನ್ನಲಾಗಿದೆ. ಮಾಲೀಕರು ಸಿವಿಲ್ ಕೋರ್ಟ್ ಮೊರೆ ಹೋದ ನಂತರ, ನ್ಯಾಯಾಲಯವು ರೆಸ್ಟೋರೆಂಟ್ ಅನ್ನು ತೆರವುಗೊಳಿಸುವಂತೆ ಆದೇಶ ನೀಡಿತು.



# ಅಭಿಷೇಕ್ ಹೆಸರಿಗೆ ಭರ್ಜರಿ ದಾಖಲೆ

ಟಿ20 ಕ್ರಿಕೆಟ್‌ನಲ್ಲಿ ಅಭಿಷೇಕ್ ಶರ್ಮಾ ಹೊಸ ವಿಶ್ವದಾಖಲೆ ನಿರ್ಮಿಸಿದ್ದಾರೆ. ಅದು ಸಹ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಭರ್ಜರಿ ಸೆಂಚುರಿ ಸಿಡಿಸುವ ಮೂಲಕ. ಈ ಶತಕದೊಂದಿಗೆ ಕ್ರಿಸ್ ಗೇಲ್ ಹೆಸರಿನಲ್ಲಿದ್ದ ಭರ್ಜರಿ ದಾಖಲೆಯೊಂದನ್ನು ಅಭಿಷೇಕ್ ಶರ್ಮಾ ಅಳಿಸಿ ಹಾಕಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅಭಿಷೇಕ್ ಶರ್ಮಾ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಅದು ಕೂಡ ಭರ್ಜರಿ ಶತಕ ಸಿಡಿಸುವ ಮೂಲಕ. ಈ ಸೆಂಚುರಿಯೊಂದಿಗೆ ಐಪಿಎಲ್‌ನಲ್ಲಿ ಯಾರಿಂದಲೂ ಸಾಧ್ಯವಾಗದ ವಿಶೇಷ ದಾಖಲೆಯೊಂದು ಅಭಿಷೇಕ್ ಪಾಲಾಗಿದೆ. ಹೈದರಾಬಾದ್‌ನ ರಾಜೀವ್ ಗಾಂಧಿ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಪರ ಆರಂಭಿಕನಾಗಿ ಕಣಕ್ಕಿಳಿದ ಅಭಿಷೇಕ್ ಶರ್ಮಾ 68 ಎಸೆತಗಳಲ್ಲಿ 10 ಫೋರ್ ಹಾಗೂ 10 ಸಿಕ್ಸರ್ ಜೊತೆಗೆ ಅಜೇಯ 135 ರನ್ ಬಾರಿಸಿದರು.

ಈ 135 ರನ್‌ಗಳೊಂದಿಗೆ ಐಪಿಎಲ್ ಇತಿಹಾಸದಲ್ಲಿ ಎರಡು ಬಾರಿ 130+ ಸ್ಕೋರ್ ಗಳಿಸಿದ ಏಕೈಕ ಬ್ಯಾಟರ್ ಎನಿಸಿಕೊಂಡಿದ್ದಾರೆ. ಅಂದರೆ ಐಪಿಎಲ್‌ನಲ್ಲಿ ಯಾವುದೇ ಬ್ಯಾಟರ್ 2 ಬಾರಿ 130+ ರನ್‌ಗಳ ವೈಯಕ್ತಿಕ ಇನಿಂಗ್ಸ್ ಆಡಿಲ್ಲ. ಇದೀಗ ಅಭಿಷೇಕ್ ಶರ್ಮಾ 2 ಶತಕಗಳೊಂದಿಗೆ ಈ ಸಾಧನೆ ಮಾಡಿದ್ದಾರೆ.

ಇದಕ್ಕೂ ಮುನ್ನ ಐಪಿಎಲ್ 2025 ರಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಅಭಿಷೇಕ್ ಶರ್ಮಾ 141 ರನ್‌ಗಳ ಇನಿಂಗ್ಸ್ ಆಡಿದ್ದರು. ಇದೀಗ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 135 ರನ್ ಸಿಡಿಸುವ ಮೂಲಕ ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ಎರಡು ಬಾರಿ 130 ಕ್ಕಿಂತ ಅಧಿಕ ಸ್ಕೋರ್‌ಗಳಿಸಿದ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತೀ ಹೆಚ್ಚು 130+ ಸ್ಕೋರ್ ಗಳಿಸಿದ ಬ್ಯಾಟರ್ ಎಂಬ ವಿಶ್ವದಾಖಲೆಯನ್ನು ಸಹ ಅಭಿಷೇಕ್ ಶರ್ಮಾ ತಮ್ಮದಾಗಿಸಿಕೊಂಡಿದ್ದಾರೆ

ಅಭಿಷೇಕ್ ಈವರೆಗೆ ಟಿ20 ಕ್ರಿಕೆಟ್‌ನಲ್ಲಿ 4 ಬಾರಿ 130+ ಸ್ಕೋರ್‌ಗಳಿಸಿದ್ದಾರೆ. ಈ ಮೂಲಕ ಕ್ರಿಸ್ ಗೇಲ್ (3 ಬಾರಿ) ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು ಅಳಿಸಿ ಹಾಕಿದ್ದಾರೆ.

# ಕೊನೆಗೂ ಮೌನ ಮುರಿದ ಕೃನಾಲ್



ಭಾರತ ಕ್ರಿಕೆಟ್ ಅಲ್ಲಿ ಪಾಂಡ್ಯ ಬ್ರದರ್ಸ್ ಬಗ್ಗೆ ಎಲ್ಲರಿಗೂ ತಿಳಿದೇ ಇದೆ. ಈ ಮೊದಲು ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿ ಇವರು ಒಟ್ಟಾಗಿ ಆಡಿದ್ದರು. ಈಗ ಕೃನಾಲ್ ಬೆಂಗಳೂರು ಪರ ಆಡುತ್ತಿದ್ದರೆ, ಹಾರ್ದಿಕ್ ಮುಂಬೈ ತಂಡದಲ್ಲೇ ಮುಂದುವರಿದಿದ್ದಾರೆ. ಇಬ್ಬರೂ ಬೇರೆ ತಂಡದಲ್ಲಿದ್ದರೂ ಬಾಂಧವ್ಯ ಹಾಗೆಯೇ ಮುಂದುವರಿದಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಇಬ್ಬರ ಮಧ್ಯೆ ಈಗ ಕಿರಿಕ್ ಆಗಿದೆ ಎನ್ನಲಾಗಿದೆ. ಈ ವಿಷಯವಾಗಿ ಕೃನಾಲ್ ಅವರು ಮೌನ ಮುರಿದಿದ್ದಾರೆ. ಹಾರ್ದಿಕ್ ಪಾಂಡ್ಯ ಅವರು ಈ ಮೊದಲು ನತಾಶಾ ಜೊತೆ ವಿವಾಹ ಆಗಿ ವಿಚ್ಛೇದನ ಪಡೆದರು. ಈಗ ಹಾರ್ದಿಕ್ ಅವರು ಮಹಿಕಾ ಶರ್ಮಾ ಜೊತೆ ಸುತ್ತಾಡುತ್ತಿದ್ದಾರೆ. ಮಹಿಕಾ ಸಿಕ್ಕ ಬಳಿಕ ಹಾರ್ದಿಕ್ ವರ್ತನೆಯಲ್ಲಿ ಬದಲಾವಣೆ ಆಗಿದೆ ಎಂದು ವರದಿ ಆಗಿದೆ. ಹಾರ್ದಿಕ್-ಕೃನಾಲ್ ಬೇರೆ ಆಗಲು ಮಹಿಕಾ ಕಾರಣ ಎಂಬ ವದಂತಿಯೂ ಇದೆ. ಈ ಮೊದಲು ಮುಂಬೈ v/s ಆರ್‌ಸಿಬಿ ಪಂದ್ಯದಲ್ಲಿ ಹಾರ್ದಿಕ್ ವಿಕೆಟ್ ಬಿದ್ದಾಗ ಕೃನಾಲ್ ಸಂಭ್ರಮಿಸಿದ್ದರು. ಇದು ಕೂಡ ಚರ್ಚೆಯನ್ನು ಹುಟ್ಟುಹಾಕಿತ್ತು. ಅಭಿಮಾನಿಗಳಲ್ಲಿ ವದಂತಿ ಹೆಚ್ಚುವಂತೆ ಮಾಡಿತ್ತು. ಕೃನಾಲ್ ಅವರು ಈಗ ಆರ್‌ಸಿಬಿ ಇನ್ ಸೈಡರ್ ಮಿಸ್ಟರ್ ನ್ಯಾಗ್ಸ್ ಜೊತೆ ಮಾತನಾಡಿದ್ದಾರೆ. 'ಕಳೆದ ವರ್ಷ ನೀವು ನನಗೆ ಸಂದರ್ಶನ ನೀಡಿಲ್ಲ' ಎಂದು ಮಿಸ್ಟರ್ ನ್ಯಾಗ್ಸ್ ಹೇಳಿದರು. ಇದಕ್ಕೆ ಉತ್ತರಿಸಿದ ಕೃನಾಲ್, 'ನಾನು ಆರ್‌ಸಿಬಿ ಕುಟುಂಬದ ಜೊತೆ ಇದ್ದೆ' ಎಂದರು. 'ನಾನು ಕೂಡ ಆರ್‌ಸಿಬಿ ಕುಟುಂಬದ ಸದಸ್ಯನೇ. ನೀವು ಆರ್‌ಸಿಬಿ ಕುಟುಂಬದ ಜೊತೆ ಇದ್ದಿದ್ದರಿಂದ ಆರ್‌ಸಿಬಿ ಕುಟುಂಬದ ಮತ್ತೊಬ್ಬ ಸದಸ್ಯನ ಭೇಟಿ ಮಾಡಲು ಆಗಿಲ್ಲ ಅಲ್ಲವೇ' ಎಂದು ಮರು ಪ್ರಶ್ನಿಸಿದರು ನ್ಯಾಗ್ಸ್. 'ನಿಮ್ಮ ಕುಟುಂಬದಲ್ಲಿ ಹಲವು ಸದಸ್ಯರು ಇರುತ್ತಾರೆ. ಕೆಲವೊಮ್ಮೆ ಕೆಲವರನ್ನು ಮಿಸ್ ಮಾಡಿಕೊಳ್ಳಬೇಕಾಗುತ್ತದೆ' ಎಂದರು ಕೃನಾಲ್. 'ನಿಮ್ಮ ಸಹೋದರನ ರೀತಿಯಾ' ಎಂದು ನ್ಯಾಗ್ಸ್ ಕೇಳುತ್ತಿದ್ದಂತೆ ಕೃನಾಲ್ ನಕ್ಕರು. 'ಫೈಟ್ ಏನಾದರೂ ನಡೆಯುತ್ತಿದೆಯಾ ದಯವಿಟ್ಟು ಹೇಳಿ. ವ್ರೆಸ್ಲಿಂಗ್‌ನಲ್ಲಿ ಕೇನ್ ಹಾಗೂ ಅಂಡರ್‌ಟೇಕರ್ ಕೂಡ ಫೈಟ್ ಮಾಡಿಕೊಳ್ಳುತ್ತಿದ್ದರು. ನಿಮ್ಮ ಮಧ್ಯೆ ಎಲ್ಲವೂ ಸರಿ ಇದೆಯೇ' ಎಂದು ಕೇಳಿದಾಗ, 'ಆಲ್ ಓಕೆ' ಎಂದು ನಗುತ್ತಲೇ ಹೇಳಿದರು ಕೃನಾಲ್. ಮಾತಿಗಷ್ಟೇ ಕೃನಾಲ್ ಓಕೆ ಅಂದರೇ ಅಥವಾ ನಿಜಕ್ಕೂ ಹಾರ್ದಿಕ್ ಹಾಗೂ ಕೃನಾಲ್ ಮಧ್ಯೆ ಎಲ್ಲವೂ ಸರಿ ಇದೆಯೇ ಎಂಬ ಪ್ರಶ್ನೆ ಮೂಡಿದೆ.

# ಪಾಕಿಸ್ತಾನ್ ಅಭಿಮಾನಿಗಳ ಕ್ಷಮೆಯಾಚಿಸಿದ ಆಟಗಾರ!

ಪಾಕಿಸ್ತಾನ್ ಸೂಪರ್ ಲೀಗ್‌ನಿಂದ ಒಂದು ವರ್ಷದ ನಿಷೇಧಕ್ಕೆ ಒಳಗಾಗಿರುವ ಶ್ರೀಲಂಕಾ ಆಟಗಾರ ದುಸನ್ ಶಾನಕ ಇದೀಗ ಪಾಕ್ ಅಭಿಮಾನಿಗಳ ಕ್ಷಮೆಯಾಚಿಸಿದ್ದಾರೆ. ಕೆಲ ದಿನಗಳ ಹಿಂದೆಯಷ್ಟೇ ಪಿಎಸ್‌ಎಲ್ ಟೂರ್ನಿಯ ಒಪ್ಪಂದ ಉಲ್ಲಂಘಿಸಿದ್ದಕ್ಕಾಗಿ ಶಾನಕ ಅವರ ಮೇಲೆ ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ಒಂದು ವರ್ಷದ ನಿಷೇಧ ಹೇರಿತ್ತು.

ಈ ಬೆಳವಣಿಗೆಯ ಬೆನ್ನಲ್ಲೇ ಲಂಕಾ ಆಟಗಾರ ಇದೀಗ ತಮ್ಮ ನಿರ್ಧಾರಕ್ಕಾಗಿ ಅಧಿಕೃತವಾಗಿ ಕ್ಷಮೆಯಾಚಿಸಿದ್ದಾರೆ. ಪಿಎಸ್‌ಎಲ್ 2026ರಲ್ಲಿ ಲಾಹೋರ್ ಖಲಂದರ್ಸ್ ತಂಡವನ್ನು ಪ್ರತಿನಿಧಿಸಬೇಕಿದ್ದ ದಸುನ್ ಶಾನಕ, ಮಾರ್ಚ್ 21ರಂದು ವೈಯಕ್ತಿಕ ಕಾರಣ ನೀಡಿ ಲೀಗ್‌ನಿಂದ ಹೊರನಡೆದಿದ್ದರು. ಆದರೆ, ಇದರ ಬೆನ್ನಲ್ಲೇ ಅವರು ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಸ್ಯಾಮ್ ಕರನ್ ಅವರ ಬದಲಿ ಆಟಗಾರನಾಗಿ ರಾಜಸ್ಥಾನ್ ರಾಯಲ್ಸ್ ತಂಡವನ್ನು ಸೇರಿಕೊಂಡಿದ್ದರು. ಇದು ತ್ರಿಪಕ್ಷೀಯ ಒಪ್ಪಂದದ ನೇರ ಉಲ್ಲಂಘನೆ ಎಂದು ಪರಿಗಣಿಸಿರುವ ಪಿಸಿಬಿ, ಅವರನ್ನು 2027ರ ಪಾಕಿಸ್ತಾನ್ ಸೂಪರ್ ಲೀಗ್ ಆವೃತ್ತಿಯಿಂದಲೂ ಹೊರಗಿಟ್ಟಿದೆ. ತಮ್ಮ ಮೇಲಿನ ನಿಷೇಧದ ನಂತರ ಪ್ರತಿಕ್ರಿಯಿಸಿರುವ ದಸುನ್ನ ಶಾನಕ, ''ನನ್ನ ನಿರ್ಧಾರದಿಂದ ಪಾಕಿಸ್ತಾನದ ಕ್ರಿಕೆಟ್ ಅಭಿಮಾನಿಗಳಿಗೆ ಮತ್ತು ಲಾಹೋರ್ ಖಲಂದರ್ಸ್ ಮ್ಯಾನೇಜ್‌ಮೆಂಟ್‌ಗೆ ಆಗಿರುವ ನೋವಿಗೆ ನಾನು ಪ್ರಾಮಾಣಿಕವಾಗಿ ಕ್ಷಮೆ ಯಾಚಿಸುತ್ತೇನೆ.

ಆ ಸಮಯದಲ್ಲಿ ಬೇರೆ ಯಾವುದೇ ಟೂರ್ನಿ ಆಡುವ ಉದ್ದೇಶ ನನಗಿರಲಿಲ್ಲ. ಪಾಕಿಸ್ತಾನದ ಬಗ್ಗೆ ನನಗೆ ಅಪಾರ ಗೌರವವಿದ್ದು, ಭವಿಷ್ಯದಲ್ಲಿ ಮತ್ತೆ ಈ ಲೀಗ್‌ನಲ್ಲಿ ಆಡುವ ಆಶಯ ಹೊಂದಿದ್ದೇನೆ'' ಎಂದು ತಿಳಿಸಿದ್ದಾರೆ. ಇದೀಗ ದಸುನ್ ಶಾನಕ ಐಪಿಎಲ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅತ್ತ ಲಾಹೋರ್ ಖಲಂದರ್ಸ್ ತಂಡವು ಶಾನಕ ಅವರ ಬದಲಿಗೆ ಆಸ್ಟ್ರೇಲಿಯಾದ ಆಲ್‌ರೌಂಡರ್ ಡೇನಿಯಲ್ ಸ್ಯಾಮ್ಸ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.



# ಆರ್‌ಸಿಬಿ ವಿರುದ್ಧ ಹೀರೋ ಎಸ್‌ಆರ್‌ಎಚ್ ವಿರುದ್ಧ ಝೀರೋ!



ಮೊದಲ ಎಸೆತದಲ್ಲೇ ಕ್ಲೀನ್ ಬೌಲ್ಡ್

ಆರ್‌ಸಿಬಿ ವಿರುದ್ಧ ಹೀರೋ ಎಸ್‌ಆರ್‌ಎಚ್ ವಿರುದ್ಧ ಝೀರೋ ಹೌದು, ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿ ಹೀರೋ ಎನಿಸಿಕೊಂಡಿದ್ದ ಡೇವಿಡ್ ಮಿಲ್ಲರ್ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಝೀರೋಗೆ ಔಟಾಗಿ ನಿರಾಸೆ ಮೂಡಿಸಿದ್ದಾರೆ. ಹೈದರಾಬಾದ್‌ನ ರಾಜೀವ್ ಗಾಂಧಿ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡವು 20 ಓವರ್‌ಗಳಲ್ಲಿ 242 ರನ್ ಕಲೆಹಾಕಿದ್ದರು. ಈ ಗುರಿಯನ್ನು ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 10 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕಣಕ್ಕಿಳಿದ ಡೇವಿಡ್ ಮಿಲ್ಲರ್ (0) ಈಶಾನ್ ಮಲಿಂಗಾ ಎಸೆದ ಮೊದಲ ಎಸೆತದಲ್ಲೇ ಕ್ಲೀನ್ ಬೌಲ್ಡ್ ಆದರು. ಇದಕ್ಕೂ ಮುನ್ನ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಇದೇ ಮಿಲ್ಲರ್ ವಿಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ರೋಚಕ ಜಯ ತಂದು ಕೊಟ್ಟಿದ್ದರು. ಈ ಪಂದ್ಯದಲ್ಲಿ ಆರ್‌ಸಿಬಿ ನೀಡಿದ 176 ರನ್‌ಗಳ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ತಂಡಕ್ಕೆ ಕೊನೆಯ ಓವರ್‌ನಲ್ಲಿ 15 ರನ್ಗಳ ಅವಶ್ಯಕತೆಯಿತ್ತು. ವೆಸ್ಟ್ ಇಂಡೀಸ್‌ನ ವೇಗಿ ರೊಮಾರಿಯೋ ಶೆಫರ್ಡ್ ಎಸೆದ ಕೊನೆಯ ಓವರ್‌ನ ಮೊದಲ ಎರಡು ಎಸೆತಗಳಲ್ಲಿ ಕೇವಲ 2 ರನ್ ಬಂದವು. ಆದರೆ ಬಳಿಕ ಡೇವಿಡ್ ಮಿಲ್ಲರ್ ಸತತವಾಗಿ 6, 6, 4 ಸಿಡಿಸಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಥ್ರಿಲ್ಲರ್ ಗೆಲುವು ತಂದುಕೊಟ್ಟಿದ್ದರು. ಇದೇ ಕಾರಣದಿಂದಾಗಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಮಿಲ್ಲರ್ ಅವರನ್ನು 5ನೇ ಕ್ರಮಾಂಕದಲ್ಲಿ ಕಣಕ್ಕಿಳಿಸಲಾಗಿತ್ತು. ಆದರೆ ಈ ಬಾರಿ ಗೋಲ್ಡನ್ ಡಕ್‌ಗೆ ಔಟಾಗುವ ಮೂಲಕ ಮಿಲ್ಲರ್ ನಿರಾಸೆ ಮೂಡಿಸಿದ್ದಾರೆ.


**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: **udayavahininews@yahoo.com** , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**